03 December 2025 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 45 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಹಿತಶತ್ರುಗಳಿಗಿಂತ ಶತ್ರುಗಳೇ ವಾಸಿ,
ಅವರು ನಮ್ಮ ಶತ್ರುಗಳು ಅಂತ
ನಿಖರವಾಗಿ ನಮಗೆ ಗೊತ್ತಿರುತ್ತದೆ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಸದಾ ನೆಮ್ಮದಿಯಾಗಿ
ಸಂತಸದಿಂದ
ಬಾಳಬೇಕೆಂದರೆ ಜನರ
ಅರ್ಥಹೀನ
ಮಾತುಗಳನ್ನು
ಕಡೆಗಣಿಸಬೇಕು...
ಮೈಲಾರ ಸಾವಿತ್ರಿಬಾಯಿ

# ಹೈ ಹೇಳಿದಾಗ ಡಿಕೆಶಿ ಸಿಎಂ

## ಸಚಿವ ಸಂಪುಟ ವಿಸ್ತರಣೆಗೆ ತೀರ್ಮಾನ: ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ

**ಬೆಂಗಳೂರು:** ಕಾಂಗ್ರೆಸ್ ಹೈಕಮಾಂಡ್ ಹೇಳಿದಾಗ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಡಿ.ಕೆ.ಶಿವಕುಮಾರ್ ಅವರ ಸದಾಶಿವ ನಗ ರದ ನಿವಾಸದಲ್ಲಿ ಮಂಗಳವಾರ ಬ್ರೇಕ್‌ಫಾಸ್ಟ್ ಮೀಟಿಂಗ್ ಬಳಿಕ ಮಾಧ್ಯಮಗಳ ಜೊತೆ ಮಾತ ನಾಡಿದರು. ಈ ವೇಳೆ ಡಿಕೆಶಿ ಯಾವಾಗ ಸಿಎಂ ಆಗುತ್ತಾರೆ ಎಂಬ ಮಾಧ್ಯಮಗಳ ಪ್ರಶ್ನೆಗೆ ಹೈಕ ಮಾಂಡ್ ಹೇಳಿದಾಗ ಎಂದು ಉತ್ತರ ನೀಡಿದರು. ಹೈಕಮಾಂಡ್ ತೀರ್ಮಾನ ದಂತೆ ಸಂಪುಟ ವಿಸ್ತರಣೆ ಮಾಡುತ್ತೇವೆ. ಸಂಪುಟ ವಿಸ್ತರಣೆ ಬಗ್ಗೆ ಮೊನ್ನೆಯೇ ತೀರ್ಮಾನ ಆಗಿದೆ. ಹೈಕ ಮಾಂಡ್ ಹೇಳಿದಂತೆ ನಡೆದುಕೊಳ್ಳುತ್ತೇವೆ. ರಾಹುಲ್ ಗಾಂಧಿ ಹೇಳಿದಂತೆ ನಡೆದುಕೊಳ್ಳಬೇಕು. ನಾಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣು ಗೋಪಾಲ್ ಮಂಗಳೂರಿಗೆ ಭೇಟಿ ನೀಡುತ್ತಿದ್ದು,

ಪುಟ 2ಕ್ಕೆ





### ನಾನು ನಾನ್ ವೆಜ್, ಡಿಕೆಶಿ ವೆಜ್: ಸಿಎಂ ಸಿದ್ದರಾಮಯ್ಯ

ನಿಮ್ಮ ಮನೆಯ ಬ್ರೇಕ್‌ಫಾಸ್ಟ್ಗೂ ಡಿಕೆಶಿ ಅವರ ನಿವಾಸದ ಬ್ರೇಕ್‌ಫಾಸ್ಟ್ಗೂ ಏನು ವ್ಯತ್ಯಾಸ ಎಂಬ ಪ್ರಶ್ನೆಗೆ ಇವನು ವೆಜಿ ಟೇರಿಯನ್, ನಾನು ನಾನ್ ವೆಜಿಟೇರಿ ಯನ್. ಆದರೆ ಇವತ್ತು ಇವನ ಮನೆ ಯಲ್ಲಿ ನಾನ್‌ವೆಜ್ ಇತ್ತು. ನಮ್ಮ ಮನೆ ಯಲ್ಲಿ ವೆಜ್ ಇತ್ತು. ಇಲ್ಲಿ ಒರಿಜಿನಲ್ ನಾಟಿ ಕೋಳಿ ಸಿಗುವುದಿಲ್ಲ. ಹಳ್ಳಿಯಿಂದ ನಾಟಿಕೋಳಿ ತರಿಸು ಎಂದಿದ್ದೆ ಎಂದು ಸಿದ್ದರಾಮಯ್ಯ ಹೇಳಿದರು.

### ಡಿ.8ಕ್ಕೆ ದೆಹಲಿಯಲ್ಲಿ ಸಭೆ

**ಬೆಂಗಳೂರು:** ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಕಿತ್ತಾಟಕ್ಕೆ ವಿರಾಮ ದೊರೆತ್ತಿರುವ ನಡುವೆಯೇ 2ನೇ ಬಾರಿಗೆ ನಡೆದ 'ಬ್ರೇಕ್‌ಪಾಸ್ಟ್' ರಾಜಕೀಯ ಕುತೂಹಲಕ್ಕೆ ಕಾರಣವಾಯಿತು.

ಸದಾಶಿವನಗರದ ಡಿ.ಕೆ.ಶಿವಕುಮಾರ್ ನಿವಾ ಸದಲ್ಲಿ ಮಂಗಳವಾರ ನಡೆದ ಉಪ ಹಾರ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತ ನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿ.8ರಂದು ಸಂಸದರ ಸಭೆ ಇರುವ ಕಾರಣ ದೆಹಲಿಗೆ ನಾವು ಹೋಗುತ್ತೇವೆ. ಸಮಯ ಸಿಕ್ಕಿದರೆ ಹೈಕಮಾಂಡ್ ಕರೆದರೆ ಭೇಟಿ ಮಾಡುತ್ತೇವೆ ಎಂದು ತಿಳಿಸಿದರು. ನಾನು ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಬ್ರದರ್ಸ್, ಇಬ್ಬರದು ಒಂದೇ ಪಕ್ಷ, ಒಂದೇ ಸಿದ್ಧಾಂತ. ನಾವು ಯಾವಾಗಲೂ ಒಟ್ಟಾಗಿ ಇದ್ದೇವೆ. ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯ ವಿಲ್ಲ. ಪಕ್ಷ ಹಾಗೂ ಸರ್ಕಾರದಲ್ಲಿ ಯಾವುದೇ ಭಿನ್ನಮತವಿಲ್ಲ. ಎಲ್ಲಾ ಶಾಸಕರು ಒಗ್ಗಟ್ಟಾಗಿದ್ದೇವೆ. ಭವಿಷ್ಯದಲ್ಲೂ ಒಗ್ಗಟ್ಟಾಗಿ ಇರ್ತೀವಿ ಎಂದರು. ಡಿಸಿಎಂ ಡಿಕೆ ಶಿವಕುಮಾರ್ ಮಾತನಾಡಿ, ಉಪಹಾರ ಸಭೆಗೆ ಮೊದಲು ನಾನೇ ಸಿಎಂ ಅವರನ್ನು ಆಹ್ವಾನಿಸಿದೆ. ಆದರೆ, ಅವರ ಮನೆಯಲ್ಲಿ ಮೊದಲ ಉಪ ಹಾರ ಸಭೆ ನಡೆಯಿತು. ಇಂದಿನ ಸಭೆಯಲ್ಲಿ ಪಕ್ಷ, ಸರ್ಕಾರ ಹಾಗೂ ಅಧಿವೇಶನದ ಬಗ್ಗೆ ಚರ್ಚೆ ನಡೆದಿದೆ. ಉತ್ತಮ ಆಡಳಿತ ನೀಡಲು ಹಾಗೂ ನಮ್ಮ ರಾಜ್ಯದ ನಿರಂತರ ಅಭಿವೃದ್ಧಿಗೆ ಬದ್ಧರಾಗಿದ್ದೇವೆ ಎಂದು ಪುನರುಚ್ಚರಿಸುತ್ತೇವೆ.

### ರೈತರ ಸಮಸ್ಯೆ ಚರ್ಚೆ

ರಾಜ್ಯದ ರೈತರ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ. ಸರ್ಕಾರ ಯಾವಾಗಲೂ ರೈತರ ಪರವಾಗಿದೆ. ಈ ಬಾರಿ ರೈತರು ಹೆಚ್ಚು ಮೆಕ್ಕೆ ಜೋಳ ಬೆಳೆದಿದ್ದಾರೆ. 54–55 ಲಕ್ಷ ಮೆಟ್ರಿಕ್ ಟನ್ ಮೆಕ್ಕೆ ಜೋಳ ಉತ್ಪಾದನೆ ಆಗಬಹುದು. ಮೆಕ್ಕೆ ಜೋಳಕ್ಕೆ ಕೇಂದ್ರ ಸರ್ಕಾರಕ್ಕೆ 2400 ರೂ. ಕನಿಷ್ಠ ಬೆಂಬಲ ಬೆಲೆ ನಿಗದಿಮಾಡಿದೆ. ಆದರೆ ಮಾರುಕಟ್ಟೆ ಬೇರೆ ಬೇರೆ ಬೆಲೆ ಇದೆ. ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡುವುದು ಕೇಂದ್ರ ಸರ್ಕಾರ. ಅದನ್ನು ನ್ಯಾಯ ಬೆಲೆ ಅಂಗಡಿ ಮೂಲಕ ವಿತರಣೆ ಮಾಡಲು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಹಾಗೆ ಮಾಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

# ರಾಜಕೀಯ ಶಾಶ್ವತ ಅಲ್ಲ!

## ಏನ್ ಆಗುತ್ತೋ ಆಗಲಿ | ಸಿದ್ದರಾಮಯ್ಯ ಅಚ್ಚರಿ ಮಾತು

**ಬೆಂಗಳೂರು:** ರಾಜಕೀಯ ಯಾರಿಗೂ ಶಾಶ್ವತ ಅಲ್ಲ! ನಾನು ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ರಾಜಕೀಯ ಏನು ನಮ್ಮಪ್ಪನ ಆಸ್ತಿಯೇ? ಏನ್ ಆಗುತ್ತೋ ಆಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಚ್ಚರಿ ಮಾತುಗಳನ್ನು ಆಡಿದ್ದಾರೆ.

ವಿಧಾನಸೌಧದಲ್ಲಿ ಮಂಗಳವಾರ ಸಭೆ ಮುಗಿಸಿ ಹೊರಬರುತ್ತಿದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಡ್ಡ ಬಂದು ನಿಂತ ಬೇಳೂರು ಗೋಪಾಲಕೃಷ್ಣ, ಮೊದಲು ಹಾಸ್ಯದ ಲಹರಿಯಲ್ಲಿ ನಾಟಿ ಕೋಳಿ ಸಾಂಬಾರ್ ಹೇಗಿತ್ತು ಸಾರ್? ಎಂದು ಪ್ರಶ್ನಿಸಿದರು. ಆದರೆ ಸಿದ್ದರಾಮಯ್ಯ ಅವರ ಉತ್ತರ ಸಂಪೂರ್ಣ ಗಂಭೀರವಾಗಿತ್ತು.

ರಾಜಕೀಯ ಶಾಶ್ವತ ಅಲ್ಲ ಗೋಪಾಲಕೃಷ್ಣ. ನಾನು ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ರಾಜಕೀಯ ನಮ್ಮಪ್ಪನ ಆಸ್ತಿಯಾ? ಏನ್ ಆಗುತ್ತೋ ಆಗಲಿ ಎಂದು ಅಚ್ಚರಿ ಮಾತುಗಳನ್ನು ಆಡಿದ್ದಾರೆ. ಈ ಒಂದು ಸಣ್ಣ ಸಂಭಾಷಣೆ ರಾಜ್ಯ ರಾಜಕಾರಣದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ.



ಸಚಿವ ಸ್ಥಾನದ ಆಕಾಂಕ್ಷಿಯಾಗಿರುವ ಹಳೇಬೀಡು ಶಾಸಕ ಬೇಳೂರು ಗೋಪಾಲಕೃಷ್ಣ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮಾತನಾಡಿಸಿದ್ದಾರೆ. ಈ ವೇಳೆ ಸಿಎಂ ಸಿದ್ದರಾಮಯ್ಯ ಆಡಿರುವ ಮಾತು ಬಹಳಷ್ಟು ಚರ್ಚೆಗೆ ಕಾರಣವಾಗಿದೆ.

ಡಿಕೆಶಿ ಮನೆಯಲ್ಲಿ ನಡೆದ ಬ್ರೇಕ್‌ಫಾಸ್ಟ್ ಭೇಟಿ, ಅಧಿಕಾರ ಹಂಚಿಕೆ ಯುದ್ಧ, ದೆಹಲಿಯಲ್ಲಿ ನಡೆಯುತ್ತಿರುವ ಸಭೆಗಳು ಎಲ್ಲದರ ನಡುವೆಯೂ ಸಿಎಂ ಸಿದ್ದರಾಮಯ್ಯ ಹೈಕಮಾಂಡ್ ಮಾತೇ ಅಂತಿಮ ಎಂದು ಹೇಳಿದ್ದರು. ಇದೀಗ ಮತ್ತೆ ಅಚ್ಚರಿ ಹೇಳಿಕೆ ಕೊಟ್ಟ ಸಿಎಂ ರಾಜಕೀಯ ಶಾಶ್ವತ ಅಲ್ಲ ಎಂಬ ವೈರಾಗ್ಯದ ಮಾತನಾಡಿದ್ದಾರೆ.

ಸಚಿವ ಸ್ಥಾನಕ್ಕಾಗಿ ತೀವ್ರ ಲಾಬಿ ಮಾಡುತ್ತಿರುವ ಬೇಳೂರು ಗೋಪಾಲಕೃಷ್ಣ ದೆಹಲಿಯಲ್ಲಿಯೂ ಹೈಕಮಾಂಡ್‌ಗೆ ಒತ್ತಡ ಹೇರಿದ್ದರು.


ಆದರೆ ಸಿಎಂ ಅವರ ಈ ಮಾತುಗಳು ಸಚಿವ ಸ್ಥಾನ ಖಾತರಿಯಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ನೀಡಿದರು ಎನ್ನಲಾಗಿದೆ. ಅಲ್ಲದೆ, ಡಿಕೆಶಿಗೆ ಸಿಎಂ ಸ್ಥಾನ ಬಿಟ್ಟು ಕೊಡುವ ಬಗ್ಗೆ ಪರೋಕ್ಷವಾಗಿ ತಿಳಿಸಿದ್ದಾರೆ ಎಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

# ಸ್ಮಾರ್ಟ್ ಮೀಟರ್ ಹಗರಣ ರದ್ದು

## ಇಂಧನ ಸಚಿವ ಕೆ.ಜೆ.ಜಾರ್ಜ್, ಅಧಿಕಾರಿಗಳಿಗೆ ಹೈಕೋರ್ಟ್ ರಿಲೀಫ್

**ಬೆಂಗಳೂರು:** ಸ್ಮಾರ್ಟ್ ಮೀಟರ್ ಟೆಂಡರ್ ಹಗರಣ ಆರೋಪಕ್ಕೆ ಸಂಬಂಧಿಸಿದಂತೆ ಇಂಧನ ಸಚಿವ ಕೆ.ಜೆ.ಜಾರ್ಜ್ ಸೇರಿದಂತೆ ಕೆಲ ಪ್ರಮುಖರ ವಿರುದ್ಧ ದಾಖಲಾಗಿದ್ದ ಖಾಸಗಿ ದೂರುಗಳನ್ನು ಕರ್ನಾಟಕ ಹೈಕೋರ್ಟ್ ರದ್ದುಪಡಿಸಿದೆ.

ಬಿಜೆಪಿ ನಾಯಕರು ದಾಖಲಿಸಿದ್ದ ಪ್ರಕರಣ ರದ್ದುಪಡಿಸಿ ನ್ಯಾ.ಎಂ.ಐ.ಅರುಣ್ ಅವರಿದ್ದ ಹೈಕೋರ್ಟ್ ಪೀಠ ಆದೇಶಿಸಿದೆ. ಆ ಮೂಲಕ ಅಧಿಕಾರಿಗಳಾದ ಗೌರವ್ ಗುಪ್ತಾ, ಮಹಾಂತೇಶ ಬೀಳಗಿ, ಹೆಚ್.ಜೆ.ರಮೇಶ್ ವಿರುದ್ಧದ ಕೇಸ್ ಕೂಡ ರದ್ದಾಗಿದೆ.



ಸ್ಮಾರ್ಟ್ ವಿದ್ಯುತ್ ಮೀಟರ್ ವಿಚಾರದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಇಂಧನ ಇಲಾಖೆ ವಿರುದ್ಧ ಬಿಜೆಪಿ ಸಮರ ಸಾರಿತ್ತು. ಸ್ಮಾರ್ಟ್ ಮೀಟರ್ ಖರೀದಿಯಲ್ಲಿ ಭಾರೀ ಅವ್ಯವಹಾರ ನಡೆದಿದೆ. ಇತರೆ ಕಂಪೆನಿಗಳನ್ನು ಕೈಬಿಟ್ಟು ದಾವಣಗೆರೆ ರಾಜಶ್ರೀ ಎಲೆಕ್ಟ್ರಿಕಲ್ಸ್ ಗೆ ಗುತ್ತಿಗೆ ನೀಡಲಾಗಿದೆ. ಈ ಕಂಪೆನಿಗಾಗಿ ಇತರೆ ಕಂಪೆನಿಗಳು ಟೆಂಡರ್ ನಲ್ಲಿ ಭಾಗವಹಿಸದಂತೆ ನೋಡಿಕೊಳ್ಳಲಾಗಿದೆ ಎಂದು ಬಿಜೆಪಿ ಆರೋಪಿಸಿತ್ತು. ಬೇರೆ ರಾಜ್ಯಗಳಲ್ಲಿ 900 ರೂಪಾಯಿಗೆ ಸಿಗುವ ಸ್ಮಾರ್ಟ್ ಮೀಟರ್ ಅನ್ನು 5 ಸಾವಿರದಿಂದ 10 ಸಾವಿರ ರೂಪಾಯಿಗಳಿಗೆ ಗ್ರಾಹಕರಿಗೆ ನೀಡಲಾಗುತ್ತಿದೆ. ಹೀಗಾಗಿ ಇದೊಂದು ದೊಡ್ಡ ಹಗರಣ ಎಂದು ಆರೋಪಿಸಲಾಗಿತ್ತು.

ಸ್ಮಾರ್ಟ್ ಮೀಟರ್ ಟೆಂಡರ್ ಸುಮಾರ್ 10 ಸಾವಿರ ಕೋಟಿ ರೂಪಾಯಿ ಮೊತ್ತದ್ದಾಗಿರುವ ಕಾರಣ ಜಾಗತಿಕ ಟೆಂಡರ್ ಕರೆಯಬೇಕಿತ್ತು. ಆದರೆ ಕೇವಲ 354 ಕೋಟಿ ರೂ. ವ್ಯವಹಾರ ನಡೆಸುವ ರಾಜಶ್ರೀ ಎಲೆಕ್ಟ್ರಿಕಲ್ಸ್‌ಗೆ ಟೆಂಡರ್ ನೀಡಲಾಗಿದೆ. 10 ವರ್ಷಕ್ಕೆ 5296 ಕೋಟಿ ರೂಪಾಯಿಗೆ ನೀಡಲಾಗಿರುವ ಟೆಂಡರ್ ಅನ್ನು ಬೇಕೆಂದೇ 997 ಕೋಟಿ ರೂ. ಟೆಂಡರ್ ಎಂಬಂತೆ ಬಿಂಬಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಗೆ ಮಾತ್ರ ಈ ಟೆಂಡರ್ ಅನ್ವಯವಾದರೂ ಇತರೆ ಎಸ್ಕಾಂಗಳಿಗೂ ಇದೇ ಸ್ಮಾರ್ಟ್ ಮೀಟರ್ ಖರೀದಿಸಿರುವಂತೆ ಸೂಚಿಸಲಾಗಿದೆ. ಇದು ಸಂಪೂರ್ಣ ಕಾನೂನು ಬಾಹಿರ. ಕೇಂದ್ರದ ಆರ್‌ಡಿಎಸ್‌ಎಸ್ ಯೋಜನೆಯಡಿ 900 ರೂ.ಗೆ ಸಿಗುವ ಮೀಟರ್‌ಅನ್ನು

ಪುಟ 2ಕ್ಕೆ

# ಯಡಿಯೂರಪ್ಪಗೆ ಸುಪ್ರೀಂ ರಿಲೀಫ್

**ನವದೆಹಲಿ:** ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.



ತಮ್ಮ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಗೊಳಿಸಲು ನಿರಾಕರಿಸಿದ ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿದ್ದ ವಿಶೇಷ ರಜೆ ಅರ್ಜಿಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ ಮಲ್ಯ ಅವರನ್ನೊಳಗೊಂಡ ಪೀಠ ವಿಚಾರಣೆ ನಡೆಸಿತು.

**ಪೋಕ್ಸೊ ಪ್ರಕರಣದ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆ**

ಯಡಿಯೂರಪ್ಪ ಅವರು ತಮ್ಮ ಪ್ರಕರಣವನ್ನು ಸಂಪೂರ್ಣವಾಗಿ ಮತ್ತೊಮ್ಮೆ ಹೈಕೋರ್ಟ್ ಮುಂದೆ ಮಂಡಿಸಲು ಸ್ವಾತಂವಿದೆಯೇ? ಎಂಬ ಕುರಿತು ಯಡಿಯೂರಪ್ಪ ಅವರ ಮನವಿಗೆ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೂ ನೋಟಿಸ್ ನೀಡಿದೆ.

ಹೈಕೋರ್ಟ್ ಪೀಠವು ಹಿಂದಿನ ತೀರ್ಪನ್ನು ತಪ್ಪಾಗಿ ಅರ್ಥೈಸಿಕೊಂಡಿದೆ ಮತ್ತು ಅರ್ಜಿಯನ್ನು ಅದರ ಅರ್ಹತೆಯ ಮೇಲೆ ವಿಚಾರಣೆ ಮಾಡಲು ಸಾಧ್ಯವಿಲ್ಲ ಎಂದು ತಪ್ಪಾಗಿ ಅಭಿಪ್ರಾಯಪಟ್ಟಿದೆ. ಆದ್ದರಿಂದ, ಫೆಬ್ರುವರಿ 7ರ ಹಿಂದಿನ ಆದೇಶದಲ್ಲಿ ಅನುಮತಿಸಿದಂತೆ ಅರ್ಜಿದಾರರ ವಿಚಾರಣೆಯ ಹಕ್ಕನ್ನು ಪರಿಗಣಿಸುವ ಸೀಮಿತ ಉದ್ದೇಶಕ್ಕಾಗಿ ಮಾತ್ರ ಪ್ರಕರಣವನ್ನು ಮತ್ತೊಮ್ಮೆ ವಿಚಾರಣೆ ನಡೆಸಲು ನೋಟಿಸ್ ಕಳುಹಿಸುತ್ತಿದೆ ಎಂದು ನ್ಯಾಯಾಲಯ ತಿಳಿಸಿದೆ.

ಯಡಿಯೂರಪ್ಪ ಪರವಾಗಿ ಹಿರಿಯ ವಕೀಲರಾದ ಸಿದ್ಧಾರ್ಥ್ ಲೂತ್ರಾ ಮತ್ತು ಸಿದ್ಧಾರ್ಥ್ ದವೆ ವಾದ ಮಂಡಿಸಿದರು. ಈ ವಿಷಯದಲ್ಲಿ ಕೇವಲ ಹಿಂದಿನ ತೀರ್ಪುಗಳನ್ನು ಪರಿಗಣಿಸುವ ಬದಲು ಹೈಕೋರ್ಟ್ ನಮ್ಮ ವಾದಗಳನ್ನು ಪರಿಗಣಿಸಬೇಕಿತ್ತು ಎಂದು ವಾದಿಸಿದರು. ಪ್ರಕರಣದ ಮೊದಲ ಕಾಗ್ನಿಜೆನ್ಸ್ ಆದೇಶವನ್ನು ರದ್ದುಗೊಳಿಸಿ ಮತ್ತು ವಿಚಾರಣಾ ನ್ಯಾಯಾಲಯ ಈ ವಿಷಯವನ್ನು

ಪುಟ 2ಕ್ಕೆ

### ಹನುಮ ಜಯಂತಿಯಂದೇ ಸಿಎಂ ಕೋಳಿ ಸಾರು ಸೇವನೆ: ಅಶೋಕ್



**ಬೆಂಗಳೂರು:** ಹನುಮ ಜಯಂತಿ ಅಂಗವಾಗಿ ಎಲ್ಲೆಡೆ ಸಂಭ್ರಮದ ಆಚರಣೆ ನಡೆಯುತ್ತಿದ್ದರೆ ಸದಾಶಿವನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಟಿಕೋಳಿ ಸಾರು ಸವಿದಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಈ ಹಿಂದೆ ಮಾಂಸ ಸೇವಿಸಿ ಧರ್ಮಸ್ಥಳಕ್ಕೆ ಭೇಟಿ ನೀಡಿದ್ದರು. ಸಿದ್ದರಾಮಯ್ಯನವರ ಈ ನಡೆಯಿಂದ ಎಲ್ಲ ಹನುಮ ಭಕ್ತರ ಮನಸ್ಸಿಗೆ ನೋವಾಗಿದೆ ಎಂದರು.

ಉಪಾಹಾರ ಕೂಟದ ಪ್ರಹಸನವನ್ನು ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ವೇಣುಗೋಪಾಲ್ ಈ ಪ್ರಹಸನವನ್ನು ನಿರ್ದೇಶನ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರ ರೈತರ ಸಮಸ್ಯೆ ಬಗೆಹರಿಸಿಲ್ಲ. ರಸ್ತೆಗುಂಡಿಗಳನ್ನು ದುರಸ್ತಿ ಮಾಡಿಲ್ಲ. ಆದರೆ ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ತಮ್ಮ ನಡುವಿನ ಸಮಸ್ಯೆ ಬಗೆಹರಿಸಲು ಉಪಾಹಾರ ಸಭೆ ಮಾಡಿದ್ದಾರೆ ಎಂದು ಕಿಡಿಕಾರಿದರು.

ನಾನು ಅಧಿಕಾರ ಒದ್ದು ಕಿತ್ತುಕೊಳ್ಳುತ್ತೇನೆಂದು ಡಿ.ಕೆ.ಶಿವಕುಮಾರ್ ಹೇಳಿದ್ದರು. ಆದರೆ ಈಗ ಅವರು ಉಪಾಹಾರ ಸವಿದಿದ್ದಾರೆ. ಡಾ.ಜಿ.ಪರಮೇಶ್ವರ್ ಬಹಳ ನೋವಿನಿಂದ ಮಾತಾಡಿದ್ದಾರೆ ಎಂದು ಹೇಳಿದರು.

ಬಿಗ್‌ಬಾಸ್‌ನಲ್ಲಿ ವೈಲ್ಡ್ ಕಾರ್ಡ್‌ನಂತೆ ಸತೀಶ್ ಜಾರಕಿಹೊಳಿ ಹಾಗೂ ಡಾ.ಜಿ.ಪರಮೇಶ್ವರ್ ದಲಿತ ಒಡ್‌ನಡಿ ಸಿಎಂ ಆಗಲು ಕಾಯುತ್ತಿದ್ದಾರೆ. ಇಡೀ ಸರ್ಕಾರ ರಿಯಾಲಿಟಿ ಶೋನಂತೆ ಆಗಿದೆ. ಈ ರೀತಿ ಸಭೆ ನಡೆಸುವ ಬದಲು, ತುಂಗಭದ್ರಾ ಜಲಾಶಯದ ಗೇಟ್‌ಗಳನ್ನು ದುರಸ್ತಿ ಮಾಡಿಸಲು 12 ಕೋಟಿ ರೂ. ಬಿಲ್ ಪಾವತಿಸಿದ್ದರೆ ರೈತರಿಗೆ ನೀರಾವರಿ ಲಭ್ಯವಾಗುತ್ತಿತ್ತು ಎಂದರು.

# ಕೇಂದ್ರದಿಂದ ರಾಜ್ಯಕ್ಕೆ 622 ಕೋಟಿ ಬಾಕಿ

**ನವದೆಹಲಿ:** ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ಕರ್ನಾಟಕಕ್ಕೆ 622 ಕೋಟಿ ರೂ. ಬಿಡುಗಡೆ ಮಾಡದೆ ಬಾಕಿ ಇರಿಸಿಕೊಂಡಿದೆ. ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯರ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಉತ್ತರ ನೀಡಿದ್ದಾರೆ. ರಾಜ್ಯಕ್ಕೆ ಕೂಲಿ ಮೊತ್ತ 8.94 ಕೋಟಿ, ಸಾಮಗ್ರಿ ವೆಚ್ಚ 576 ಕೋಟಿ ಹಾಗೂ ಆಡಳಿತಾತ್ಮಕ 37 ಕೋಟಿ ರೂ. ಬಿಡುಗಡೆ ಮಾಡಬೇಕಿದೆ ಎಂದು ಅವರು ತಿಳಿಸಿದರು.



# ಮೂವರು ದಲಿತ ಸಚಿವರು ಔಟ್!

**ಚಾಮರಾಜನಗರ:** ಸಚಿವ ಸಂಪುಟ ಪುನಾರಚನೆ ಆದರೆ ಮುನಿಯಪ್ಪ, ಮಹದೇವಪ್ಪ, ಪರಮೇಶ್ವರ್ ಮತ್ತಿತರರಿಗೆ ಕೊಕ್ ಸಿಗಲಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಬಾಂಬ್ ಸಿಡಿಸಿದ್ದಾರೆ.

**ಮುನಿಯಪ್ಪ, ಪರಮೇಶ್ವರ್, ಮಹದೇವಪ್ಪಗೆ ಕೊಕ್: ಛಲವಾದಿ ಬಾಂಬ್**

ಕೊಳ್ಳೇಗಾಲದಲ್ಲಿ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ದಲಿತರಿಗೆ ಕುರ್ಚಿ ಇಲ್ಲ ಅಂತಾ ಸಾಬೀತಾಗಿದೆ. ದಲಿತರ ಸಮಾಧಿಯನ್ನು ಕಾಂಗ್ರೆಸ್ ಪಾರ್ಟಿ ಸಂಪೂರ್ಣ ಕಟ್ಟಿ ಆಗಿದೆ. ಸಂಪುಟ ಪುನರ್ ರಚನೆಯಾದರೆ ಸಂಪುಟದಿಂದ ಪರಮೇಶ್ವರ್, ಮಹದೇವಪ್ಪ ಹಾಗೂ ಮುನಿಯಪ್ಪ ಮೂವರು ಕೂಡ ಔಟ್ ಆಗುತ್ತಾರೆ. ಮಲ್ಲಿಕಾರ್ಜುನ ಖರ್ಗೆ ಇನ್ನೊಬ್ಬ ದಲಿತರನ್ನು ಸಿಎಂ ಆಗಲೂ ಬಿಡಲ್ಲ. ಸಿಎಂ ಆದರೆ ಪ್ರಿಯಾಂಕ್ ಖರ್ಗೆಗೆ ಮಾತ್ರ ಅವಕಾಶ ಕೊಡುತ್ತಾರೆ ಎಂದು ಆರೋಪಿಸಿದರು.

ಪ್ರಿಯಾಂಕ್ ಖರ್ಗೆ ಅವರನ್ನು ಡಿಸಿಎಂ ಮಾಡುತ್ತಾರೆ. ಎಐಸಿಸಿಯೇ ಹೈಕಮಾಂಡ್ ಆದರೆ ನಾನು ಈ ಕುರ್ಚಿ ಕಿತ್ತಾಟ ಬಗ್ಗೆ ಹೈಕಮಾಂಡ್ ಗಮನಕ್ಕೆ ತರುತ್ತೇನೆ ಅಂತಾರೆ ಎಂದು ಟೀಕಿಸಿದರು.

ಡಿಕೆಶಿ ಯಾವತ್ತೂ ಕೂಡ ಸಿಎಂ ಸಿದ್ದರಾಮಯ್ಯ ಮನೆಗೆ ಹೋಗಿದ್ದವರಲ್ಲ. ಸಿದ್ದರಾಮಯ್ಯ ಕೂಡ ಯಾವತ್ತೂ ಡಿಕೆಶಿಗೆ ಮನೆಗೆ ಹೋಗಿಲ್ಲ. ಅಧಿಕಾರದ ಆಸೆಯಿಂದ ಸಿಎಂ ಕುರ್ಚಿ ಉಳಿಸಿಕೊಳ್ಳಬೇಕು ಅಂತಾ ಡಿಕೆಶಿ ಮನೆಗೆ ಹೋಗಿದ್ದಾರೆಂದು ವ್ಯಂಗ್ಯವಾಡಿದರು. ಬ್ರೇಕ್ ಫಾಸ್ಟ್ ನೆಪಮಾತ್ರ.

ಪುಟ 2ಕ್ಕೆ

# ಒಟ್ಟಾಗಿದ್ದು ಒಳ್ಳೇಯದು: ಪರಂ

**ಬೆಂಗಳೂರು:** ಉಭಯ ನಾಯಕರು ಒಟ್ಟಿಗೆ ಸೇರುವುದು ಒಳ್ಳೆಯದು. ನಮಗೆ ಬೇಕಾಗಿರುವುದು ಅದೇ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.



ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಹಾರ ಸವಿದ ಕುರಿತು ಪ್ರತಿಕ್ರಿಯಿಸಿರುವ ಅವರು, ಕಳೆದೊಂದು ತಿಂಗಳಿನಿಂದ ಏನು ನಡೆಯಿತೋ ಅದನ್ನು ಶಾಂತಿಯುತವಾಗಿ ಇತ್ಯರ್ಥಪಡಿಸಿಕೊಳ್ಳುವುದು. ಎಲ್ಲಾ ಗೊಂದಲಗಳನ್ನು ನಿವಾರಿಸಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ನಾವು ಶಾಸಕಾಂಗ ಪಕ್ಷದ ಸಭೆ ನಡೆಸುತ್ತೇವೆ. ನಂತರ ಒಟ್ಟಿಗೆ ಭೋಜನ ಮಾಡುತ್ತೇವೆ. ಎಲ್ಲವೂ ಸರಾಗವಾಗಿ ನಡೆಯುತ್ತಿದೆ. ವಿಭಿನ್ನ ಜನರು ವಿಭಿನ್ನ ಆಕಾಂಕ್ಷೆಗಳನ್ನು ಹೊಂದಿರುತ್ತಾರೆ. ಅದು ತಪ್ಪೆಂದು ನಾನು ಭಾವಿಸುವುದಿಲ್ಲ. ಸ್ವಾಭಾವಿಕವಾಗಿ, ಸಮಯ ಬಂದಾಗ ಅವರು ತಮ್ಮ ಆಕಾಂಕ್ಷೆಗಳನ್ನು ವ್ಯಕ್ತಪಡಿಸುತ್ತಾರೆ ಎಂದು ಹೇಳಿದರು.


# ದೇಶದಲ್ಲಿ 2 ಹಂತದಲ್ಲಿ ಜನಗಣತಿ

## ಜೊತೆಯಲ್ಲಿಯೇ ಜಾತಿ ಗಣತಿ | ಸಂಸತ್‌ಗೆ ಸಚಿವ ನಿತ್ಯಾನಂದ ರೈ ಮಾಹಿತಿ

**ನವದೆಹಲಿ:** ದೇಶದಲ್ಲಿ ಎರಡು ಹಂತಗಳಲ್ಲಿ ಜನಗಣತಿ ನಡೆಸಲಾಗುವುದು. 2026ರ ಏಪ್ರಿಲ್‌ನಿಂದ ಸೆಪ್ಟೆಂಬರ್ ವರೆಗೆ ಮೊದಲ ಹಂತದಲ್ಲಿ ಮತ್ತು ಫೆಬ್ರವರಿ 2027ರಲ್ಲಿ 2ನೇ ಹಂತದಲ್ಲಿ ಜನಗಣತಿನಡೆಸಲಾಗುವುದು ಎಂದು ಸಚಿವ ನಿತ್ಯಾನಂದ ರೈ ಮಂಗಳವಾರ ಲೋಕಸಭೆಗೆ ತಿಳಿಸಿದರು.



ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರು, ಎರಡು ಹಂತಗಳಲ್ಲಿ ಜನಗಣತಿ ನಡೆಸಲಾಗುವುದು. ಹಂತ 1ರಲ್ಲಿ ಮನೆ ಪಟ್ಟಿ ಮತ್ತು ವಸತಿ ಗಣತಿ ನಂತರ ಹಂತ 2ರಲ್ಲಿ ಜನಸಂಖ್ಯಾ ಎಣಿಕೆ ನಡೆಯಲಿದೆ ಎಂದು ಹೇಳಿದರು.



ಜನಗಣತಿಯು 150 ವರ್ಷಗಳಿಗೂ ಹೆಚ್ಚಿನ ಇತಿಹಾಸವನ್ನು ಹೊಂದಿದೆ ಮತ್ತು ಹಿಂದಿನ ಕಾರ್ಯಗಳಿಂದ ಕಲಿತದ್ದನ್ನು ಮುಂದಿನ ಜನಗಣತಿಯನ್ನು ನಡೆಸಲು ಪರಿಗಣಿಸಲಾಗಿದೆ. ಜನಗಣತಿ ಪ್ರಶ್ನಾವಳಿಯನ್ನು ಪ್ರತಿ ಕಾರ್ಯಕ್ಕೂ ಮೊದಲು ವಿವಿಧ ಸಚಿವಾಲಯಗಳು, ಇಲಾಖೆಗಳು, ಸಂಸ್ಥೆಗಳು ಮತ್ತು ಜನಗಣತಿ ದತ್ತಾಂಶ ಬಳಕೆದಾರರಿಂದ ಬರುವ ಒಳಹರಿವು ಮತ್ತು ಸಲಹೆಗಳ ಆಧಾರದ ಮೇಲೆ ಅಂತಿಮಗೊಳಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಪ್ರತ್ಯೇಕ ಪ್ರಶ್ನೆಯಲ್ಲಿ, ಈ ವರ್ಷ ಏಪ್ರಿಲ್ 30 ರಂದು ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿ ನಿರ್ಧರಿಸಿದಂತೆ ಜನಗಣತಿಯಲ್ಲಿ

ಪುಟ 2ಕ್ಕೆ

# ವಿದ್ಯುತ್ ಕಾಯ್ದೆ ತಿದ್ದುಪಡಿ: ಸುಧಾರಣೆಯೋ, ಸವಾಲೋ?

2003ರಲ್ಲಿ ಜಾರಿಗೆ ಬಂದ ವಿದ್ಯುತ್ ಕಾಯ್ದೆ ದೇಶದ ವಿದ್ಯುತ್ ಕ್ಷೇತ್ರಕ್ಕೆ ಪಾರದರ್ಶಕತೆ ಮತ್ತು ಕಾರ್ಯಕ್ಷಮತೆ ತರಬೇಕೆಂದು ಉದ್ದೇಶಿಸಿತ್ತು. ಇಂದಿಗೆ ಎರಡು ದಶಕಗಳ ನಂತರ, ಕೇಂದ್ರ ಸರ್ಕಾರವು ವಿದ್ಯುತ್ ಕಾಯ್ದೆ ತಿದ್ದುಪಡಿ 2025 ಮೂಲಕ ಮತ್ತೊಂದು ಮಹತ್ವಾಕಾಂಕ್ಷಿ ಹೆಜ್ಜೆ ಇಟ್ಟಿದೆ. ಈ ಬಿಲ್ ಸರ್ಕಾರಿ ಏಕಸ್ವಾಮ್ಯವನ್ನು ಕಡಿಮೆ ಮಾಡಿ, ಗ್ರಾಹಕರಿಗೆ ಆಯ್ಕೆ ನೀಡಲು, ಖಾಸಗಿ ಬಂಡವಾಳವನ್ನು ಆಕರ್ಷಿಸಲು ಮತ್ತು ದೀರ್ಘಕಾಲದಿಂದಲೂ ನಷ್ಟದಲ್ಲಿರುವ ವಿದ್ಯುತ್ ಕ್ಷೇತ್ರಕ್ಕೆ ಹೊಸ ಜೀವ ತುಂಬಲು ಪ್ರಯತ್ನಿಸುತ್ತಿದೆ.

**ಕ್ರಾಸ್ ಸಬ್ಸಿಡಿ ? ಕೈಗಾರಿಕೆಯ ಹೊರೆ ಕಡಿತ**

ಇಷ್ಟು ವರ್ಷ ಕೈಗಾರಿಕೆ ಮತ್ತು ವಾಣಿಜ್ಯ ಬಳಕೆದಾರರು ಕೃಷಿ ಮತ್ತು ಗೃಹ ಬಳಕೆದಾರರಿಗೆ ಉಚಿತ/ಕಡಿಮೆ ದರದ ವಿದ್ಯುತ್ ನೀಡಲು ಹೆಚ್ಚುವರಿ ದರ ಪಾವತಿಸುತ್ತಿದ್ದರು. ಇದರಿಂದ ಉತ್ಪಾದನಾ ವೆಚ್ಚ ಹೆಚ್ಚಾಗಿ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತಿರಲಿಲ್ಲ. ಹೊಸ ಬಿಲ್ ಈ ಅಸಮತೋಲನವನ್ನು ಕಡಿಮೆ ಮಾಡಲು cost-reflective tariff ವ್ಯವಸ್ಥೆಯನ್ನು ಕಡ್ಡಾಯಗೊಳಿಸಿದೆ. ಕೈಗಾರಿಕೆಗಳಿಗೆ ಇದು ದೊಡ್ಡ ನೆರವು.



**ಗ್ರಾಹಕರಿಗೆ ಆಯ್ಕೆ ? ಕ್ರಾಂತಿಕಾರಿ ಹೆಜ್ಜೆ**

ಈ ಬಿಲ್ನ ಅತ್ಯಂತ ಗಮನಾರ್ಹ ಅಂಶವೆಂದರೆ ಗ್ರಾಹಕರಿಗೆ ನೀಡಲಾಗಿರುವ ಆಯ್ಕೆ. ಮೊಬೈಲ್ ಸೇವೆಗಳಂತೆ, ಮನೆಮಂದಿ ಮತ್ತು ಕೈಗಾರಿಕೆಗಳು ಸರ್ಕಾರಿ ಅಥವಾ ಖಾಸಗಿ ಯಾವುದೇ ಕಂಪನಿಯಿಂದ ವಿದ್ಯುತ್ ಪಡೆಯಲು ಅವಕಾಶ. ಇದರಿಂದ ದಶಕಗಳಿಂದಲೂ ರಾಜ್ಯ ಸರ್ಕಾರದ ವಿತರಣಾ ಕಂಪನಿಗಳು ನಡೆಸುತ್ತಿದ್ದ ಏಕಸ್ವಾಮ್ಯಕ್ಕೆ ಅಂತ್ಯ ಬರುವ ಸಾಧ್ಯತೆ. ಸ್ಪರ್ಧೆ ಹೆಚ್ಚಿದರೆ ಸೇವೆಯ ಗುಣಮಟ್ಟ ಮತ್ತು ಹೊಣೆಗಾರಿಕೆ ಹೆಚ್ಚುವ ನಿರೀಕ್ಷೆ.

**ಹೊಸ ಕೇಂದ್ರ–ರಾಜ್ಯ ಸಮನ್ವಯ**

ಜಿಎಸ್ಟಿ ಮಂಡಳಿಯ ಮಾದರಿಯಲ್ಲಿ Electricity Council ರಚನೆಯಾಗಲಿದೆ. ಇದರಿಂದ ರಾಜ್ಯಗಳ ಏಕಪಕ್ಷೀಯ ಹಿಡಿತ ಕಡಿಮೆಯಾಗುತ್ತದೆ. ವಿತರಣಾ ಕಂಪನಿಗಳು ದರ ಪರಿಷ್ಕರಣೆಗೆ ಅರ್ಜಿ ಸಲ್ಲಿಸದಿದ್ದರೆ, ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗಗಳು (SERCs) ಸ್ವಯಂ ಪ್ರೇರಣೆಯಿಂದ ದರ ನಿಗದಿ ಮಾಡಬಹುದು. ಕರ್ನಾಟಕದಲ್ಲಿ ಕೃಷಿ ಪಂಪ್‌ಸೆಟ್ಗಳಿಗೆ

ಪುಟ 2ಕ್ಕೆ

## ಮೊದಲ ಪುಟದಿಂದ

### ದೇಶದಲ್ಲಿ 2 ಹಂತದಲ್ಲಿ ಜನಗಣತಿ

ಜಾತಿ ಎಣಿಕೆಯನ್ನು ಸಹ ಮಾಡಲಾಗುತ್ತದೆ. 2027ರ ಜನಗಣತಿಯನ್ನು ಡಿಜಿಟಲ್ ವಿಧಾನಗಳ ಮೂಲಕ ನಡೆಸಲಾಗುವುದು. ಇದರಲ್ಲಿ ಸ್ವಯಂ ಎಣಿಕೆಗಾಗಿ ಆನ್‌ಲೈನ್ ನಿಬಂಧನೆಯೊಂದಿಗೆ ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕ ಡೇಟಾವನ್ನು ಸಂಗ್ರಹಿಸಲಾಗುವುದು ಎಂದು ಸಚಿವರು ತಿಳಿಸಿದರು.

ಏಪ್ರಿಲ್ ನಿಂದ ಸೆಪ್ಟೆಂಬರ್ 2026 ರವರೆಗಿನ ಮೊದಲ ಹಂತವನ್ನು ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಅನುಕೂಲಕ್ಕೆ ಅನುಗುಣವಾಗಿ 30 ದಿನಗಳ ಅವಧಿಯಲ್ಲಿ ನಡೆಸಲಾಗುವುದು. ಲಡಾಖ್ ಕೇಂದ್ರಾಡಳಿತ ಪ್ರದೇಶ ಮತ್ತು ಜಮ್ಮು ಮತ್ತು ಕಾಶ್ಮೀರ ಹಾಗೂ ಹಿಮಾಚಲ ಪ್ರದೇಶ, ಉತ್ತರಾಖಂಡ ರಾಜ್ಯಗಳ ಹಿಮದಿಂದ ಆವೃತವಲ್ಲದ ಪ್ರದೇಶಗಳನ್ನು ಹೊರತುಪಡಿಸಿ, ಇತರ ಪ್ರದೇಶಗಳಲ್ಲಿ ಫೆಬ್ರವರಿ 2027ರಲ್ಲಿ ನಡೆಯಲಿದೆ. ಅಲ್ಲಿ ಇದನ್ನು ಸೆಪ್ಟೆಂಬರ್ 2026ರಲ್ಲಿ ನಡೆಸಲಾಗುವುದು ಎಂದು ಹೇಳಿದರು.

### ಹೈ ಹೇಳಿದಾಗ ಡಿಕೆಶಿ, ಸಿಎಂ

ಅವರನ್ನು ಭೇಟಿಯಾಗುತ್ತೇನೆ. ಹೈಕಮಾಂಡ್ ಯಾವಾಗಲೂ ಕರೆದರೂ ಹೋಗುತ್ತೇವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಹಲವು ವಿಚಾರಗಳ ಬಗ್ಗೆ ಇಬ್ಬರು ಮಾತನಾಡಿದ್ದೇವೆ. ನಾವು ಪಕ್ಷದ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಇದೇ ಡಿ. 8ರಿಂದ ಅಧಿವೇಶನ ಇರುವುದರಿಂದದ ನಮ್ಮ ರಣ ನೀತಿ ಹೇಗಿರಬೇಕು ಎಂಬ ಬಗ್ಗೆ ಮಾತ ನಾಡಿದ್ದೇವೆ ಎಂದು ಸಿಎಂ ಹೇಳಿದರು. ನಾವು ಹಿಂದೆಯೂ ಒಗ್ಗಟ್ಟಾಗಿದ್ದೆವು. ಈಗಲೂ ಒಗ್ಗಟ್ಟಾಗಿದ್ದೇವೆ. ನಮ್ಮಿಬ್ಬರದ್ದು ಒಂದೇ ಸಿದ್ಧಾಂತ. 2028ಕ್ಕೆ ಮತ್ತೆ ನಾವು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ. ಬಿಜೆಪಿಯವರು ಅವಿಶ್ವಾಸ ಗೊತ್ತುವಳಿ ನಿರ್ಣಯ ಮಂಡಿಸುವುದಾಗಿ ಹೇಳಿದ್ದಾರೆ. ಅವರು ಏನೇ ವಿಚಾರ ಪ್ರಸ್ತಾಪ ಮಾಡಿದರೂ ನಾವು ಒಟ್ಟಾಗಿ ಎದುರಿಸುತ್ತೇವೆ ಎಂದು ಹೇಳಿದರು. ರಾಹುಲ್ ಹೇಳಿದಂತೆ ಕೇಳಬೇಕು: ರಾಜ್ಯ ನಾಯಕತ್ವ ಬದಲಾವಣೆಯನ್ನು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಪುನರುಚ್ಚರಿಸಿದ ಸಿದ್ದರಾಮಯ್ಯ, ಹಿರಿಯ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ಅಭಿಪ್ರಾಯ ಆಧರಿಸಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿದರು.

### ಸ್ಮಾರ್ಟ್ ಮೀಟರ್ ಹಗರಣ ರದ್ದು

5 ಸಾವಿರದಿಂದ 8,800 ರೂಪಾಯಿಗಳಿಗೆ ಗ್ರಾಹಕರು ಖರೀದಿಸಬೇಕಾಗಿದೆ. ಇದಕ್ಕೆ ಇಂಧನ ಸಚಿವ ಕೆ.ಜೆ.ಜಾರ್ಜ್ ಹಾಗೂ ಅಧಿಕಾರಿಗಳೇ ಹೊಣೆ ಎಂದು ಬಿಜೆಪಿ ಆರೋಪ ಮಾಡಿತ್ತು. ಬಿಜೆಪಿ ನಾಯಕರು ದಾಖಲಿಸಿದ್ದ ಪ್ರಕರಣ ರದ್ದುಪಡಿಸಿ ಹೈಕೋರ್ಟ್ ಆದೇಶಿಸಿದೆ.

### ಯಡಿಯೂರಪ್ಪಗೆ ಸುಪ್ರೀಂ ರಿಲೀಫ್

ಮತ್ತೊಮ್ಮೆ ಪರಿಗಣಿಸುವಂತೆ ಕೋರಿದ ಹಿಂದಿನ ತೀರ್ಪು, ಅರ್ಜಿದಾರರಿಗೆ ಯಾವುದೇ ಆಕ್ಷೇಪಣೆಗಳನ್ನು ಎತ್ತುವ ಹಕ್ಕನ್ನು ಸಹ ನೀಡಿದೆ ಎಂದರು. ಅವರು 88 ವರ್ಷದ ವ್ಯಕ್ತಿ, 4 ಬಾರಿ ಮುಖ್ಯಮಂತ್ರಿ. ರಾಜಕೀಯ ದ್ವೇಷದಿಂದ ಬಳಲುತ್ತಿದ್ದಾರೆ ಎಂದು ಲೂತ್ರಾ ವಾದಿಸಿದರು.

ಸಂತ್ರಸ್ತೆಯ ತಾಯಿ ನೀಡಿದ ದೂರಿನ ಪ್ರಕಾರ, 2024ರ ಫೆಬ್ರುವರಿಯಲ್ಲಿ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಡೆದ ಸಭೆಯ ಸಂದರ್ಭದಲ್ಲಿ ಯಡಿಯೂರಪ್ಪ ಅವರು 17 ವರ್ಷದ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ. ಸದಾಶಿವನಗರ ಪೊಲೀಸರು ಮಾರ್ಚ್ 14, 2024 ರಂದು ಪ್ರಕರಣ ದಾಖಲಿಸಿಕೊಂಡಿದೆ.

### ವಿನಯ್ ಕುಮಾರ್ ನೇಮಕ



ಮೈಸೂರು: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಆದೇಶದ ಮೇರೆಗೆ ಮೈಸೂರು ಜಿಲ್ಲಾ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಯಾಗಿ ನಂಜನಗೂಡಿನ ಎನ್.ವಿ.ವಿನಯ್ ಕುಮಾರ್ ಅವರನ್ನು ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಇವರು ಹಿಂದೆ ನಂಜನಗೂಡು ನಗರ ಅಧ್ಯಕ್ಷರಾಗಿ ಹಾಗೂ ಮೈಸೂರು ಜಿಲ್ಲಾ ಉಪಾಧ್ಯಕ್ಷರಾಗಿಯು ಸಹ ಕಾರ್ಯನಿರ್ವಹಿಸಿದ್ದರು.

# 6ಕ್ಕೆ ಮೀಸಲಾತಿಗೆ ಆಗ್ರಹಿಸಿ ಜಾಥಾ



ಮೈಸೂರು: ಪೂರ್ಣ ಪ್ರಮಾಣದ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ವತಿಯಿಂದ ಡಿ. 6 ರಂದು ಸಿಎಂ ಸ್ವಗ್ರಾಮವಾದ ಸಿದ್ದರಾಮಯ್ಯನ ಹುಂಡಿ ಗ್ರಾಮದಿಂದ ಮೈಸೂರಿನವರೆಗೆ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಮುಖಂಡ ಬಸವರಾಜ ಕೌತಾಳ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಬೆಳಗ್ಗೆ 10.30ಕ್ಕೆ ಜಾಥಾಕ್ಕೆ ಚಾಲನೆ ದೊರೆಯಲಿದೆ. ಆದರೂ ಅಂದು ಅಲ್ಲಿಯೇ ವಾಸ್ತವ್ಯ ಹೂಡಿ, ಮಾರನೇ ದಿನ ಬೆಳಗ್ಗೆ ಉಪಹಾರ ಸೇವಿಸಿದ ಬಳಿಕ ಟಿ. ನರಸೀಪುರ, ಬನ್ನೂರು, ವ್ಯಾಸರಾಯಪುರ ಮೂಲಕ ಮೈಸೂರಿನತ್ತ ಈ ಜಾಥಾ ಸಾಗಲಿದೆ. ಬಳಿಕ ಡಿ. 11 ರಂದು ಮೈಸೂರು ತಲುಪಿ ಅಂದು ಮಧ್ಯಾಹ್ನ 12ಕ್ಕೆ ಪುರಭವನದ ಬಳಿ ಬೃಹತ್ ಸಮಾವೇಶ ನಡೆಯಲಿದೆ. ಈ ಬಳಿಕವೂ ಸಿಎಂ ಪೂರ್ಣ ಒಳ ಮೀಸಲಾತಿ ಜಾರಿಗೆ ಕ್ರಮ ಕೈಗೊಳ್ಳದಿದ್ದಲ್ಲಿ ನಂತರ ಎರಡನೇ ಹಂತದ ಹೋರಾಟವಾಗಿ ಬೆಂಗಳೂರಿನಲ್ಲಿನ ಸಿಎಂ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದೆಂದರು.

ವಕೀಲ ಎಸ್. ಮಾರೆಪ್ಪ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ ಪೂರ್ಣ ಪ್ರಮಾಣದ ಒಳ ಮೀಸಲಾತಿ ಜಾರಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ಹೀಗಾಗಿ ಇವರನ್ನು ಹಾಗೂ ಅಡ್ಡಿ ಪಡಿಸುತ್ತಿರುವ ಇತರೆ ಅಧಿಕಾರಿಗಳನ್ನು ಬೇರೆಡೆಗೆ ವರ್ಗಾಯಿಸಬೇಕು ಎಂಬಿವೇ ಮೊದಲಾದ ಬೇಡಿಕೆ ತಮ್ಮದಾಗಿದೆ ಎಂದರು.

ಕನಕನಹಳ್ಳಿ ಕೃಷ್ಣಪ್ಪ, ಮೂಗೂರು ಸಿದ್ದರಾಜು, ಬಸಪ್ಪ ಲಿಡ್ಕರ್, ರಾಜಣ್ಣ ದಂಡೋರ್, ಸ್ವಾಮಿ ಮೈಸೂರು, ವೆಂಕಟರಾಮು, ಆನಂದಕುಮಾರ್, ಹನುಮೇಶ್ ಗುಂಡೂರು, ಹುಣಸೂರು ಪುಟ್ಟಯ್ಯ ಇದ್ದರು.

# ಇಂದು ಹನುಮಮಾಲ ಸಂಕೀರ್ತನೆ




ಮೈಸೂರು: ಶ್ರೀರಂಗ ಪಟ್ಟದಣದ ಮೂಡಲ ಬಾಗಿಲು ಹನುಮ ಮಾಲಾ ಸಮಿತಿ ಹಾಗೂ ಹಿಂದೂ ಜಾಗರಣ ವೇದಿಕೆಗಳ ಸಂಯುಕ್ತಾಶ್ರಯದಲ್ಲಿ ಅಲ್ಲಿ ಹನುಮಂತ ಮಂದಿರ ಪುನರ್ ನಿರ್ಮಾಣ ಮಾಡಬೇಕೆಂಬ ಸಂಕಲ್ಪದೊಡನೆ ಡಿ.3 ರಂದು ಬೃಹತ್ ಹನುಮ ಮಾಲಾ ಸಂಕೀರ್ತನ ಯಾತ್ರೆ ಹಾಗೂ ಮಾಲಾ ವಿಸರ್ಜನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಪ್ರಾಂತ ಪ್ರಮುಖ ಲೋಹಿತ್ ವಿ. ಅರಸ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 1786 ರಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಭವ್ಯವಾದ ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಸ್ಥಾನವನ್ನು ಟಿಪ್ಪು ಕೆಡವಿದನಲ್ಲದೆ, ಅಲ್ಲಿನ ಅರ್ಚಕರನ್ನು ಬರ್ಬರವಾಗಿ ಹತ್ಯೆ ಮಾಡಿದ್ದ. ಜೊತೆಗೆ ಅಲ್ಲಿದ್ದ ದಿವ್ಯ ಹನುಮ ಮೂರ್ತಿಯನ್ನು ಕಾವೇರಿ ನದಿಯಲ್ಲಿ ಎಸೆದಿದ್ದ. ಅಂದಿನಿಂದಲೂ ಅಲ್ಲಿನ ಹನುಮ ಭಕ್ತರು ತೀವ್ರ ಅಪಮಾನ ಹಾಗೂ ನೋವನ್ನು ಸಹಿಸಿಕೊಂಡಿದ್ದಾರೆ. ಹೀಗಾಗಿ ಹನುಮ ಮೂರ್ತಿ ಮೂಲ ಸ್ಥಾನ ಸೇರಬೇಕು, ಭವ್ಯವಾದ ಹನುಮ ಮಂದಿರ ಶಾಂತಿಯುತವಾಗಿ ನಿರ್ಮಿಸಬೇಕೆಂಬ ಸಂಕಲ್ಪದೊಡನೆ ಪ್ರತಿ ವರ್ಷ ಹನುಮ ಮಾಲಾ ಸಂಕೀರ್ತನ ಯಾತ್ರೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಅಂದು ಬೆಳಗ್ಗೆ 10ಕ್ಕೆ ಅಲ್ಲಿನ ನಿಮಿಷಾಂತ ದೇವಸ್ಥಾನದ ಆವರಣದಲ್ಲಿ ಸಭೆ ನಡೆಯಲಿದೆ. 11ಕ್ಕೆ ಬೃಹತ್ ಸಂಕೀರ್ತನ ಯಾತ್ರೆ ಅಲ್ಲಿಂದ ಪ್ರಾರಂಭಗೊಂಡು ಶ್ರೀರಂಗಪಟ್ಟಣದ ಕೋಟೆ ತಲುಪಿ ನಂತರ ಮೂಡಲ ಬಾಗಿಲು ಆಂಜನೇಯಸ್ವಾಮಿ ದರ್ಶನ ಪಡೆದು, ಶ್ರೀರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಸಮಾರೋಪಗೊಳ್ಳಲಿದೆ. ಬಳಿಕ ಅದೇ ಮೈದಾನದಲ್ಲಿ ಮಾಲಾ ವಿಸರ್ಜನೆ, ಪ್ರಸಾದ ವಿನಿಯೋಗ ನಡೆಯಲಿದೆ. ಸಾವಿರಾರು ಮಂದಿ ಇದರಲ್ಲಿ ಪಾಲ್ಗೊಳ್ಳಲಿದ್ದಾರೆಂದರು.

ಬಾಲರಾಜ್, ರಂಗಸ್ವಾಮಿ, ಸುಜನ್‌ಗೌಡ, ಲಕ್ಷ್ಮಿ ?ಮನಾರಾಯಣ ಇದ್ದರು.

# ಸಂಭ್ರಮದ ಹನುಮ ಜಯಂತಿ

## ಎಲ್ಲ ಆಂಜನೇಯಸ್ವಾಮಿ ದೇವಾಲಯಗಳಲ್ಲೂ ಪೂಜಾ ಕೈಂಕರ್ಯ





ಮೈಸೂರು: ಸಾಂಸ್ಕೃತಿಕ ನಗರದಾದ್ಯಂತ ಶ್ರೀ ಆಂಜನೇಯಸ್ವಾಮಿ ಸ್ವಾಮಿಯ ಜಯಂತಿ ಮಹೋತ್ಸವವನ್ನು ಸಂಭ್ರಮ, ಸಡಗರಿಂದ ಆಚರಣೆ ಮಾಡಲಾಯಿತು. ಹನುಮ ಜಯಂತಿ ಹಿನ್ನೆಲೆಯಲ್ಲಿ ಮುಂಜಾನೆಯಿಂದಲೇ ನಗರದ ಎಲ್ಲ ಆಂಜನೇಯಸ್ವಾಮಿ ದೇವಾಲಯಗಳಲ್ಲೂ ಪೂಜಾ ಕೈಂಕರ್ಯಗಳು ನೆರವೇರಿದವು. ಹನುಮ ಮೂರ್ತಿಗಳಿಗೆ ಪಂಚಾಮೃತ ಸೇರಿ ವಿವಿಧ ದ್ರವ್ಯಗಳಿಂದ ಅಭಿಷೇಕ ಮಾಡಲಾಯಿತು.

ಶ್ರೀಸ್ವಾಮಿಗೆ ಪ್ರಿಯವಾದ ಬೆಣ್ಣೆ ಅಲಂಕಾರ, ಚಕ್ಕುಲಿ, ಕಜ್ಜಾಯ, ಕರ್ಜಿಕಾಯಿ ಸೇರಿದಂತೆ ಹಲವು ತಿಂಡಿಗಳಿಂದ ಅಲಂಕಾರ ಮತ್ತು ಹಾರಗಳನ್ನು ಧರಿಸಿ ಅಲಂಕಾರ ಮಾಡಲಾಯಿತು. ತುಳಸಿ, ತೋಮಾಲೆಗಳನ್ನು ತೊಡಿಸಿ ಮಹಾಮಂಗಳಾರತಿ ನೆರವೇರಿಸಲಾಯಿತು. ಹನುಮ ವ್ರತದ ಭಾಗವಾಗಿ ಭಕ್ತರು ಉಪವಾಸ ಆಚರಣೆ ಮಾಡಿದರೆ, ಕೆಲ ಭಕ್ತರು ಸಾವಿರಾರು ಭಕ್ತರಿಗೆ ದೇವಾಲಯದ ಸಮೀಪದಲ್ಲೇ ಅನ್ನ ಸಂತರ್ಪಣೆ, ಪ್ರಸಾದ ವಿತರಣೆ ಮಾಡುವ ಮೂಲಕ ಭಕ್ತಿಪೂರ್ವಕವಾಗಿ ಹನುಮ ಜಯಂತಿ ಆಚರಣೆ ಮಾಡಿದರು. ದೇವಾಲಯಗಳ ಸುತ್ತಲೂ ಸಂಭ್ರಮ, ಸಡಗರ ಮನೆ ಮಾಡಿತ್ತು.

ಇರ್ವಿನ್ ರಸ್ತೆಯಲ್ಲಿರುವ ಪಂಚ ಮುಖಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಸ್ವಾಮಿಗೆ ಪಂಚಮೃತ ಅಭಿಷೇಕ ನೆರವೇರಿಸಲಾಯಿತು. ಲೋಕ ಕಲ್ಯಾಣಾರ್ಥ ಹೋಮ, ಹವನ ನೆರವೇರಿಸಿ ಪೂರ್ಣಾಹುತಿ ಸಲ್ಲಿಸಲಾಯಿತು. ವಿಶೇಷ ಪೂಜೆಯಲ್ಲಿ ನೂರಾರು ಭಕ್ತರು ಪಾಲ್ಗೊಂಡಿದ್ದಾರೆ. ಹನುಮ ಜಯಂತಿ ಅಂಗವಾಗಿ 10 ದಿನಗಳ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳಬೇಕೆಂದು ಪಂಚ ಮುಖಿ ಆಂಜನೇಯಸ್ವಾಮಿ ದೇವಾಲಯ ಪ್ರಧಾನ ಅರ್ಚಕರೂ ಆದ ಆಗಮಿಕ ಎಸ್.ಕೃಷ್ಣಮೂರ್ತಿ ಮನವಿ ಮಾಡಿದರು.

ಅರಮನೆ ಸಮೀಪದ ಕೋಟೆ ಆಂಜನೇಯಸ್ವಾಮಿ ದೇವಾಲಯಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಪೂಜೆ ನೆರವೇರಿಸಿ ದರ್ಶನ ಪಡೆದರು. ಮಾನಂದವಾಡಿ ರಸ್ತೆಯ ಶ್ರೀಆಂಜನೇಯಸ್ವಾಮಿ ದೇವಾಲಯ, ತ್ಯಾಗರಾಜ ರಸ್ತೆಯ ಚಿಕ್ಕ ಆಂಜನೇಯಸ್ವಾಮಿ ದೇವಾಲಯ, ಅಗ್ರಹಾರದ ರಾಮಾನುಜ ರಸ್ತೆಯಲ್ಲಿರುವ ಆಂಜನೇಸ್ವಾಮಿ ದೇವಾಲಯ, ಒಂಟಿಕೊಪ್ಪಲು ಬಡಾವಣೆಯ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಾಲಯ, ವಿಜಯನಗರ 2ನೇ ಹಂತದ ಶ್ರೀ ಹನುಮಾನ್ ದೇವಾಲಯ, ಹುಡ್ಕೋ ಮುಖ್ಯ ರಸ್ತೆಯ ಶ್ರೀ ಹನುಮಾನ್ ದೇಗುಲ, ಚಾಮುಂಡಿ ವಿಹಾರ ಬಡಾವಣೆ ಸಮೀಪದ ಜ್ಯೋತಿನಗರದಲ್ಲಿರುವ ಶ್ರೀ ಹನುಮಾನ್ ದೇವಾಲಯ, ಕುವೆಂಪುನಗರದ ಶ್ರೀ ಪ್ರಸನ್ನ ವೀರಾಂಜುನೇಯಸ್ವಾಮಿ ದೇವಾಲಯ, ರಾಮಚಂದ್ರ ಅಗ್ರಹಾರದ ರಾಮಾನುಜ ರಸ್ತೆಯ ಪಟಲ ಶ್ರೀ ಆಂಜನೇಯಸ್ವಾಮಿ ದೇವಾಲಯ, ಗನ್‌ಹೌಸ್ ವೃತ್ತ ಸಮೀಪದ ಶ್ರೀ ಆಂಜನೇಯಸ್ವಾಮಿ ದೇವಾಲಯ ಸೇರಿದಂತೆ ಎಲ್ಲೆಡೆ ಹನುಮ ಜಯಂತಿಯನ್ನು ಭಕ್ತಿ ಭಾವದಿಂದ ಆಚರಣೆ ಮಾಡಲಾಯಿತು.



## ಮೊದಲ ಪುಟದಿಂದ

### ಮೂವರು ದಲಿತ ಸಚಿವರು ಔಟ್!

ಮನಸ್ಸುಗಳೇ ಬ್ರೇಕ್ ಆಗಿರುವಾಗ ಬ್ರೇಕ್ ಫಾಸ್ಟ್ ತೇಪೆ ಹಚ್ಚುತ್ತಾ ಹೇಳಿ? ರಾಜ್ಯದ ಅಭಿವೃದ್ಧಿ ಚಿಂತಿಸಲು ಸೇರಿದ್ದಾರೆಯೇ? ದಲಿತರ ಸಮಸ್ಯೆ, ರೈತರ ಸಮಸ್ಯೆ ಬಗೆಹರಿಸಲು ಏನಾದ್ರೂ ಸೇರಿದ್ದಾರಾ? ಬ್ರೇಕ್ ಫಾಸ್ಟ್, ಪಾರ್ಟಿ ಮಾಡಿಕೊಂಡು ಜನರ ದಾರಿ ತಪ್ಪಿಸುತ್ತಿದ್ದಾರೆ ಎಂದು ಕಿಡಿಕಾರಿದರು.

### ವಿದ್ಯುತ್ ಕಾಯ್ದೆ ತಿದ್ದುಪಡಿ: ಸುಧಾರಣೆಯೋ, ಸವಾಲೋ?

ಅವರನ್ನು ಭೇಟಿಯಾಗುತ್ತೇನೆ. ಹೈಕಮಾಂಡ್ ಯಾವಾಗಲೂ ಕರೆದರೂ ಹೋಗುತ್ತೇವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಹಲವು ವಿಚಾರಗಳ ಬಗ್ಗೆ ಇಬ್ಬರು ಮಾತನಾಡಿದ್ದೇವೆ. ನಾವು ಪಕ್ಷದ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಇದೇ ಡಿ. 8ರಿಂದ ಅಧಿವೇಶನ ಇರುವುದರಿಂದದ ನಮ್ಮ ರಣ ನೀತಿ ಹೇಗಿರಬೇಕು ಎಂಬ ಬಗ್ಗೆ ಮಾತ ನಾಡಿದ್ದೇವೆ ಎಂದು ಸಿಎಂ ಹೇಳಿದರು.

ನಾವು ಹಿಂದೆಯೂ ಒಗ್ಗಟ್ಟಾಗಿದ್ದೆವು. ಈಗಲೂ ಒಗ್ಗಟ್ಟಾಗಿದ್ದೇವೆ. ನಮ್ಮಿಬ್ಬರದ್ದು ಒಂದೇ ಸಿದ್ಧಾಂತ. 2028ಕ್ಕೆ ಮತ್ತೆ ನಾವು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ. ಬಿಜೆಪಿಯವರು ಅವಿಶ್ವಾಸ ಗೊತ್ತುವಳಿ ನಿರ್ಣಯ ಮಂಡಿಸುವುದಾಗಿ ಹೇಳಿದ್ದಾರೆ. ಅವರು ಏನೇ ವಿಚಾರ ಪ್ರಸ್ತಾಪ ಮಾಡಿದರೂ ನಾವು ಒಟ್ಟಾಗಿ ಎದುರಿಸುತ್ತೇವೆ ಎಂದು ಹೇಳಿದರು.

ರಾಹುಲ್ ಹೇಳಿದಂತೆ ಕೇಳಬೇಕು: ರಾಜ್ಯ ನಾಯಕತ್ವ ಬದಲಾವಣೆಯನ್ನು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಪುನರುಚ್ಚರಿಸಿದ ಸಿದ್ದರಾಮಯ್ಯ, ಹಿರಿಯ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ಅಭಿಪ್ರಾಯ ಆಧರಿಸಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿದರು.

# ಇಂದಿನಿಂದ ಅತಿಥಿ ಉಪನ್ಯಾಸಕರ ಮುಷ್ಕರ



ಮೈಸೂರು: ರಾಜ್ಯದ 440 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳೆ ನೂತನ ಸಾಲಿಗೆ ಅತಿಥಿ ಉಪನ್ಯಾಸಕರ ನೇಮಕಕ್ಕೆ ಕೌನ್ಸಿಲಿಂಗ್ ನಡೆಸುವ ವೇಳೆ ಈ ಹಿಂದೆ ಸೇವೆ ಸಲ್ಲಿಸಿದ್ದ ಸುಮಾರು 6,904 ಅತಿಥಿ ಉಪನ್ಯಾಸಕರನ್ನು ಯುಜಿಸಿ ಅರ್ಹತೆ ಪಡೆದಿಲ್ಲವೆಂದು ಪರಿಗಣಿಸದಿರುವ ಕ್ರಮ ವಾಪಸು ಪಡೆಯಬೇಕೆಂದು ಆಗ್ರಹಿಸಿ ಬುಧವಾರದಿಂದ ನಿತ್ಯ ಬೆಳಗ್ಗೆ 11 ರಿಂದ ಮಧ್ಯಾಹ್ನ 1.30 ರವರೆಗೆ ಹುಣಸೂರು ರಸ್ತೆಯ ಕಾಲೇಜು ಶಿಕ್ಷಣ ಇಲಾಖೆ ಕಚೇರಿ ಎದುರು ನಿರಂತರ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿಯ ಗೌರವಾಧ್ಯಕ್ಷ ಹನುಂತೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಾಜ್ಯದ 440 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 10, 15, 20 ವರ್ಷಗಳಿಂದ ಸುಮಾರು 10,972 ಅತಿಥಿ ಉಪನ್ಯಾಸಕರು ಅತ್ಯಂತ ಕನಿಷ್ಠ ಗೌರವಧನ ಪಡೆದು ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಪ್ರಸಕ್ತ ಸಾಲಿನಲ್ಲಿ 6,904 ಅತಿಥಿ ಉಪನ್ಯಾಸಕರನ್ನು ಯುಜಿಸಿ ಅರ್ಹತೆ ಪಡೆದಿಲ್ಲವೆಂಬ ಕಾರಣಕ್ಕಾಗಿ ಇವರೆಲ್ಲರನ್ನೂ ಕೆಲಸದಿಂದ ತೆಗೆದು ಹಾಕಲು, ಹೊಸದಾಗಿ ನೇಮಕಾತಿ ಪ್ರಕ್ರಿಯೆಗೆ ಕ್ರಮ ಕೈಗೊಳ್ಳಲಾಗಿದೆ. ಇದು ಸರಿಯಲ್ಲ ಎಂದರು. ಈಗಾಗಲೇ ಸೇವೆ ಸಲ್ಲಿಸಿದವರ ವಯೋಮಿತಿ ಮೀರಿದೆ. ಇವರು ಕೆಲಸ ಕಳೆದುಕೊಂಡರೆ ಜೀವನ ಅತಂತ್ರವಾಗುತ್ತದೆ. ಇವರನ್ನೇ ಅವಲಂಬಿಸಿರುವ ಕುಟುಂಬ ನಿರ್ವಹಣೆ ಸಾಧ್ಯವಾಗದಂತಾಗುತ್ತದೆ. ಹೀಗಾಗಿ ಕಾಲೇಜು ಶಿಕ್ಷಣ ಇಲಾಖೆ ತಾನು ಕೈಗೊಂಡಿರುವ ನಿಯಮ ಬಾಹಿರ ಕೌನ್ಸಿಲಿಂಗ್ ಪ್ರಕ್ರಿಯೆ ಕೈಬಿಡಬೇಕು. ನಿಯಮ ಮಾರ್ಪಾಡು ಮಾಡಿ, ಈಗಾಗಲೇ ಸೇವೆ ಸಲ್ಲಿಸುತ್ತಿರುವವರನ್ನೇ ಮುಂದುವರಿಸಬೇಕೆಂದು ಒತ್ತಾಯಿಸಿ, ರಾಜ್ಯದಾದ್ಯಂತ ನಡೆಯುತ್ತಿರುವಂತೆ ಪ್ರತಿಭಟನೆ ಇಲ್ಲಿಯೂ ನಡೆಯಲಿದೆ ಎಂದು ವಿವರಿಸಿದರು.

ಡಾ.ಜಿ. ಮಹೇಶ್, ಹನುಮಂತೇಶ್, ಆಶಾ, ಶಿವೇಗೌಡ ಇದ್ದರು.

# ರಫ್ತು ಹೆಚ್ಚಿಸಿ ಉದ್ಯೋಗ ಸೃಷ್ಟಿಸಿ:ಕೆ.ಬಿ.ಲಿಂಗರಾಜು



ಮೈಸೂರು: ಜಿಲ್ಲೆನಲ್ಲಿ ಹೆಚ್ಚು ಉದ್ಯಮದಾರರು ಹೆಚ್ಚು ಉತ್ಪನ್ನಗಳನ್ನು ರಫ್ತು ಮಾಡಲು ಪ್ರಯತ್ನ ಮಾಡುವ ಮೂಲಕ ಹೆಚ್ಚಿನ ಉದ್ಯೋಗ ಸೃಷ್ಟಿಗೆ ಪ್ರಯತ್ನಿಸಿ ಎಂದು ಮೈಸೂರು ಕೈಗಾರಿಕಾ ಕೇಂದ್ರದ ಅಧ್ಯಕ್ಷ ಕೆ.ಬಿ.ಲಿಂಗರಾಜು ಹೇಳಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ ಸಹಯೋಗದಲ್ಲಿ ಆರ್‌ಎಎಂಪಿ ಯೋಜನೆಯಡಿ ರಫ್ತು ನಿರ್ವಹಣೆ ವಿಷಯದ ಕುರಿತು ಮೈಸೂರು ಜಿಲ್ಲೆಯ ಎಂ.ಎಸ್.ಎಂ.ಇ ಉದ್ದಿಮೆದಾರರಿಗೆ ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಉದ್ಯಮಿದಾರರು ಹೆಚ್ಚು ರಫ್ತು ಮಾಡುವುದರಿಂದ ಹೆಚ್ಚು ಉದ್ಯೋಗಗಳ ಸೃಷ್ಟಿಗೆ ಸಹಕಾರ ಆಗಲಿದೆ. ಇತ್ತೀಚಿನ ದಿನಗಳಲ್ಲಿ ಉದ್ಯಮಿಗಳಿಗೆ ಎಲ್ಲಾ ರೀತಿಯ ಸೌಲಭ್ಯ ಸಿಗುತ್ತಿದೆ. ಅದರ ಸದುಪಯೋಗ ಪಡಿಸಿಕೊಂಡು ರಫ್ತು ಉತ್ಪನ್ನಗಳ ಜಿಲ್ಲೆಯನ್ನಾಗಿ ಮಾಡಲು ಅನೂಕೂಲವಾಗವಂತೆ ಮಾಡಿ ಎಂದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ಮಾತನಾಡಿ, ಕೈಗಾರಿಕಾ ಉತ್ಪನ್ನಗಳಷ್ಟೇ ಅಲ್ಲದೆ ಕೃಷಿ, ತೋಟಗಾರಿಕೆ, ಪಶುಪಾಲನೆ ವಸ್ತುಗಳನ್ನು ರಫ್ತು ಮಾಡಲು ಅವಕಾಶವಿದೆ. ಅದನ್ನು ಸದುಪಯೋಗಬೇಕು. ಈ ದೃಷ್ಟಿಯಿಂದ ರಫ್ತು ಸಹಾಯಕೇಂದ್ರ ತೆರೆಯುವ ಪ್ರಯತ್ನ ನಡೆದಿದೆ. ಮೈಸೂರು ಕೈಗಾರಿಕಾ ಸಂಘದ ಸಹಯೋಗದಲ್ಲಿ ಸಹಾಯಕೇಂದ್ರದ ಕಟ್ಟಡವು ಸಹ ಪ್ರಗತಿಯಲ್ಲಿದ್ದು ಶೀಘ್ರವೇ ಸಹಾಯಕೇಂದ್ರ ಕೆಲಸ ಮಾಡಲಿದೆ ಎಂದು ಹೇಳಿದರು. ಪರಿಣಿತರಾದ ಎಫ್.ಐ.ಇ.ಓ ಸಂಸ್ಥೆ ಧನಿಷಾ ಮಿನು, ಗೌರವ್ ತಿವಾರಿ, ಗಿರೀಶ್ ನಾರಾಯಣ್ ವಿಷಯ ಮಂಡಿಸಿದರು.

ಬೆಂಗಳೂರು ಫ್ರೆಂಡ್ಸ್ ಫ್ರಂಡ್ ಎಫ್ ಐಇಓ ನಿರ್ದೇಶಕ ಸೋಮ ಚೌದರಿ ಜೈನ್, ಕೃಷಿ ಇಲಾಖೆ ನಿರ್ದೇಶಕ ರಾಜು, ತೋಟಗಾರಿಕೆ ಜಂಟಿ ನಿರ್ದೇಶಕ ಮಂಜುನಾಥ್, ಮೀನುಗಾರಿಕಾ ಜಂಟಿ ನಿರ್ದೇಶಕ ಮಂಜುನಾಥ್ ಹಾಗೂ ರಂಗರಾವ್ ಅಂಡ್ ಸನ್ಸ್ ವಿಪಿ ಎಕ್ಸ್ಪೋರ್ಟ್ ಸೆಲ್ವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

**ಶಾಸಕ ಜಿ.ಟಿ.ದೇವೇಗೌಡ ಭರವಸೆ**

# ಶೀಘ್ರ ಏಕಲವ್ಯ ನಗರದ ಸಮಸ್ಯೆಗೆ ಕ್ರಮ: ಶಾಸಕ



ಮೈಸೂರು: ಏಕಲವ್ಯ ನಗರಕ್ಕೆ ಶೀರ್ಘದಲ್ಲೇ ತಹಸೀಲ್ದಾರ್ ಸೇರಿದಂತೆ ಅಧಿಕಾರಿಗಳನ್ನು ಕರೆದುಕೊಂಡು ಬಂದು ಸಮಸ್ಯೆಗಳನ್ನು ಬಗೆಹರಿಸುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಜಿ.ಟಿ.ದೇವೇಗೌಡ ಅಭಿಮಾನಿ ಬಳಗ, ವಿನಾಯಕ ಗೆಳೆಯರ ಬಳಗ ಕಟ್ಟಡ ಕಾರ್ಮಿಕರು ಮತ್ತು ದಲಿತ ಸಂಘರ್ಷ ಸಮಿತಿ ಸಂಯುಕ್ತಾಶ್ರಯದಲ್ಲಿ ಏಕಲವ್ಯ ನಗರದಲ್ಲಿ ಆಯೋಜಿಸಿದ್ದ ಶಾಸಕ ಜಿ.ಟಿ.ದೇವೇಗೌಡ ಅವರ 75ನೇ ಜನ್ಮದಿನ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರು, ಅಂಗವಿಕಲರು ಹಾಗೂ ಅಶಕ್ತರಿಗೆ ದಿನಸಿ ಕಿಟ್ ವಿತರಿಸಿ ಮಾತನಾಡಿದರು.

ಊರಾಚೆ ಡೇರೆ ಹಾಕಿ ಮಲಗುತ್ತಿದ್ದ ಅಲೆಮಾರಿಗಳು ಈಗ ಸ್ವಂತ ಮನೆಯಲ್ಲಿ ವಾಸ ಮಾಡುತ್ತಿರುವುದ್ದನ್ನು ನೋಡಿದರೆ ಖುಷಿ ಆಗುತ್ತದೆ. ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಸರಿ ಇಲ್ಲ. ಕೆಲವರಿಗೆ ಮನೆಯ ಹಕ್ಕು ಪತ್ರ ಸಿಕ್ಕಿಲ್ಲ. 20ಕ್ಕೂ ಹೆಚ್ಚು ಜನರಿಗೆ ವೃದ್ಧಾಪ್ಯ ವೇತನ, ವಿಧವಾ ವೇತನ ಸಿಕ್ಕಿಲ್ಲ ಎನ್ನುವ ಸಮಸ್ಯೆಗಳನ್ನು ನನ್ನ ಗಮನಕ್ಕೆ ತಂದಿದ್ದೀರಿ. ಶೀರ್ಘದಲ್ಲೇ ತಹಸೀಲ್ದಾರ್ ಸೇರಿದಂತೆ ಅಧಿಕಾರಿಗಳನ್ನೇ ಇಲ್ಲಿಗೆ ಕರೆದುಕೊಂಡು ಬಂದು ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

### ಅಲೆಮಾರಿಗಳಿಗೆ ಆಸರೆ

ವೇಷ ಹಾಕಿ ಊರೂರು ಅಲೆಯುತ್ತಿದ್ದ ಜನರಿಗೆ ಸೂರು ಕಲ್ಪಿಸಬೇಕೆಂದು ನಾನು ಶ್ರಮ ಹಾಕಿದ್ದೆ. ವಿ.ಸೋಮಣ್ಣ ವಸತಿ ಸಚಿವರಾಗಿದ್ದರು, ಶೋಭಾ ಕರಂದ್ಲಾಜೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಇಬ್ಬರನ್ನೂ ಇಲ್ಲಿಗೆ ಕರೆದುಕೊಂಡು ಬಂದು ವಾಸ್ತವ ಸ್ಥಿತಿ ಮನವರಿಕೆ ಮಾಡಿಕೊಟ್ಟಿದ್ದೆ. ಮೈದಾನದಲ್ಲಿ 150ಕ್ಕೂ ಹೆಚ್ಚು ಕುಟುಂಬಗಳು ಡೇರೆ ಹಾಕಿಕೊಂಡು ವಾಸ ಮಾಡುತ್ತಿದ್ದವು. ಎಲ್ಲರಿಗೂ ಸೂರು ಕಲ್ಪಿಸಬೇಕೆಂದು ಕೊಳಗೇರಿ ನಿರ್ಮೂಲನಾ ಮಂಡಳಿ ಮೂಲಕ ಮನೆ ಕಟ್ಟಿಸಲಾಯಿತು ಎಂದರು.

ನಿಮ್ಮಲ್ಲಿ ಅನೇಕರು ಕಲಾವಿದರು. ನೀವೆಲ್ಲ ದೇವರ ಮಕ್ಕಳು. ಯಾರೂ ಕುಡಿತದ ಚಟ ಬಿಡಬೇಕು. ಪರಸ್ಪರ ದ್ವೇಷ ಬಿಟ್ಟು ಪ್ರೀತಿಯಿಂದ ಬದುಕಬೇಕು. ಏಕಲವ್ಯ ನಗರ ಶುರುವಾದಾಗ ಏನೂ ಇರಲಿಲ್ಲ. ಈಗ ಶಾಲೆ, ಕುಡಿಯುವ ನೀರು, ಅಂಗನವಾಡಿ, ಆಸ್ಪತ್ರೆ ಮಾಡಿದ್ದೇನೆ. ಮುಂದೆಯೂ ನಿಮ್ಮ ಸೇವೆ ಮಾಡುತ್ತೇನೆ. ನಿಮ್ಮೆಲ್ಲರ ಆರ್ಶೀವಾದವೇ ನನಗೆ ಶಕ್ತಿ ಎಂದರು. ಮುಖಂಡರಾದ ಬಸವಣ್ಣ, ಮಂಜೇಗೌಡ, ಕುಮಾರ್, ಭಾಸ್ಕರ್, ನಿಂಗರಾಜ ಮಲ್ಲಾಡಿ, ಬಸವನಗುಡಿ ನಂಜಪ್ಪ, ದಿವಾಕರ್, ಜಯರಾಮಯ್ಯ, ರಶ್ಮಿ, ಮಂಗಳಾ ವೆಂಕಟೇಶ್, ರೇವಣ್ಣ, ರಾಮಸ್ವಾಮಿ, ಶಂಕರ್, ರಾಜಪ್ಪ, ರವಿ, ಸೀನಣ್ಣ, ಪುಟ್ಟಲಕ್ಷ ?ಮಮ್ಮ, ಪ್ರವೀಣ್, ಪಿಡಿಒ ಭವ್ಯಾ, ಅಧಿಕಾರಿಗಳಾದ ನುಸರತ್, ಲಕ್ಷ್ಮೀಶ್ ಮುಂತಾದವರಿದ್ದರು.

ಈ ವೇಳೆ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬೋಗಾದಿ, ವಿಜಯ ನಗರ, ಹೊಸಹುಂಡಿ, ಹಳೇ ಕೆಸರೆ ಸೇರಿದಂತೆ ಒಟ್ಟು 7 ನಗರ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ. ಜನರಿಗೆ ಉತ್ತಮ ಆರೋಗ್ಯ ಸೇವೆ ನೀಡಲು ಮಾರ್ಗದರ್ಶನ ನೀಡಿದ ಜಿ.ಟಿ.ದೇವೇಗೌಡ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ನಗರ ಆರೋಗ್ಯ ವ್ಯವಸ್ಥಾಪಕ ದಿವಾಕರ್, ನೂತನ ನಮ್ಮ ಕ್ಲಿನಿಕ್ ವೈದ್ಯಾಧಿಕಾರಿ ಡಾ.ಬಿ.ವರ್ಷಿತಾ, ನಾಗನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಧರ್ಮೇಶ್, ಇಲಾಖೆ ಸಿಬ್ಬಂದಿಯಾದ ಗಿರೀಶ್, ಮಹೇಂದ್ರ, ಮಹದೇವು ಮುಂತಾದವರಿದ್ದರು.

### ನಮ್ಮ ಕ್ಲಿನಿಕ್‌ಗೆ ಚಾಲನೆ

**ಏಕಲವ್ಯ ನಗರದಲ್ಲಿ ನೂತನವಾಗಿ ಪ್ರಾರಂಭವಾಗಿರುವ 'ನಮ್ಮ ಕ್ಲಿನಿಕ್'ಗೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ ನೀಡಿದರು. ಬಡಾವಣೆಯ ಸಮುದಾಯದ ಭವನ ಕಟ್ಟಡದ ಕೆಳ ಅಂತಸ್ತನ್ನು ಆಸ್ಪತ್ರೆಯಾಗಿ ರೂಪಿಸಲಾಗಿದ್ದು, ಶಾಸಕರು ಶುಕ್ರವಾರ ಉದ್ಘಾಟನೆ ನೆರವೇರಿಸಿದರು.**

### ಡಿ. 3ರಂದು ಅರಣ್ಯ ಸಚಿವರ ಜಿಲ್ಲಾ ಪ್ರವಾಸ

ಕೊಳ್ಳೇಗಾಲ: ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಈಶ್ವರ ಬಿ. ಖಂಡ್ರೆ ಅವರು ಡಿಸೆಂಬರ್ 3ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಮಧ್ಯಾಹ್ನ 12.55 ಗಂಟೆಗೆ ಸಚಿವರು ಕೊಳ್ಳೇಗಾಲಕ್ಕೆ ಆಗಮಿಸುವರು. 1 ಗಂಟೆಗೆ ಕೊಳ್ಳೇಗಾಲದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯಲ್ಲಿ ಕಂಟ್ರೋಲ್ ಮತ್ತು ಕಮಾಂಡೋ ಸೆಂಟರ್ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 1.30 ರಿಂದ 2.30 ಗಂಟೆಯವರೆಗೆ ಕೊಳ್ಳೇಗಾಲ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯಲ್ಲಿ ಮೈಸೂರು ಮತ್ತು ಕೊಳ್ಳೇಗಾಲದ ವಲಯ ಅರಣ್ಯ ಮತ್ತು ಪರಿಸರ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಪರಾಮರ್ಶನಾ ಸಭೆ ನಡೆಸುವರು. 2.30 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

# ಸಭಾಭವನ, ಗ್ರಾಮಸೌಧ ಉದ್ಘಾಟನೆ



ಗುಂಡ್ಲುಪೇಟೆ: ತಾಲ್ಲೂಕಿನ ಹುಂಡೀಪುರ ಗ್ರಾ.ಪಂ ಯಲ್ಲಿ ನೂತನವಾಗಿ ನಿರ್ಮಿಸಿರುವ ಸಭಾಭವನ ಹಾಗೂ ಗ್ರಾಮಸೌಧ ವನ್ನು ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ನಂತರ ಮಾತನಾಡಿ ಗ್ರಾ.ಪಂ ಸದಸ್ಯರು ಅದ್ಯಕ್ಷರು ಅಭಿವೃದ್ಧಿ ಅದಿಕಾರಿ ಎಲ್ಲರು ಒಟ್ಟಾಗಿ ಅನುದಾನ ಸದ್ಬಳಕೆ ಮಾಡಿಕೊಂಡು ಸಭಾಭವನ ನಿರ್ಮಿಸಿರುವುದು ಉತ್ತಮ ಬೆಳವಣಿಗೆ ಶಿವರುದ್ರಪ್ಪ ಮತ್ತು ನಾಗರತ್ನಮ್ಮಅವರು ಈ ಭಾಗಕ್ಕೆ ಸಾಕಷ್ಟು ಅಭಿವೃದ್ಧಿ ಮಾಡಿದ್ದರೆ ಇಂದು ಕಲ್ಕಟ್ಟ ಕೆರೆಗೆ ನೀರು ಬಿಡುವ ದೃಷ್ಟಿಯಲ್ಲಿ ಹೋರಾ ಟ ನಡೆಯುತ್ತಿದೆ ಅದರೆ ಅ ಕೆರೆ ನಾಗರತ್ನಮ್ಮ ಅವರ ಕಾಲದಲ್ಲಿ ಹಾಗಿದ್ದು ಎಂದರು.

ನಮ್ಮ ತಂದೆಯ ಅವಧಿಯಲ್ಲಿ ಜಿಟಿಟಿಸಿ ಕೇಂದ್ರ, ಮೊರಾರ್ಜಿ ದೇಸಾಯಿ ಶಾಲೆಗಳು,ಮಾಡುವ ಮುಲಕ ತಾಲ್ಲೂಕಿನಲ್ಲಿ ಶೈಕ್ಷಣಿಕ ಅಭಿವೃದ್ಧಿ ಗೆ ಶ್ರಮಿಸಿದ್ದಾರೆ ಮುಂದಿನ ದಿನಗಳಲ್ಲಿ ನಾನು ಕೂಡ ಅಭಿವೃದ್ಧಿ ಮಾಡುವತ್ತ ಕೈಲಾದ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾ.ಪ ಅಧ್ಯಕ್ಷ ನಂಜಪ್ಪ, ಉಪಾಧ್ಯಕ್ಷ ಪುಟ್ಟಮಾದಮ್ಮ, ಸದಸ್ಯರಾದ ಮಹೇಂದ್ರ ಎಚ್ ಪಿ, ನೀಲಮ್ಮ, ಪಾರ್ವತಿ, ಸಾಕಮ್ಮ, ರಾಜು, ಮಧು, ಆನಂದ, ಶಿವಬಸಪ್ಪ, ಸತೀಸ್, ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಮಂಜುನಾಥ್, ಪಿಡಿಓ ಕರಣ್ ಜಾಗಿರ್ ದಾರ್, ಲೆಕ್ಕ ಸಹಾಯಕ ಚಿಕ್ಕಮಾದಶೆಟ್ಟಿ ಮತ್ತಿತರರಿದ್ದರು.

# ಮಹಾಕುಂಭಾಭೀಷೇಕ ಕಳಶ ಪ್ರತಿಷ್ಠಾಪನೆ

ಚಾಮರಾಜನಗರ: ನಗರದ ಚಿಕ್ಕ ಅಂಗಡಿ ಬೀದಿಯ ದಾಸಬಣಜಿಗರ ಶ್ರೀ ಸೀತಾ ರಾಮ ಮಂದಿರದಲ್ಲಿ ಶನಿವಾರ ಮತ್ತು ಭಾನುವಾರ ಎರಡು ದಿನಗಳ ಕಾಲ ಮಹಾಕುಂಭಾಬೀಷೇಕ ಮತ್ತು ಕಳಶ ಪ್ರತಿಷ್ಠಾಪನೆ ವಿಜೃಂಭಣೆಯಿಂದ ನೆರವೇರಿತು.

ಶನಿವಶರ ಸಂಜೆ ಮಹಾಗಣಪತಿ ಪೂಜೆ, ದೇವತಾಕಾರ್ಯ, ಕಲಾ ಹೋಮ, ಕಳಶ ಪ್ರತಿಷ್ಠಾಪನೆ, ವಾಸ್ತು ಪೂಜೆ, ಮಹಾ ಮಂಗಳಾರತಿ ನೆರವೇರಿತು. ಭಾನುವಾರ ಗಣಪತಿ ಹೋಮ, ಶ್ರೀರಾಮ ತಾರಕ ಮೂಲತ್ರಗಳು, ಮಹಾಕುಂಭಾಭಿಷೇಕ, ಪ್ರಸಾದ ವಿನಿಯೋಗ ಹಾಗೂ ಸಂಜೆ ಪ್ರಮುಖ ಬೀದಿಗಳಲ್ಲಿ ಉತ್ಸವ ನೆರವೇರಿತು. ದಾಸ ಬಣಜಿಗರ ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಸೇರಿದಂತೆ ಪದಾಧಿಕಾರಿಗಳು ಸಮುದಾಯದ ಯಜಮಾನರು, ನಾಡ ದೇಶಶೆಟ್ಟರು ಹಾಗೂ ಮಹಿಳೆಯರು ಸೇರಿದಂತೆ ನೂರಾರು ಜನರು ಭಾಗವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.



ಡಾ.ಎಸ್ ಪಿ ಬಾಲಸುಬ್ರಹ್ಮಣ್ಯಂ ಸಾಂಸ್ಕೃತಿಕ ಕಲಾ ವೇದಿಕೆ ಮತ್ತು ರೋಟರಿ ವತಿಯಿಂದ

# ಕನ್ನಡ ರಾಜ್ಯೋತ್ಸವ ಆಚರಣೆ



ಚಾಮರಾಜನಗರ: ಕರ್ನಾಟಕದ ಯಾವುದೇ ಭಾಗದಲ್ಲಿ ಕನ್ನಡ ನೆಲ, ಜಲ,ಭಾಷೆಗೆ ಧಕ್ಕೆಯಾದಾಗ ಮೊದಲು ಪ್ರತಿಭಟನೆ ಮಾಡುವವರು ಚಾಮರಾಜನಗರ ಕನ್ನಡ ಪರ ಸಂಘಟನೆಗಳು ಎಂಬುದು ಹೆಮ್ಮೆಯ ವಿಚಾರ ಎಂದು ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಅಭಿಪ್ರಾಯಿಸಿದರು.

ಡಾಕ್ಟರ್ ಎಸ್ ಪಿ ಬಾಲಸುಬ್ರಮಣ್ಯ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಹಾಗೂ ರೋಟರಿ ಸಂಸ್ಥೆ ಸಯೋಗದಲ್ಲಿ. ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಕನ್ನಡ ಪರ ಸಂಘಟನೆಗಳು ಹೋರಾಟ ವನ್ನು ಜೀವಂತವಾಗಿ ಇರಿಸಿಕೊಂಡಿರುವುದರಿಂದ ಗಡಿ ಜಿಲ್ಲೆಯ ಬಗ್ಗೆ ಗೌರವವಿದೆ ಎಂದು ಹೇಳಿದರು. ಅಖಿಲ ಕನ್ನಡ ಮಹಾಸಭಾ ರಾಜ್ಯದ್ಯಕ್ಷ ಚಾಂ ಶ್ರೀನಿವಾಸಗೌಡ ಮಾತನಾಡಿ. ಸಾವಿರಾರು ವರ್ಷ ಇತಿಹಾಸ ಇರುವ ಕನ್ನಡ ಭಾಷೆಗೆ ಶಾಸ್ತ್ರಿ ಸ್ಥಾನ ಮಾನ ಸಿಗಬೇಕು ಸೇರಿದಂತೆ ಅನೇಕ ಗಂಭೀರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ನಡೆಸಿದ ಹೆಮ್ಮೆಯಿದೆ ಎಂದು ತಿಳಿಸಿದರು.

ನಮ್ಮ ಭಾಷೆ ಮಾತೃಭಾಷೆ ಎಂದು ಪ್ರತಿಯೊಬ್ಬ ಕನ್ನಡಿಗರು ಮೆಚ್ಚುಗೆಯಿಂದ ಹೇಳಬೇಕು ಎಂದು ತಿಳಿಸಿದರು. ಡಾಕ್ಟರ್ ಎಸ್ ಪಿ ಬಾಲಸುಬ್ರಮಣ್ಯ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಅಧ್ಯಕ್ಷ ಹೊಸೂರು ಶಿವಣ್ಣ ಮಾತನಾಡಿ ವಿಶ್ವದ ಶ್ರೇಷ್ಠ ಗಾಯಕ ಎಸ್ ಪಿ ಬಾಲಸುಬ್ರಮಣ್ಯ ಅವರ ಹೆಸರಿನಲ್ಲಿ ಹಲವಾರು ವರ್ಷಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆ. ಹಲವಾರು ಜನಪರ ಸಮಾಜ ಸೇವೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದೇವೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ. ಉದ್ಯಮಿ ಶ್ರೀನಿಧಿ ಮಾತ ನಾಡಿ. ಕನ್ನಡ ರಾಜ್ಯೋತ್ಸವ ನವೆಂಬರ್ ತಿಂಗಳಿಗೆ ಸೀಮಿತವಾಗದೆ ವರ್ಷದ ಪೂರ್ತಿ ನಡೆಯಬೇಕು ಎಂಬ ಆಶಯ ವ್ಯಕ್ತಪಡಿಸಿದರು. ಜೈ ಭುವನೇಶ್ವರಿ ಭಾವಚಿತ್ರಕ್ಕೆ ರಾಮಸಮುದ್ರ ಕೆಇಬಿ ಶಾಖೆ ಕಿರಿಯ ಇಂಜಿನಿಯರ್ ಎಸ್ ಮಂಜುನಾಥ್ ಪುಷ್ಪಾರ್ಚನೆ ಮಾಡಿದರು. ಎಸ್ ಪಿ ಬಾಲಸುಬ್ರಮಣ್ಯ ಭಾವಚಿತ್ರ ಪುಷ್ಪಾರ್ಚನೆ. ಚಾಮರಾಜನಗರ ಕೆಇಬಿ ಲೆಕ್ಕಪರಿಶೋಧಕ ಎನ್ ಮಹೇಶ್ ನೆರವೇರಿಸಿದರು.

ಚಾಮರಾಜನಗರ ಕೆಇಬಿ ಸಹಾಯಕ ಇಂಜಿನಿಯರ್ ಸಿದ್ದರಾಜು. ಅಂತರಾಷ್ಟ್ರೀಯ ಜನಪದ ಗಾಯಕ ಸಿಎಂ ನರಸಿಂಹಮೂರ್ತಿ. ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಕಾವೇರಿ ಶಿವಕುಮಾರ್.. ಸಮಾಜ ಸೇವಕಿ ರಾಜಮ್ಮ. ಪನ್ಯದ ಉಂಡಿ ರಾಜು. ವೇದಿಕೆ ಗೌರವಾಧ್ಯಕ್ಷ. ಸುರೇಶ್ ಗೌಡ. ಪ್ರಧಾನ ಕಾರ್ಯದರ್ಶಿ ಜೋಸೆಫ್. ಉಪಾಧ್ಯಕ್ಷ ವಸಂತ ಬಂಗಾರು. ಶಂಕರ್. ಕಲೆ ನಟರಾಜ್. ಲಯನ್ ಸಂಸ್ಥೆ. ಚೇತನ, ಪತ್ರಕರ್ತ ಜಿ ಬಂಗಾರು., ಚಳುವಳಿಗಾರ ಲಿಂಗರಾಜು. ಮಿಂಚು ನಾಗೇಂದ್ರ ವಾಸು. ಸಾಹಿತಿ ಅಂಕ ಶೆಟ್ಟಿ ಶಂಕರ್. ರಾಮಸಮುದ್ರ ಗೌರಿ. ಶಂಕರ.ಗಾಯಕಿ ಪ್ರಕೃತಿ. ಎಲ್ ರಾಜೇಶ್ವರಿ ತಮಿಳು ಸಂಘದ ಜಗದೀಶ್. ಪರಶಿವಮೂರ್ತಿ. ಡಾ, ನಂಜರಾಜ್. ಸುಬ್ರಹ್ಮಣ್ಯ. ಶಿವ ಸ್ವಾಮಿ. ಸಂತೋಷ್. ಸಿದ್ದಾರ್ಥ.ಸೇರಿದಂತೆ ವಿವಿಧ ವೃತ್ತಿಯಲ್ಲಿ ಸೇವೆ ಮಾಡಿದವರಿಗೆ ಸನ್ಮಾನ ಮಾಡಲಾಯಿತು.

# ಸ್ವಚ್ಛ ರಾಮನಗರಕ್ಕೆ ವರ್ತಮಾನ ಬಳಗದ ಕಾಳಜಿ: ಮಾಲಿಕೆ

## ತ್ಯಾಜ್ಯ ಉತ್ಪತ್ತಿ ಕಡಿಮೆ ಮಾಡುವ ಮೂಲಕ ನಾಗರೀಕರು ಸ್ವಚ್ಛ ರಾಮನಗರಕ್ಕೆ ಸಂಕಲ್ಪಿಸಿ ಇ-ವೇಸ್ಟ್ ಸಂಗ್ರಹಣ ಕೇಂದ್ರ ಸ್ಥಾಪನೆಗೆ ನಾಗರೀಕರ ಮನವಿ

**ಬಿ.ವಿ.ಸೂರ್ಯ ಪ್ರಕಾಶ್**


ರಾಮನಗರ: ಸ್ವಚ್ಛ ರಾಮನಗರದ ಮೂಲಕ ಸ್ವಚ್ಛ ಭಾರತದ ಕಲ್ಪನೆಯನ್ನು ಸಾಕಾರಗೊಳಿಸಲು ಇದು ಸಕಾಲ. ತ್ಯಾಜ್ಯವಿಲೇವಾರಿ ವಿಚಾರದಲ್ಲಿ ನಗರಸಭೆ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಸವಾಲುಗಳ ನಡುವೆ ನಗರಸಭೆಯ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಪೌರಕಾರ್ಮಿಕರು ನಗರದ ಸ್ವಚ್ಛತೆಗೆ ಪಣತೊಟ್ಟಿದ್ದಾರೆ. ಅಸಲಿಗೆ ತಾಜ್ಯ ಉತ್ಪತ್ತಿಗೆ ಮತ್ತು ನಗರದ ಅಸ್ವಚ್ಛತೆಗೆ ಕಾರಣರೇ ನಾಗರೀಕ ಸಮಾಜ. ಸ್ಥಳೀಯ ನಗರ ಸಂಸ್ಥೆಗಳು ಕಸ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯವನ್ನು ನಿರ್ವಹಿಸುತ್ತಿದ್ದರೂ, ನಿಜವಾದ ಪರಿಹಾರವು ನಮ್ಮ ಮನೆಯಿಂದಲೇ ಆರಂಭವಾಗಬೇಕು. ಮನೆಮಟ್ಟದಲ್ಲಿ ಕಸವನ್ನು ಕಡಿಮೆ ಮಾಡುವುದು ಪರಿಸರ ಸಂರಕ್ಷಣೆಯತ್ತ ಮಾಡುವ ಅತ್ಯಂತ ಮುಖ್ಯ ಹೆಜ್ಜೆಯಾಗಿದೆ.

**ತ್ಯಾಜ್ಯ ಉತ್ಪತ್ತಿಯ ನಿಯಂತ್ರಣಕ್ಕೆ ನಮ್ಮ ಕೆಲವು ಸಲಹೆಗಳು ಇಲ್ಲಿವೆ.**

**ಕಸ ವಿಂಗಡಣೆ**

ಮನೆಯಲ್ಲೇ ಹಸಿಕಸ (ಅಡುಗೆ ಮನೆಯಲ್ಲಿ ಉತ್ಪತ್ತಿ ಯಾಗುವ ಕಸ), ಒಣ ಕಸ (ಪೇಪರ್, ಪ್ಲಾಸ್ಟಿಕ್ ಇತ್ಯಾದಿ) ಮತ್ತು ಅಪಾಯಕಾರಿ ಕಸಗಳನ್ನು ( ಬ್ಯಾಟರಿ, ಬಲ್ಬ್, ಪ್ಲಾಸ್ಟಿಕ್) ಪ್ರತ್ಯೇಕಿಸಿ ನಗರಸಭೆಯ ವಾಹನಕ್ಕೆ ಕೊಡಿ.

ವೈದ್ಯಕೀಯ ತ್ಯಾಜ್ಯ ಅಂದರೆ ಅವಧಿ ಮೀರಿದ ಅಥವಾ ಉಳಿದ ಹೋಗಿರುವ ಔಷಧ, ಬಳಸಿದ ಸಿರೆಂಜ್, ಗಾಯಕ್ಕೆ ಬಳಸಿದ ಬ್ಯಾಂಡೇಜ್ ಇತ್ಯಾದಿ



representation picutre

ಇವುಗಳ ವಿಲೇವಾರಿಗೆ ಹತ್ತಿರದ ಆಸ್ಪತ್ರೆ ಔಷಧ ಅಂಗಡಿಗಳಲ್ಲಿ ವಿಚಾರಿಸಿ.

**ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಬೇಡ**

ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗೆ ಬದಲಿಗೆ ಬಟ್ಟೆಯ ಚೀಲಗಳನ್ನು ಅಥವಾ ಪೇಪರ್ ಕವರ್‌ಗಳನ್ನು ಬಳಸಿ. ಪ್ಲಾಸ್ಟಿಕ್ ಬಾಟಲ್ ಬದಲು ಸ್ಟೀಲ್/ಗ್ಲಾಸ್ ಬಾಟಲ್ ಬಳಸಿ. ಅಗತ್ಯಕ್ಕೆ ತಕ್ಕಷ್ಟು ಮಾತ್ರ ಅಡುಗೆ ಮಾಡಿ, ಹಾಗೊಮ್ಮೆ ಆಹಾರ ಉಳಿದರೆ ಸಂರಕ್ಷಿಸಿ ನಂತರ ಬಳಸಿ, ಇದು ಸಾಧ್ಯವಾಗದಿದ್ದರೆ, ಪ್ರತ್ಯೇಕ ವಾಗಿಯೇ (ಹಸಿ ಕಸ) ನಗರಸಭೆಯ ವಾಹನಕ್ಕೆ ಕೊಡಿ.

**ಹೋಟೆಲ್‌ನಿಂದ ಪಾರ್ಸಲ್ ತರಬೇಕೆ? ಹೀಗೆ ಮಾಡಿ!**

ಹೋಟೆಲ್‌ನಿಂದ ಆಹಾರ ಖರೀದಿಸಬೇಕಾದಲ್ಲಿ ಮನೆಯಿಂದಲೇ ಸೂಕ್ತ ಪಾತ್ರೆಗಳನ್ನು ತೆಗೆದುಕೊಂಡು ಹೋಗಿ. ತಿಂಡಿ, ಚಟ್ನಿ, ಸಾಂಬರ್‌ಗೆ ಪ್ರತ್ಯೇಕ ಪಾತ್ರೆಗಳನ್ನು ಇರಲಿ. ಪ್ಲಾಸ್ಟಿಕ್ ಕವರ್‌ನಲ್ಲಿ ಬಿಸಿ ಆಹಾರ ಪದಾರ್ಥಗಳನ್ನು ಇಟ್ಟರೆ, ರಾಸಾಯನಿಕ ಕ್ರಿಯೆಗಳು ಸಂಭವಿಸಿ ಆಹಾರ ಪದಾರ್ಥಗಳಿಗೆ ವಿಷಕಾರಿ ಅಂಶಗಳು ಸೇರ್ಪಡೆಯಾಗಿ ದೇಹಾರೋಗ್ಯದ ಮೇಲೆ ಗಂಭೀರ ಪರಿಣಾಮಗಳು ಬೀರುವ ಸಾಧ್ಯತೆಗಳಿವೆ. ಹೀಗಾಗಿ ಈ ವಿಚಾರದಲ್ಲಿ ಎಚ್ಚರಿಕೆ ವಹಿಸಬೇಕಾದ ಅವಶ್ಯಕತೆ ಇದೆ.

**ಸುಧಾರಣೆ, ಮನೆಯಿಂದಲೇ ಆರಂಭವಾಗಲಿ!**



ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳ ಬಳಕೆಯನ್ನು ಕಡಿಮೆ ಮಾಡುವಂತೆ ಪ್ರೋತ್ಸಾಹಿಸಿ ನಗರಸಭೆಯ ಮೂಲಕ ಈಗಾಗಲೆ 5000 ಹೆಚ್ಚು ಬಟ್ಟೆ ಬ್ಯಾಗ್‌ಗಳನ್ನು ನಗರದ ಕುಟುಂಬಗಳಿಗೆ ವಿತರಸಿಲಾಗಿದೆ. ಮುಂದೆಯೂ ಇನ್ನಷ್ಟು ಕುಟುಂಬಗಳಿಗೆ ವಿತರಿಸುವ ಉದ್ದೇಶವಿದೆ. ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಮಾರಾಟ, ಸಂಗ್ರಹಣೆ ಇತ್ಯಾದಿ ವಿರುದ್ದವೂ ಅಧಿಕಾರಿಗಳು ಕ್ರಮ ಜರುಗಿಸುತ್ತಿದ್ದಾರೆ. ಸ್ವಚ್ಛ ರಾಮನಗರದ ಸಂಕಲ್ಪಕ್ಕೆ ನಾಗರೀಕರ ಸಹಕಾರ ಅತಿ ಮುಖ್ಯ. ಸುಂದರ ರಾಮನಗರಕ್ಕೆ ಪ್ರತಿಯೊಬ್ಬರು ತಮ್ಮದೇ ಕೊಡುಗೆ ನೀಡಬೇಕು.

**ಶೇಷಾದ್ರಿ** ಅಧ್ಯಕ್ಷರು, ರಾಮನಗರ ನಗರಸಭೆ

### ಇ-ವೇಸ್ಟ್ ವಿಚಾರದಲ್ಲಿ ನಗರಸಭಾಧ್ಯಕ್ಷರಿಗೆ ಮನವಿ

**ಪ್ಲಾಸ್ಟಿಕ್‌ನಂತೆ ಇ-ವೇಸ್ಟ್ (ನಿರುಪಯುಕ್ತ ಎಲೆಕ್ಟ್ರಾನಿಕ್/ ಎಲೆಕ್ಟ್ರಿಕಲ್ ವಸ್ತುಗಳು) ಸಹ ಪರಿಸರಕ್ಕೆ ಅತ್ಯಂತ ಮಾರಕವಾಗಿದೆ. ತಂತ್ರಜ್ಞಾನ ಮುಂದುವರಿದಂತೆ ದಿನ ಬಳಕೆಗೆ ಅನೇಕ ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್ ವಸ್ತುಗಳು ಮಾನವರನ್ನು ಆಕರ್ಷಿಸುತ್ತಿದೆ. ಕಾಲಾನಂತರ ಈ ವಸ್ತುಗಳು ನಿರುಪಯುಕ್ತವಾಗಿ ದಿನನಿತ್ಯದ ತ್ಯಾಜ್ಯದ ಜೊತೆಗೆ ಜನತೆ ಬೀಸಾಡುತ್ತಿದ್ದಾರೆ. ಇದನ್ನು ತಪ್ಪಿಸಲು ನಗರಸಭೆವತಿಯಿಂದಲೇ ಇ-ವೇಸ್ಟ್ ಸಂಗ್ರಹಣೆಗೆ ಕೇಂದ್ರವೊಂದನ್ನು ಸ್ಥಾಪಿಸಬೇಕು ಎಂದು ಪ್ರಜ್ಞಾವಂತ ನಾಗರೀಕರು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅವರಿಗೆ ಪತ್ರಿಕೆಯ ಮೂಲಕ ಮನವಿ ಮಾಡಿದ್ದಾರೆ.**

ಮನೆಯಲ್ಲಿ ಉತ್ಪತ್ತಿಯಾದ ತ್ಯಾಜ್ಯವನ್ನು ಮರುಬಳಕೆಗೆ ಅರ್ಹವೇ ಎಂಬುದರ ಬಗ್ಗೆ ನಿಮ್ಮ ಗಮನ ಇರಲಿ. ಬಳಸಬಹುದಾದರೆ ವಿಲೇವಾರಿ ಮಾಡುವುದು ಬೇಡ, ತರಕಾರಿ, ಹಣ್ಣುಗಳ ಸಿಪ್ಪೆ ಇತ್ಯಾದಿ, ಉಳಿದ ಆಹಾರವನ್ನು ಕೊಂಪೋಸ್ಟ್ (ಗೊಬ್ಬರ) ಮಾಡಲು ಬಳಸಬಹುದು.

ತ್ಯಾಜ್ಯ ಉತ್ಪತ್ತಿಯನ್ನು ಕಡಿಮೆ ಮಾಡುವಲ್ಲಿ ನೀವು ಯಶಸ್ವಿಯಾದರೆ, ಪರಿಸರಕ್ಕೆ ನೀವು ಅತ್ಯಮೂಲ್ಯ ಕೊಡುಗೆ ನೀಡಿದಂತಾಗುತ್ತದೆ. ಈ ವಿಚಾರದಲ್ಲಿ ನಾಗರೀಕರು ತಕ್ಷಣದಿಂದಲೇ ಸಂಕಲ್ಪಿಸಿ ಎಂದು ವರ್ತಮಾನ ಪತ್ರಿಕೆಯ ಬಳಗ ವಿನಮ್ರವಾಗಿ ಮನವಿ ಮಾಡುತ್ತಿದೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಶೀಘ್ರ ರಸ್ತೆ ದುರಸ್ತಿಪಡಿಸುತೆ ಆಗ್ರಹಿಸಿ ಪ್ರತಿಭಟನೆ

ಎಚ್.ಡಿ.ಕೋಟೆ: ತಾಲೂಕಿನ ಎನ್ ಬೇಗೂರು ಹಾಗೂ ಬಿದರಹಳ್ಳಿ ಗ್ರಾ.ಪಂ ವ್ಯಾಪ್ತಿಯ ಗ್ರಾಮಸ್ಥರು ರಸ್ತೆ ನಿರ್ಮಿಸಿ ಕೊಡುವಂತೆ ಆಗ್ರಹಿಸಿ ಬಿದರಹಳ್ಳಿ ಸರ್ಕಲ್ ಬಳಿ ಧರಣಿ ಪ್ರತಿಭಟನೆ ನಡೆಸಿದರು.

ಅಕ್ರಮ-ಸಕ್ರಮ ಸಮಿತಿಯ ಮಾಜಿ ಸದಸ್ಯ ಬಿ.ಟಿ ನರಸಿಂಹಮೂರ್ತಿ ಮಾತಾ ನಾಡಿ, ಬಿದರಹಳ್ಳಿ, ಬೀರಂಬಳ್ಳಿ ಗ್ರಾಮದ ವರೆಗೆ ಸುಮಾರು ಇಪ್ಪತ್ತು ಕಿ. ಮೀ ರಸ್ತೆ ತೀರಾ ಹದಗೆಟ್ಟಿದ್ದು, ಕಳೆದ ಇಪ್ಪತ್ತು ವರ್ಷಗಳಿಂದ ಈ ಭಾಗದ ಜನರು ನರಕ ಯಾತನೆ ಅನುಭವಿಸಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಷ್ಟೇ ಅಲ್ಲ ಪ್ರತಿನಿತ್ಯ ಶಾಲಾ ಕಾಲೇಜು ಮಕ್ಕಳು ರೋಗಿಗಳು ವಯಸ್ಸದವರು ಮತ್ತು ತೀವ್ರರ ಸಮಸ್ಯೆ ಆದವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣಿಸಲು ಸಾಧ್ಯವಾಗುತ್ತಿಲ್ಲ ಇದಕ್ಕೆ ಕಾರಣ ಶಾಸಕರ ನಿರ್ಲಕ್ಷ್ಯ ಮತ್ತು ಅಧಿಕಾರಿಗಳ ವಿಳಂಬ ನೀತಿಯೇ ಕಾರಣ ಎಂದು ಆರೋಪಿಸಿದರು.



ರೈತ ಮುಖಂಡ ಬೀರಂಬಳ್ಳಿ ಪ್ರಭಾ ಕರ್ ಮಾತಾನಾಡಿ, ನಮ್ಮ ಭಾಗದ ರಸ್ತೆ ಹದಗೆಟ್ಟ ಕಾರಣ ನಮ್ಮ ರೈತರ ಸಮಸ್ಯೆ ಯನ್ನು ಆಲಿಸಲು ಯಾವ ಅಧಿಕಾರಿಗಳು ನಮ್ಮ ಹಳ್ಳಿಗಳಿಗೆ ಬರುತ್ತಿಲ್ಲ. ಇದರಿಂದ ರೈತರಿಗೆ ಸರ್ಕಾರದಿಂದ ಸಿಗಬೇಕಾದ ಸೌಲ ಭ್ಯಗಳು ಸಿಗುತ್ತಿಲ್ಲ ಎಂದು ಅರೋಪಿಸಿದರು.

ಸುರೇಂದ್ರ ಮಾತಾನಾಡಿ, ಕಳೆದ 20 ವರ್ಷಗಳಿಂದ ಹದಗೆಟ್ಟ ರಸ್ತೆಯನ್ನು ಅಭಿ ವೃದ್ಧಿ ಪಡಿಸದೇ ನಮ್ಮ ಶಾಸಕರು ಸಂಸ ದರು ಉಸ್ತುವಾರಿ ಸಚಿವರು ಮತ್ತು ನಮ್ಮ ಜಿಲ್ಲೆಯವರೆ ಆದ ಮುಖ್ಯಮಂತ್ರಿ ನಮ್ಮ ಭಾಗದ ಜನರನ್ನ ಸಂಪೂರ್ಣ ಕಡೆಗಣಿಸಿ ದ್ದಾರೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ಪ್ರವಾಸಿಗರು ಬರುತ್ತಿದ್ದಾರೆ ಸಾಕಷ್ಟು ರೆಸಾರ್ಟ್‌ಗಳಿವೆ ಹೋಮ್ ಸ್ಟೇಗಳಿವೆ ಆದರೂ ರಸ್ತೆ ಮಾತ್ರ ಅಭಿವೃದ್ಧಿ ಆಗಿಲ್ಲ ಎಂದು ಕಿಡಿಕಾರಿದರು. ಪ್ರತಿಭಟನಾ ಸ್ಥಳಕ್ಕೆ ಬಂದ ಲೋಕೋಪಯೋಗಿ ಅಭಿಯಂತರ ರಮೇಶ್ ಪ್ರತಿಭಟನಕಾರರ ಪ್ರಶ್ನೆಗೆ ಉತ್ತರಿಸಿ, ಸಾಗರೆ ಗ್ರಾಮದಿಂದ ಬಿದರಹಳ್ಳಿ ಸರ್ಕಲ್, ಬಸಾ ಪುರ ಕೆರೆ ತನಕ ಸುಮಾರು 4.35 ಲಕ್ಷ ರೂ, ಅನುದಾನ ಬಿಡುಗಡೆ ಆಗಿ 4.70 ಕಿ.ಮೀ ಕಾಮಗಾರಿ ಪ್ರಾರಂಭವಾಗಿದೆ ಇನ್ನೂ ಎರಡು ತಿಂಗಳಲ್ಲಿ ಕಾಮಗಾರಿ ಮುಗಿಸು ತ್ತೇವೆ. ಉಳಿದ ರಸ್ತೆಯನ್ನು ಶಾಸಕರು ಮತ್ತು ಸಂಸದರ ಜೊತೆಗೆ ಚರ್ಚಿಸಿ ಸರ್ಕಾ ರದಿಂದ ಅನುದಾನ ಬಿಡುಗಡೆ ಮಾಡಿಸಿ ಕೊಂಡು ಕಾಮಗಾರಿ ಪ್ರಾರಂಭಿ ಸುತ್ತೆವೆ ಎಂದರು. ಬಿ.ಟಿ ನರಸಿಂಹಮೂರ್ತಿ, ಡಿ ಸುರೇಂದ್ರ, ತಿಮ್ಮನಾಯ್ಕ, ನಾಗೇಂದ್ರ ಸ್ವಾಮಿ, ಕಾಡುಮನೆ ಪ್ರಸನ್ನ, ರೈತ ಮುಖಂಡ ಪ್ರಭಾಕರ್, ಬೀರಂಬಳ್ಳಿ ರಾಮ್ ರಾಜ್ ಕಿರಣ್ ಕುಮಾರ್ ಇದ್ದರು.

# ಹನುಮ ಜಯಂತಿ ಆಚರಣೆ



ಗುಂಡ್ಲುಪೇಟೆ: ಮಾಜಿ ಪುರಸಭೆ ಅಧ್ಯಕ್ಷ ಪಿ ಗಿರೀಶ್ ಕುಟುಂಬಸ್ಥರು ಪ್ರತಿ ವರ್ಷ ಪಟ್ಟಣದ ಚಾಮರಾಜನಗರ ರಸ್ತೆಯಲ್ಲಿ ಇರುವ ಆಂಜನೇಯ ದೇವಸ್ಥಾನದಲ್ಲಿ ಚಿನ್ನದ ಹನುಮ ವಿಗ್ರಹಕ್ಕೆ ವಿಶೇಷ ಪೂಜೆ ಸಲ್ಲಿಸಿ ಪ್ರತಿವರ್ಷದಂತೆ ಈ ವರ್ಷವು ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ನಡೆಸುವ ಮೂಲಕ ಹನುಮಜಯಂತಿ ಆಚರಿಸಿದರು.

ಹನುಮ ಭಕ್ತರಾಗಿರುವ ಪಿ ಗಿರೀಶ್ ರವರು ದೇವಸ್ಥಾನದ ಅಭಿವೃದ್ಧಿ ಯಲ್ಲಿ ಸಾಕಷ್ಟು ತೊಡಗಿಸಿಕೊಂಡಿದ್ದರು ನಂತರ ಪ್ರತಿ ವರ್ಷವೂ ವಿಶೇಷ ಪೂಜೆ ನಡೆಸಿ ಪ್ರಸಾದ ವಿತರಿಸುವ ಮೂಲಕ ಸಾವಿರಾರು ಜನರು ಭಾಗಿಯಾವಿ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಈ ಸಂದರ್ಭದಲ್ಲಿ ಪಟ್ಟಣದ ಎಲ್ಲಾ ವರ್ಗದ ಜನರು ಸುತ್ತಮುತ್ತಲಿನ ಗ್ರಾಮದ ಜನರು ಮುಖಂಡರು ಹನುಮ ಜಯಂತಿಯಲ್ಲಿ ಭಾಗಿಯಾಗಿದ್ದರು.

# ನರಿ ಕೂಗು ಗಿರಿ ಮುಟ್ಟಲ್ಲ: ಬಿಜೆಪಿ ರೆಬೆಲ್ಸ್ ವಿರುದ್ಧ ಛಲವಾದಿ

ಚಾಮರಾಜನಗರ,: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬದ ಲಾಗುವಂತೆ ಬಿಜೆಪಿ ಭಿನ್ನಮತಿಯರ ದೆಹಲಿ ಭೇಟಿ ಕುರಿತು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಗಾದೆ ಮಾತಿನ ಮೂಲಕ ವ್ಯಂಗ್ಯವಾಡಿದರು.





ಮಂಗಳವಾರ ಕೊಳ್ಳೇಗಾಲದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ಅವರು ಏನೋ ಕೆಲಸಕ್ಕೆ ಹೋಗಿರಬೇಕಷ್ಟೇ ಹೋಗ್ಲಿ, ನಾವು ಹೋಗ್ಬೇಡ ಅಂತ ಹೇಳೋಕೆ ಆಗುತ್ತಾ..? ಹೈಕಮಾಂಡ್ ಮನಸ್ಸು ಮಾಡಿದರೆ ಯಾರು ಬೇಕಾದ್ರು ಇಳಿಯಬಹುದು, ನಾನು ಬೇಕಾದ್ರು ಇಳಿಯಬಹುದು ಎಂದರು. ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಇಳಿಸಿ ಏನ್ ಮಾಡ್ತಾರಂತೆ ಇವರು..? ಅವರು ಹತ್ತೋಕೆ ಆಗುತ್ತಾ..? ಆಗಲ್ಲ. ಯಾರಿಗೆ ಜನ ಬೆಂಬಲವಿದೆ ಎಂದು ಗುರುತಿಸಿ ಹೈಕಮಾಂಡ್ ಅಧಿಕಾರ ಕೊಡಲಿದೆ. ವಿಜಯೇಂದ್ರ ಅಧ್ಯಕ್ಷರಾಗಿರುವುದರಿಂದ ಯಾವುದೇ ಸಮಸ್ಯೆ ಇಲ್ಲಾ ಎಂದರು. ಅಲ್ಲದೆ ನರಿ ಕೂಗು ಗಿರಿ ಮುಟ್ಟಲ್ಲ ಎಂದು ಭಿನ್ನಮತಿಯರಿಗೆ ಟಾಂಗ್ ನೀಡಿದರು.

**ಬಿ.ಕೆ. ರವಿಕುಮಾರ್ । ಶರಣ ಸಾಹಿತ್ಯ ಪರಿಷತ್ ನಿಂದ ದತ್ತಿ ಕಾರ್ಯಕ್ರಮ**

# ಬಸವಾದಿ ಶರಣ ತತ್ವ ಅದರ್ಶಗಳು ಜೀವನದ ದಾರಿ ದೀಪ

ಚಾಮರಾಜನಗರ,ಶರಣ ತತ್ವ ಸಿದ್ದಾಂತಗಳು ಹಾಗೂ ಅದರ್ಶವನ್ನು ತಮ್ಮ ಜೀವನದಲ್ಲಿ ಅಳವಡಿ ಸಿಕೊಂಡರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಕೆ. ರವಿಕುಮಾರ್ ತಿಳಿಸಿದರು.

ನಗರದ ಕರಿನಂಜನಪುರದಲ್ಲಿರುವ ಶ್ರೀ ಗುಬ್ಬಿ ತೋಟದಪ್ಪ ವಿದ್ಯಾರ್ಥಿನಿಯರ ನಿಲಯದಲ್ಲಿ ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿದರು.

ಸುತ್ತೂರು ಶ್ರೀ ಕ್ಷೇತ್ರದ ಲಿಂಗೈಕ್ಯ ಶ್ರೀ ರಾಜೇಂ ದ್ರಸ್ವಾಮಿಗಳು ಶರಣ ಸಾಹಿತ್ಯ ಪರಿಷತ್ ಅನ್ನು ಸ್ಥಾಪನೆ ಮಾಡಿ, ಶರಣರ ವಿಚಾರ ಧಾರೆಗಳನ್ನು ತಿಳಿಸುವ ಜೊತೆಗೆ ಶರಣ ಪರಂಪರೆಯ ಬಗ್ಗೆ ಯುವ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಿದ್ದರು. ಅವರು ಸ್ಥಾಪಿಸಿದ ಈ ಪರಿಷತ್ ರಾಜ್ಯಾದ್ಯಂತ ವಿಸ್ತರಣೆಗೊಂಡು ಉತ್ತಮ ಕಾರ್ಯಕ್ರಮಗಳನ್ನು ರೂಪಿಸಿದೆ. ಪರಿಷತ್‌ನಿಂದ ದತ್ತಿಗಳನ್ನು ಸ್ಥಾಪನೆ ಮಾಡಿ, ಆ ಹಣದಲ್ಲಿ ಉಪನ್ಯಾಸ, ಸಾಧಕರಿಗೆ ಸನ್ಮಾನ ಮತ್ತು ಪ್ರೋತ್ಸಾ ಹಿಸುವ ಕೆಲಸವನ್ನು ಪರಿಷತ್ ನಿರಂತರವಾಗಿ ಮಾಡುತ್ತಿದೆ ಎಂದು ಹೇಳಿದರು.



ಸಂಸ್ಕೃತಿ ಚಿಂತಕ ಎಂ. ಶ್ರೀಕಾಂತ್ ಯುವ ಜನತೆ ಮತ್ತು ಸಂಸ್ಕೃತಿ ಕುರಿತು ಮಾತನಾಡಿ, ಬಸವಾಧಿ ಶರಣರು ನಡೆದು ಬಂದ ಹಾದಿ ಮತ್ತು ರಚನೆ ಮಾಡಿದ, ವಚನಗಳು ನಮ್ಮ ಬದುಕಿನ ಪಾಠ ಅಡಗಿದೆ ಎಂಬುದನ್ನು ಎಳೆ ಎಳೆಯಾಗಿ ವಿದ್ಯಾರ್ಥಿ ಗಳಿಗೆ ತಿಳಿಸಿಕೊಟ್ಟರು. ವಿದ್ಯೆಯ ಜೊತೆ ಸಂಸ್ಕೃತಿ ಯನ್ನು ರೂಡಿಸಿಕೊಳ್ಳಬೇಕು. ಹಿರಿಯರನ್ನು ಗೌರಿವಿ ಸುವ, ಗುರುಗಳನ್ನು ಪೂಜಿಸುವ ಮತ್ತು ತಂದೆ ತಾಯಿಗಳಿಗೆ ವಿದೇಯರಾಗಿ ನಡೆದುಕೊಳ್ಳುವ ಮೂಲಕ ಉತ್ತಮ ಸಂಸ್ಕೃತಿಯನ್ನು ರೂಡಿಸಿಕೊಳ್ಳ ಬೇಕು ಎಂದು ಹೇಳಿದರು.

ಕಾರ್ಯಕ್ರಮವನ್ನು ಗುಬ್ಬಿ ತೋಟದಪ್ಪ ವಿದ್ಯಾ ರ್ಥಿನಿಲಯದ ಅಧ್ಯಕ್ಷ ಕಾಳನಹುಂಡಿ ಗುರುಸ್ವಾಮಿ ಉದ್ಘಾಟಿಸಿ ಮಾತನಾಡಿ, 12ನೇ ಶತಮಾನದದಲ್ಲಿ ಬಸವಾಧಿ ಶರಣರ ಕಾಲವಾಗಿತ್ತು. ಈ ಕಾಲಘಟ್ಟವು ಉತ್ತಮ ಸಂಸ್ಕೃತಿಯನ್ನು ಹೊಂದಿದ್ದ ಕಾಲವಾಗಿತ್ತು. ಅವರ ರಚನೆ ಮಾಡಿದ ವಚನಗಳು ಸ್ವಅನುಭವವನ್ನು ಹೊಂದಿದ್ದ ಬದುಕಿಗೆ ಅದರ್ಶವನ್ನು ತಂದುಕೊಡು ವಂತಗಾಗಿದೆ. ಪ್ರತಿ ದಿನ ವಚನಗಳನ್ನು ಓದುವ ಮೂಲಕ ಅದರ ಅರ್ಥವನ್ನು ತಿಳಿದುಕೊಂಡರೆ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಿದೆ ಎಂದು ತಿಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಗುಬ್ಬಿ ತೋಟದಪ್ಪ ಟ್ರಸ್ಟ್‌ನ ಕಾರ್ಯದರ್ಶಿ ಆರ್. ಪುಟ್ಟಮಲ್ಲಪ್ಪ, ದತ್ತಿ ದಾನಿಗಳಾದ ಎಂ. ಚಿನ್ನಸ್ವಾಮಿ, ವಿಜಯಾ ಹಾಗೂ ಕುಟುಂಬದವರು, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಆರ್.ಎಸ್. ಲಿಂಗರಾಜು, ಕೆಂಪನಪುರ ಕೆ.ಎಂ. ಮಹದೇವಸ್ವಾಮಿ, ಮೂಡ್ನಾಕೂಡು ನಿಂಗಪ್ಪ, ರಾಮಸಮುದ್ರ ಶಿವಕುಮಾರಸ್ವಾಮಿ, ಅರ್ಕಪ್ಪ, ಕೊತ್ತಲವಾಡಿ ಮಹದೇವಸ್ವಾಮಿ, ವಾರ್ಡನ್ ದಾಕ್ಷಾಯಿಣಿ ಹಾಗೂ ವಿದ್ಯಾರ್ಥಿಗಳು ಮೊದಲಾದವರು ಇದ್ದರು.

# ಹುಲಿ ದಾಳಿ: ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿದ ನಿಖಿಲ್ ಕುಮಾರಸ್ವಾಮಿ

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ನವೆಂಬರ್ ಕ್ರಾಂತಿ ಸೇರಿದಂತೆ ರಾಜ್ಯ ರಾಜಕಾರಣದಲ್ಲಿ ಅತ್ತ ಸಿಎಂ ಗಾದಿಗಾಗಿ ಖುರ್ಚಿ ಬಡಿದಾಟ ತಾರಕಕ್ಕೇರುವಾಗಲೆ, ಇತ್ತ ಜೆಡಿಎಸ್ ಹಳೆ ಮೈಸೂರು ಪ್ರಾಂತ್ಯದಲ್ಲಿ ತನ್ನ ನೆಲೆ ಗಟ್ಟಿಸಿಕೊಳ್ಳಲು ಪ್ರಾರಂಭಿಸಿದೆ.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಎಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿಗೆ ಪ್ರಥಮವಾಗಿ ಭೇಟಿ ನೀಡಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಭ್ಯರ್ಥಿಯ ಆಯ್ಕೆಯಲ್ಲಿ ಉಂಟಾದ ಗೊಂದಲಗಳಿಂದ ಕ್ಷೇತ್ರ ನಮ್ಮ ತೆಕ್ಕೆಯಿಂದ ತಪ್ಪಿದೆ ಎಂಬ ಮಾತುಗಳು ಜೆಡಿಎಸ್ ಹೈಕಮಾಂಡ್ ಮಟ್ಟದಲ್ಲಿ ಕೇಳಲಾರಂಭಿಸಿದ್ದವು. ಈ ಎಲ್ಲ ಗೊಂದಲಗಳಿಗೆ ಮದ್ದೆರೆಯುವ ನಿಟ್ಟಿನಲ್ಲಿ ಇಂದಿನಿಂದಲೇ ಕಾರ್ಯಪ್ರವೃತ್ತರಾದಂತೆ ಕಾಣುತ್ತಿದೆ.

ಮೈಸೂರು-ಮಾನಂದವಾಡಿ ರಸ್ತೆಯ ತಾಲೂಕಿನ ಪ್ರವೇಶ ದ್ವಾರ ಕಂಚಮಹಳ್ಳಿ ಗ್ರಾಮದ ಬಳಿ ನಿಖಿಲ್ ಕುಮಾರಸ್ವಾಮಿ ಬರುತ್ತಿದ್ದಂತೆಯೇ ಪಟಾಕಿ ಸಿಡಿಸಿ ಸಾವಿರಾರು ಕಾರ್ಯಕರ್ತರು ಸ್ವಾಗತ ಕೋರಿದರು. ಪುರ, ಹಂಪಾಪುರ, ಹೊಮ್ಮರಗಳ್ಳಿ, ಮಾದಾಪುರ ಗ್ರಾಮಗಳಲ್ಲಿ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಹೂವಿನ ಹಾರ, ಶಾಲು ಹೊದಿಸಿ ಪುಷ್ಪವೃಷ್ಠಿಯೊಂದಿಗೆ ಆತ್ಮೀಯವಾಗಿ ಬರಮಾಡಿಕೊಂಡರು.

### ಹ್ಯಾಂಡ್ ಪೋಸ್ಟ್- ಸರಗೂರಿನಲ್ಲಿ ಜನಸ್ತೋಮ: ಅದ್ಧೂರಿ ಸ್ವಾಗತ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಾಲೂಕಿನ ನಾಲ್ಕು ದಿಕ್ಕುಗಳಿಗೆ ಪ್ರವೇಶ ಕಲ್ಪಿಸುವ ಹ್ಯಾಂಡ್ ಪೋಸ್ಟ್ ವೃತ್ತದ ಬಳಿ ಬರುತ್ತಿದ್ದಂತೆ ಮಂಗಳ ವಾದ್ಯಗಳೊಂದಿಗೆ, ಪಟಾಕಿ ಸಿಡಿಸಿ ಕಾರ್ಯಕರ್ತರು ಸ್ವಾಗತಿಸಿದರು. ತೆರೆದ ವಾಹನದಲ್ಲಿ ರೋಡ್ ಶೋ ಪ್ರಾರಂಭವಾದ ವೇಳೆ ನಾಲ್ಕು ದಿಕ್ಕುಗಳಲ್ಲಿರುವ ಕಟ್ಟಡಗಳ ಮಹಡಿಗಳಲ್ಲಿ ಹಾಗೂ ರಸ್ತೆಗಳಲ್ಲಿ ಜನ ಸಾಗರವೆ ನೆರದಿತ್ತು. ಈ ವೇಳೆ ವರಿಷ್ಠ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಕಾರ್ಯಕರ್ತರು ಜೈಕಾರ ಕೂಗಿದರು. ವೃತ್ತದ ಬಳಿ ಬೃಹತ್ ಗಾತ್ರದ ಹಣ್ಣಿನ ಹಾರ ಹಾಕಿ ಸ್ವಾಗತಿಸಿದರು. ಸರಗೂರು ಸಮೀಪದ ಬಿಡಗಲು ಪಡುವಲು ವಿರಕ್ತಮಠಕ್ಕೆ ಭೇಟಿ ನೀಡಿ ಮಹದೇವಸ್ವಾಮಿಯ ಆಶೀರ್ವಾದ ಪಡೆದರು. ಸರಗೂರಿನ ಕೆಇಬಿ ಕಚೇರಿಯಿಂದ ಮಹಾವೀರ ವೃತ್ತದವರೆಗೂ ರೋಡ್ ಶೋ ನಡೆಸಲಾಯಿತು. ಈ ವೇಳೆ ಅಭಿಮಾನಿಗಳು ಬೃಹತ್ ಸೇಬಿನ ಹಾರ ಹಾಕದ ಕಾರ್ಯಕರ್ತರು ನಗಾರೆ ಸದ್ದಿಗೆ ಕುಣಿದು ಕುಪ್ಪಳಿಸಿದರು.

**ಎಲ್ಲೆಡೆ ಪಟಾಕಿ ಸಿಡಿಸಿ ಸ್ವಾಗತಿಸಿದರು.**

ಹುಲಿ ದಾಳಿಗೆ ರೈತರು ಮೃತಪಟ್ಟಿರುವುದರಿಂದ ಸಫಾರಿ ಬಂದ್ ಮಾಡಿರುವುದು ಅವೈಜ್ಞಾನಿಕ ನಿರ್ಧಾರ. ಇದರಿಂದ ತಾಲೂಕಿನ ಪ್ರವಾಸೋದ್ಯಮವನ್ನು ಕುಂಠಿತಗೊಳಿಸಿದಂತೆ ಈ ನೀತಿ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಆಕಿದಂತೆ ಎಂದು ಮಾರ್ಮಿಕವಾಗಿ ನುಡಿದರು. ತಾಲೂಕಿನ ಸಮಸ್ಯೆಗಳ ಬಗ್ಗೆ ಜೆಡಿಎಸ್ ಪಕ್ಷ ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸಲಾಗುವುದು ಎಂದರು.

ಜೆಡಿಎಸ್ ತಾಲೂಕು ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ಜೆಡಿಎಸ್ ಮುಖಂಡ ಕೆಎಂ ಕೃಷ್ಣನಾಯಕ, ಮಾಜಿ ಶಾಸಕ ಅಶ್ವಿನ್ ಕುಮಾರ್, ಚಿನ್ನಿ ರವಿ, ಹಾಗೂ ಜೆಡಿಎಸ್ ಪಕ್ಷದ ಮುಖಂಡರು ಕಾರ್ಯಕರ್ತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.





## ಹುಲಿ ದಾಳಿ ಸಂತ್ರಸ್ತರಿಗೆ ಶಾಶ್ವತ ಭದ್ರತೆಗೆ ಆಗ್ರಹ

ಹುಲಿ ದಾಳಿಗೆ ಮೃತಪಟ್ಟ ಹಳೆ ಹೆಗ್ಗುಡಿಲು ಗ್ರಾಮದ ಚೌಡನಾಯಕರ ಮನೆಗೆ ಭೇಟಿ ನೀಡಿ, ಮೃತರ ಮಕ್ಕಳ ವಿದ್ಯಾಭ್ಯಾಸಕ್ಕೆ ಪಕ್ಷದಿಂದ ಸಂಪೂರ್ಣ ನೆರವು ನೀಡುವುದಾಗಿ ಘೋಷಿಸಿದರು. ಹುಲಿ ದಾಳಿಗೆ ಮೃತ ಪಟ್ಟವರ ಕುಟುಂಬಗಳಿಗೆ ಸರ್ಕಾರ ಪರಿಹಾರ ನೀಡಿ ಸುಮ್ಮನಾಗುತ್ತಿದೆ ಇದರಿಂದ ಸಂತ್ರಸ್ತರ ಕುಟುಂಬ ಅತಂತ್ರಕ್ಕೆ ಸಿಲುಕಲಿದೆ. ಆದರೆ, ಮೃತ ಪಟ್ಟ ರೈತರ ಕುಟುಂಬಗಳಿಗೆ ಶಾಶ್ವತ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಜೆಡಿಎಸ್ ನೆರವು ನೀಡಲಾಗುವುದು ಎಂದು ಘೋಷಿಸಿದರು.

ವ್ಯಾಘ್ರನ ಉಪಟಳಕ್ಕೆ ಉಸಿರು ಚೆಲ್ಲಿದ ರೈತರಾದ ಕೂಡಗಿ ಗ್ರಾಮದ ದೊಡ್ಡಲಿಂಗಯ್ಯ, ಮುಳ್ಳೂರು ಸಮೀಪದ ಬೆಣ್ಣೆಗೆರೆ ರೈತ ರಾಜಶೇಖರ ಮೂರ್ತಿ ಹಾಗೂ ದಾಳಿಯಿಂದ ಶಾಶ್ವತ ಅಂಧತ್ವಕ್ಕೆ ಗುರಿಯಾದ ಮಾದೇಗೌಡ ಕುಟುಂಬಗಳಿಗೆ ಭೇಟಿ ನೀಡಿ ಆರ್ಥಿಕ ನೆರವು ನೀಡಿದರು



ಇಲ್ಲಿನ ಲೋಪ ದೋಷಗಳ ಬಗ್ಗೆ ಸರ್ಕಾರಕ್ಕೆ ಚಾಟಿ ಬೀಸಲು ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭೇಟಿ ನೀಡಿದ್ದಾರೆ. ಹುಲಿ ದಾಳಿಗೆ ಮೃತಪಟ್ಟವರ ಮನೆಗಳಿಗೆ ಅರಣ್ಯ ಸಚಿವರು ಭೇಟಿ ನೀಡಿಲ್ಲ. ಇದು ಇವರ ಆಡಳಿತ ವೈಖರಿಯನ್ನು ಪ್ರಶ್ನಿಸುವಂತಾಗಿದೆ.

**ಕೆ.ಎಂ.ಕೃಷ್ಣನಾಯಕ** ಜೆಡಿಎಸ್ ಮುಖಂಡ

## ಮಹನೀಯರ ಪುತ್ಥಳಿಗಳಿಗೆ ಮಾಲಾರ್ಪಣೆ

ತಾಲೂಕಿನ ಹೈರಿಗೆ, ಎಚ್.ಡಿ.ಕೋಟೆ ಪಟ್ಟಣ, ಸರಗೂರು ಸಮೀಪದ ದೇವಲಾಪುರ ಗ್ರಾಮದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ, ತುಂಬಸೋಗೆ ಗ್ರಾಮದಲ್ಲಿರುವ ಶ್ರೀಮಹರ್ಷಿ ವಾಲ್ಮೀಕಿ ಪುತ್ಥಳಿಗಳಿಗೆ ಮಾಲಾರ್ಪಣೆ ಮಾಡಿದ ನಿಖಿಲ್ ಕುಮಾರಸ್ವಾಮಿ ಹಾಗೂ ಕೆ.ಎಂ.ಕೃಷ್ಣ ನಾಯಕ ಪುಷ್ಪಾರ್ಚನೆ ಮಾಡಿ ಮಹನೀಯರಿಗೆ ಗೌರವ ಸಲ್ಲಿಸಿದರು. ಆಗಮನ ಹಿನ್ನೆಲೆ ಎಚ್.ಡಿ.ಕೋಟೆ ಹಾಗೂ ಸರಗೂರು ಮಾರ್ಗದ ಎಲ್ಲ ಗ್ರಾಮಗಳಲ್ಲಿ ತಳಿರು ತೋರಣ, ಜೆಡಿಎಸ್ ಬಾವುಟಗಳು ರಾರಾಜಿಸಿದ್ದವು.

## ತಾಲೂಕು ಅಭಿವೃದ್ಧಿಯಲ್ಲಿ ಕುಂಠಿತ : ನಿಖಿಲ್ ಕಿಡಿ

ಎಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕುಗಳು ಅಭಿವೃದ್ಧಿಯಲ್ಲಿ ಹಿಂದೆ ಉಳಿದಿವೆ. ಜ್ವಲಂತ ಸಮಸ್ಯೆಗಳು ತಾಂಡವವಾಡುತ್ತಿವೆ. ಇವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಆಡಳಿತ ಪಕ್ಷ ಕಾರ್ಯಪ್ರವೃತ್ತರಾಗಿಲ್ಲ ಎಂದು ಕಿಡಿಕಾರಿದರು. ಅವಳಿ ತಾಲೂಕಿನಲ್ಲಿ ಇಂದಿಗೂ ಕಡು ಬಡತನದಲ್ಲಿ ಜೀವನ ನಡೆಸುತ್ತಿದ್ದಾರೆ. ಇವರನ್ನು ಆರ್ಥಿಕವಾಗಿ ಬಲಿಷ್ಠಗೊಳಿಸುವ ನಿಟ್ಟಿನ ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸಬೇಕು. ತಾಲೂಕಿನ ಹಲವಾರು ರೈತರುಗಳಿಗೆ ಇಂದಿಗೂ ಸಾಗುವಳಿ ನೀಡಿಲ್ಲ. ಕಬಿನಿ ಅಣೆಕಟ್ಟೆ ನಿರ್ಮಾಣದ ವೇಳೆ ಭೂಮಿ ಕಳೆದುಕೊಂಡ ಕೆಂಚನಹಳ್ಳಿ ಗ್ರಾಮಸ್ಥರು, ಭೂಮಿ ನೀಡುವಂತೆ ಹಲವಾರು ದಿನಗಳಿಂದ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದರೂ ಆಡಳಿತ ಪಕ್ಷದ ಜನಪ್ರತಿನಿಧಿಗಳು ಭೇಟಿ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖ್ಯಮಂತ್ರಿ, ಉಸ್ತುವಾರಿ ಸಚಿವ, ಸಂಸದರು, ಶಾಸಕರು ಜಿಲ್ಲೆಯವರೇ ಆಗಿದ್ದರೂ ಹಿಂದುಳಿದ ತಾಲೂಕು ಎಚ್.ಡಿ.ಕೋಟೆಯನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಚಿಂತನೆ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ನ 136 ಶಾಸಕರು ಅಧಿಕಾರದಲ್ಲಿದ್ದಾರೆ. ಆದರೆ, ಅಭಿವೃದ್ಧಿ ಕಂಡಿಲ್ಲ. ಕೇವಲ ಕುರ್ಚಿ ಬಡಿದಾಟದಲ್ಲಿ ಕಾಂಗ್ರೆಸ್ ಕಾಲಹರಣ ಮಾಡುತ್ತಿದ್ದಾರೆ. ರಾಜ್ಯದ ಅಭಿವೃದ್ಧಿ ಪರ ಯೋಚಿಸುವ ನಿಟ್ಟಿನಲ್ಲಿ ಜೆಡಿಎಸ್ ಕಾರ್ಯಕ್ರಮ ಕೈಗೊಳ್ಳಲಿದೆ. ರಾಜ್ಯದ ಅಭಿವೃದ್ಧಿ ಕುಂಠಿತ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸಲಾಗುವುದು ಎಂದರು.

# ಕಾಂಗ್ರೆಸ್ ಸಂಪೂರ್ಣವಾಗಿ ಹಿಂದೂ ವಿರೋಧಿ ಪಕ್ಷ: ಛಲವಾದಿ ನಾರಾಯಣಸ್ವಾಮಿ




ಚಾಮರಾಜನಗರ, ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಧರ್ಮ ಕೆದಕಿ ಕಿಡಿಕಾರಿದ ಛಲವಾದಿ ನಾರಾಯಣಸ್ವಾಮಿ ಕಾಂಗ್ರೆಸ್ ಪಕ್ಷ ಸಂಪೂರ್ಣವಾಗಿ ಹಿಂದೂ ವಿರೋಧಿ ಪಕ್ಷ. ಎಂದು ಕಿಡಿಕಾರಿದರು.

ಮೆದುಳಿಗೆ ನಾಲಿಗೆಗೂ ಕನೆಕ್ಷನ್ ಇಲ್ದೆ ಇರೋರು ವಿರೋಧ ಪಕ್ಷದ ನಾಯಕರಾಗಿ ದೆಹಲಿಯಲ್ಲಿ ಕುಳಿತಿದ್ದಾರೆ. ಶಾರುಕ್ ಖಾನ್ ಮದ್ವೆಯಾಗಿದ್ದು ಹಿಂದೂ ಯುವತಿಯನ್ನು, ಅವರಿಗೆ ಮಕ್ಕಳಾಯ್ತಲ್ಲ, ಅವರು ಹಿಂದುಗಳಾ? ಮುಸ್ಲಿಂ ಆಗಿದ್ದಾರೆ. ಅದೇ ರೀತಿ, ಗಾಂಧಿ ಕುಟುಂಬದ ಧರ್ಮ ಯಾವ್ದು? ಎಂದು ಪ್ರಶ್ನಿಸಿದರು. ಇಂಧಿರಾ ಗಾಂಧಿ ಮದ್ವೆ ಆಗಿದ್ದು ಫಿರೋಜ್ ಖಾನ್?ನಾ, ರಾಜೀವ್ ಗಾಂಧಿ ಕ್ರಿಶ್ಚಿಯನ್ ನ ಮದ್ವೆಯಾದರು, ಪ್ರಿಯಾಂಕಾ ಗಾಂಧಿ ಕ್ರಿಶ್ಚಿಯನ್?ಅನ್ನು ಮದ್ವೆಯಾದ್ರು. ಇವರೆಲ್ಲ ಬೇರೆ ಬೇರೆ ಧರ್ಮದವರನ್ನು ಮದ್ವೆಯಾಗಿ ಅದ್ಯಾಗೆ ಬ್ರಾಹ್ಮಣರಾಗಿ ಉಳಿದಿದ್ದಾರೆ ಎಂಬುದನ್ನು ಜನರು ಪ್ರಶ್ನೆ ಮಾಡುತ್ತಿದ್ದಾರೆ. ಇವರು ಖಾನ್ ನ ಮದ್ವೆಯಾಗಿ ಖಾನ್ ಆಗಿಲ್ಲ, ಹಿಂದುಗಳಾಗಿ ಉಳಿಯುತ್ತಾರೆ ಅದು ಹೇಗೆ ಎಂದು ಟೀಕಿಸಿದರು.

ಮನಸು ಕೆಟ್ಟಿದೆ-ದಲಿತ ಸಚಿವರ ಸ್ಥಾನಕ್ಕೆ ಕುತ್ತು: ಸಿಎಂ-ಡಿಸಿಎಂ ಬ್ರೇಕ್ ಫಾಸ್ಟ್ ಮೀಟಿಂಗ್ ಬಗ್ಗೆ ಲೇವಡಿ ಮಾಡಿದ ಛಲವಾದಿ, ಪಾಪ ಸಿದ್ದರಾಮಯ್ಯಗೆ ಡಿಕೆ ಮನೆ ಗೊತ್ತಿರಲಿಲ್ಲ, ಡಿಕೆಗೆ ಸಿಎಂ ಮನೆ ಗೊತ್ತಿರಲಿಲ್ಲ. ಒಬ್ಬರನ್ನು ಮತ್ತೊಬ್ಬರು ಮುಖ ನೋಡುವ ಪರಿಸ್ಥಿತಿಯಿಲ್ಲ, ಒಬ್ಬರ ಮನೆಗೆ ಮತ್ತೊಬ್ಬರು ಹೋದವರಲ್ಲ. ಎಲ್ಲ ಅಧಿಕಾರಕ್ಕಾಗಿ ಅಂಟಿಕೊಂಡು ಇಡೀ ರಾಜ್ಯವನ್ನು ಲೂಟಿ ಮಾಡುವಂತ ಪರಿಸ್ಥಿತಿ ಇದೆ ಎಂದರು.

# ಭಕ್ತಿ, ಶ್ರದ್ಧೆಯ ಹನುಮ ಜಯಂತಿ

ರಾಮನಗರ: ಮಂಗಳವಾರ ಹನುಮ ಜಯಂತ್ಯೋತ್ಸವವನ್ನು ಜಿಲ್ಲಾದ್ಯಂತ ನಾಗರೀಕರು ಅತ್ಯಂತ ಭಕ್ತಿ ಮತ್ತು ಶ್ರದ್ದೆಯಿಂದ ಆಚರಿಸಿದರು.



ನಗರದ ಅಗ್ರಹಾರದಲ್ಲಿರುವ ಅಭಯ ಆಂಜನೇಯಸ್ವಾಮಿ, ಕೆಂಗಲ್‌ನ ಹನುಮಂತರಾಯನ ದೇವಾ ಲಯ, ಬಿಡದಿ ಹೋಬಳಿ ಹನುಮಂತನಗರದ ಕೋತಿ ಆಂಜನೇಯಸ್ವಾಮಿ ದೇವಾ ಲಯ, ಕುರುಬರಹಳ್ಳಿ ಗ್ರಾಮದ ಅಭಯ ಆಂಜನೇಯಸ್ವಾಮಿ, ಬಿಳಗುಂಬ ಗ್ರಾಮದ ವೀರಾಂಜನೇಯಸ್ವಾಮಿ ದೇವಾಲಯ ಸೇರಿದಂತೆ ಜಿಲ್ಲಾದ್ಯಂತ ಬಹುತೇಕ ಪ್ರತಿ ಗ್ರಾಮದಲ್ಲೂ ಇರುವ ಹನುಮನ ದೇವಾಲಯದಲ್ಲಿ ಮಂಗಳವಾರ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ, ಅಲಂಕಾರ ಸೇವೆ, ಪ್ರಸಾದ ವಿನಿಯೋಗ ನಡೆಯಿತು. ಕುರುಬರಹಳ್ಳಿಯ ಬೃಹತ್ ಆಂಜನೇಯಸ್ವಾಮಿಗೆ ಭಕ್ತರೊಬ್ಬರು ಸ್ಟಾರ್ ಫ್ರೂಟ್ ಹಾರ ಸಮರ್ಪಿಸಿ, ಬೃಹತ್ ಮೂರ್ತಿಯ ಪಾದಗಳಿಗೆ ಬೆಣ್ಣೆ ಅಲಂಕಾರ ಸೇವೆ ನೆರವೇರಿಸಿದರು. ನಗರದ ಅಗ್ರಹಾರದಲ್ಲಿರುವ ಅಭಯ ಆಂಜನೇಯಸ್ವಾಮಿ ದೇವಾಲಯದಲ್ಲಿ ಮಂಗಳವಾರ ಬೆಳ್ಳಂಬೆಳಿಗ್ಗೆಯಿಂದಲೇ ವಿವಿಧ ಧಾರ್ಮಿಕ ವಿಧಿವಿಧಾನಗಳಿಗೆ ಚಾಲನೆ ದೊರೆಯಿತು. ಬೆಳಿಗ್ಗೆಯಿಂದಲೇ ನೂರಾರು ಭಕ್ತರು ತಮ್ಮ ಕುಟುಂಬ ಸಮೇತ ದೇವಾಲಯಕ್ಕೆ ಭೇಟಿ ಕೊಟ್ಟು ತಮ್ಮ ಭಕ್ತಿ ನಿವೇಧಿಸಿಕೊಂಡರು. ನಾಗರೀಕರ ಸಹಕಾರದಲ್ಲಿ ಭಕ್ತರ ಸೇವಾ ಗುಂಪು ಏರ್ಪಡಿಸಿದ್ದ ಅನ್ನಸಂತರ್ಪಣೆಯಲ್ಲಿ

# ಕಾಂಗ್ರೆಸ್ ವಿರುದ್ಧ ಬಿಜೆಪಿ ರೈತ ಮೋರ್ಚಾ ಆಕ್ರೋಶ

ಎಚ್.ಡಿ.ಕೋಟೆ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಿನಿಂದ ಜನವಿರೋಧಿ ಹಾಗೂ ರೈತ ವಿರೋಧಿ ನೀತಿಗಳನ್ನು ಅನುಸರಿಸುತ್ತಾ ಬರುತ್ತಿದೆ. ಆಸ್ತಿ ನೋಂದಣಿ ಶುಲ್ಕ, ವಿದ್ಯುತ್ ದರ ಹೆಚ್ಚಳ ಮತ್ತು ಟಿಸಿ ಅಳವಡಿಸಲು ದರ ದುಪ್ಪಟ್ಟು ಮಾಡಿರುವುದು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಮಾಡುವ ಮೂಲಕ ಬಡವರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿ ಬಿಜೆಪಿ ತಾಲೂಕು ರೈತ ಮೋರ್ಚಾ ಮಂಗಳವಾರ ಪ್ರತಿಭಟನೆ ನಡೆಸಿತು .

ಪಟ್ಟಣದ ಬಾಪೂಜಿ ಸರ್ಕಲ್ ನಿಂದ ಮಿನಿ ವಿಧಾನಸೌಧವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಕಾಂಗ್ರೆಸ್ ಸರ್ಕಾರ ಹಾಗೂ ಸ್ಥಳೀಯ ಶಾಸಕ ಅನಿಲ್ ಚಿಕ್ಕಮಾದು ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಭಿತ್ತಿಪತ್ರಗಳನ್ನು ಹಿಡಿದು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ರೈತಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ವೆಂಕಟೇಶ್ ಮಾತನಾಡಿ, ಸುಳ್ಳು ಭರವಸೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಕುರ್ಚಿ ಕಿತ್ತಾಟದಲ್ಲಿ ಮುಳುಗಿದ್ದು, ರೈತರ ಬದುಕಿಗೆ ಕೊಳ್ಳಿ ಇಟ್ಟಿದೆ. ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಜೊತೆಗೆ ಭತ್ತ, ರಾಗಿ ಖರೀದಿ ಕೇಂದ್ರ ತೆರೆಯದೆ ನಿರ್ಲಕ್ಷ್ಯ ವಹಿಸಿದೆ. ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಘೋಷಣೆ ಮಾಡದೆ ರೈತರು ಆತ್ಮಹತ್ಯೆ ದಾರಿ ಹಿಡಿಯುವಂತೆ ಮಾಡಿದೆ. ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಬಂಡೀಪುರ ಹಾಗೂ ನಾಗರಹೊಳೆ ಅರಣ್ಯ ವ್ಯಾಪ್ತಿಯ ಕಾಡಂಚಿನ ಭಾಗಗಳಲ್ಲಿ ಕಾಡುಪ್ರಾಣಿಗಳ ಉಪಟಳ ಹೆಚ್ಚಾಗಿದೆ. ತಿಂಗಳ ಅಂತರದಲ್ಲಿ ಮೂವರು ರೈತರು ಹುಲಿ ದಾಳಿಗೆ ಬಲಿಯಾಗಿದ್ದಾರೆ. ಇಷ್ಟಾದರೂ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಮೃತರ ಮನೆಗಳಿಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿಲ್ಲ. ತಮ್ಮದು ರೈತ ಪರ ಸರ್ಕಾರ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ, ರೈತ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಮೈಸೂರು ಗ್ರಾಮಾಂತರ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸಿ.ಕೆ.ಗಿರೀಶ್ ಮಾತನಾಡಿ, ಮಲೆನಾಡಿನಲ್ಲಿ ಹೆಚ್ಚಾಗಿ ಅಡಿಕೆ ಬೆಳೆಯುತ್ತಾರೆ. ಅದೇ ರೀತಿ ನಮ್ಮಲ್ಲಿ ಹೈನುಗಾರಿಕೆ ಉತ್ತೇಜಿಸುವ ನಿಟ್ಟಿನಲ್ಲಿ ಅತೀ ಹೆಚ್ಚಾಗಿ ಮೆಕ್ಕೆಜೋಳ ಬೆಳೆಯಲಾಗುತ್ತದೆ. ಆದರೆ, ಬೆಳೆದ ಬೆಳೆಗಳಿಗೆ ಸೂಕ್ತ





ಬೆಲೆ ಸಿಗದೇ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಳಗಾವಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಕಬ್ಬು ಬೆಳಗಾರರ ಜೊತೆ ಅಹೋರಾತ್ರಿ ಧರಣಿ ನಡೆಸಿ, ಕಬ್ಬು ಬೆಳೆಗೆ ಬೆಂಬಲ ಸಿಗುವಂತೆ ಮಾಡಿದರು. ಅದೇ ರೀತಿ ಇತರ ಬೆಳೆಗಳಿಗೂ ಬೆಂಬಲ ಬೆಲೆ ಘೋಷಣೆ ಮಾಡುವಂತೆ ಒತ್ತಾಯಿಸಿ ಬಿಜೆಪಿ ಉಗ್ರ ಹೋರಾಟ ಮಾಡಲಿದೆ ಎಂದರು. ಈ ಕೂಡಲೇ ಸರ್ಕಾರ ಹತ್ತಿ, ಮೆಕ್ಕೆಜೋಳ, ರಾಗಿ ಸೇರಿದಂತೆ ರೈತರ ಬೆಳೆಗಳಿಗೆ ಬೆಂಬಲ ಘೋಷಣೆ ಮಾಡಬೇಕು. ಇಲ್ಲವಾದಲ್ಲಿ ತಾಲೂಕಿನಾದ್ಯಂತ ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು. ಬಳಿಕ ತಾಲೂಕು ದಂಡಾಧಿಕಾರಿ ಶ್ರೀನಿವಾಸ್ ಅವರಿಗೆ ಮನವಿ ಪತ್ರ ನೀಡಲಾಯಿತು. ಬಿಜೆಪಿ ತಾಲೂಕು ಅಧ್ಯಕ್ಷ ಶಂಭೇಗೌಡ, ರೈತ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ ವೆಂಕಟೇಶ್, ಮುಖಂಡರಾದ ಕೆ.ಪಿ.ಗುರುಸ್ವಾಮಿ, ಎಚ್.ಪಿ ಶಿವರಾಜಪ್ಪ, ಗುರುಸ್ವಾಮಿ, ಮಾದಾಪುರ ನಂದೀಶ್, ಮಂಜುಳಾ ಬಾಯಿ, ವೆಂಕಟಸ್ವಾಮಿ, ಬಿಡಗಲು ರಾಜು, ವಿವೇಕಾನಂದ, ಮಂಜುನಾಥ್, ರಮೇಶ್, ಸೋಮಾಚಾರಿ, ಕಾಶಿಪತಿ, ಲೋಕೇಶ್, ಚಂದ್ರಮೌಳಿ, ಶ್ಯಾಮ್ ಸುಂದರ್, ಬಸವರಾಜಪ್ಪ, ಪುಟ್ಟಸ್ವಾಮಿ, ಎಸ್ ಸೋಮಾಚಾರ್, ರಾಜೇಶ್ , ಪೃಥ್ವಿ ಕುಮಾರ್, ಕಂಚಮಳ್ಳಿ ನಟರಾಜು, ಬಸವರಾಜು, ವಿನೋದ್ ರಾವ್, ರಾಮು, ಕೆಂಡಗಣಸ್ವಾಮಿ, ವಿನೋದ್ ರಾವ್, ಗುರುಸ್ವಾಮಿ, ಗೋಪಾಲಯ್ಯ, ಮಂಜುನಾಥ್, ಶಿವರಾಜು, ಸಿದ್ದೇಗೌಡ, ಸ್ವಾಮಿಗೌಡ, ಚೆನ್ನಪ್ಪ, ಚೆಲುವಯ್ಯ, ಅಣ್ಣಯ್ಯ, ಅರಲಳ್ಳಿ ಕೃಷ್ಣ, ನಾಗಮಲೆ ಶ್ರೀನಿವಾಸ್, ಚಿಕ್ಕಣ್ಣ, ಸುರೇಶ್ , ಕೆಂಡಗಣಸ್ವಾಮಿ, ರೂಪೇಶ್, ಅಂಕಪ್ಪ ಇದ್ದರು.

# ಅಧಿಕಾರಿ ದಬ್ಬಾಳಿಕೆ ವಿರೋಧಿಸಿ ಪ್ರತಿಭಟನೆ

ಹನೂರು: ಮಾರ್ಟಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ದಬ್ಬಾಳಿಕೆಯನ್ನು ವಿರೋಧಿಸಿ ಗ್ರಾಮ ಪಂಚಾಯಿತಿ ಕಚೇರಿ ಮುಂದೆ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಮಂಗಳವಾರ ಪ್ರತಿಭಟನೆಯನ್ನು ನಡೆಸಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘದ ನೂರಾರು ಕಾರ್ಯಕರ್ತರು ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ಪ್ರತಿಭಟನೆಗೆ ಕುಳಿತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ವಿರುದ್ಧ ಘೋಷಣೆಗಳನ್ನು ಕೂಗಿದರು.

ಈ ವೇಳೆ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕದ ಅಧ್ಯಕ್ಷ ಅಮ್ಜದ್ ಖಾನ್ ಮಾತನಾಡಿ ಮಾರ್ಟಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಸಾರ್ವಜನಿಕರ ಸೇವೆಯನ್ನು ಸರಿಯಾಗಿ ನಿಭಾಯಿಸುತ್ತಿಲ್ಲ. ಜೊತೆಗೆ ಪ್ರಶ್ನೆ ಕೇಳುವವರ ಮೇಲೆ ದಬ್ಬಾಳಿಕೆ ಮಾಡುತ್ತಾರೆ. ಹಾಗಾಗಿ ಇವರ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು. ಜೊತೆಗೆ ಸಾರ್ವಜನಿಕರ ಜೊತೆ ಸರಿಯಾದ ರೀತಿ ನಡೆದುಕೊಳ್ಳಲು ನಡವಳಿಕೆಯನ್ನು ಕಲಿಸಬೇಕು ಮುಂದಿನ ದಿನಗಳಲ್ಲಿ ಬದಲಾವಣೆ ಆಗದಿದ್ದರೆ ಉಗ್ರವಾದ ಹೋರಾಟವನ್ನು ಸಹ ಮಾಡಬೇಕಾಗುತ್ತದೆ ಎಂದರು.

ಉದ್ಯೋಗ ನೀಡುತ್ತಿಲ್ಲ : ನರೇಗಾ ಯೋಜನೆ ಅಡಿಯಲ್ಲಿ ಸ್ಥಳೀಯ ನಿವಾಸಿಗಳಿಗೆ ನೂರು ದಿನ ಕೆಲಸ ಕೊಡಬೇಕೆಂಬ ನಿಯಮ ಇದ್ದರೂ ಸಹ ಸ್ಥಳೀಯರು ಕೆಲಸ ಕೇಳಿ



ಮನವಿ ಮಾಡಿದ್ದರು ಸಹ ಸಂಬಂಧ ಪಟ್ಟ ಅಧಿಕಾರಿಗಳು ತಾತ್ಸಾರ ಮನೋಭಾವನೆ ತಾಳಿ ಕೆಲಸ ನೀಡದೆ ಅಲೆದಾಡಿಸುತ್ತಿದ್ದಾರೆ. ಇದರಿಂದ ಸ್ಥಳೀಯ ನಿವಾಸಿಗಳಿಗೆ ಕೂಲಿ ಕೆಲಸ ಸಿಗದೇ ಗುಳೇ ಹೊರಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲಸ ಕೇಳಲು ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡಿದರೆ ಅಲ್ಲಿನ ಸಿಬ್ಬಂದಿಗಳು ಸಹ ಅದು ಅಧಿಕಾರಿಗಳು ಸಹ ಸಾರ್ವಜನಿಕರ ಜೊತೆ ಸರಿಯಾದ ವರ್ತನೆ ಇಲ್ಲದೆ ಸ್ಥಳೀಯ ನಿವಾಸಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಹಾಗಾಗಿ ಇದು ಪುನರಾವರ್ತನೆಯಾಗದಂತೆ ಹಿರಿ ಅಧಿಕಾರಿಗಳು ಇವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಎಚ್ಚರಿಕೆ ನೀಡಿದ್ದಾರೆ.

ಸ್ವಚ್ಛತೆಗೆ ಪ್ರಾಮುಖ್ಯತೆ ಕೊಡಲಿ : ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅನರ್ಮಲ್ಯ ತಾಂಡವ ಮಾಡುತ್ತಿದ್ದು ಎಲ್ಲೆಡೆ ಸಾಂಕ್ರಾಮಿಕ ರೋಗದ ಭೀತಿ ಆವರಿಸಿದೆ. ಮೊದಲು ಇಲ್ಲಿನ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದಬ್ಬಾಳಿಕೆಯನ್ನು ನಿಲ್ಲಿಸಿ ಸ್ವಚ್ಛತ ಕಡೆ ಗಮನ ನೀಡಲಿ ಎಂದು ಎಚ್ಚರಿಕೆ ನೀಡಿದ್ದಾರೆ.

ಇದೆ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಗೌಡೇ ಗೌಡ, ತಾಲೂಕು ಗೌರವಾಧ್ಯಕ್ಷ ರಾಜಣ್ಣ, ಮಹಿಳಾ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೂಂಗುಡಿ, ತಾಲೂಕು ಮಹಿಳಾ ಘಟಕದ ಅಧ್ಯಕ್ಷ ರಾಜಮಣಿ, ಪಳನಿ ಸ್ವಾಮಿ ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

# ಶಿಕ್ಷಣದಿಂದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲ





ಚಾಮರಾಜನಗರ, ಶಿಕ್ಷಣದಿಂದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲ ವಾಗಲು ಸಾಧ್ಯ ಎಂದು ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯ ವಿದ್ಯಾಲಯ ಪ್ರಾಂಶುಪಾಲ ಡಾ ಕೆಸಿ ಬಸವಣ್ಣ ತಿಳಿಸಿದರು.

ನಗರದ ಜೋಡಿ ರಸ್ತೆಯಲ್ಲಿ ಇರುವ ಜೆಎಸ್ಎಸ್ ಬಿಎಡ್ ಕಾಲೇಜ್ ಸಭಾಂಗಣದಲ್ಲಿ ನಡೆದ ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭ, ಅಂತಿಮ ವರ್ಷದ ಬಿಇಡಿ ಪ್ರಶಿಕ್ಷಣಾರ್ಥಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ನಿಮ್ಮ ಕೈಲಿದೆ. ನೀವು ಶಿಕ್ಷಕರಾಗಿ ಶಾಲೆಗಳಿಗೆ ತೆರಳಿ ಪಾಠ ಮಾಡುವುದರಿಂದ ನಿರಂತರ ಅಧ್ಯಯನ ಅಗತ್ಯವಾಗಿರುತ್ತದೆ. ನೀವು ಮಾಡುವ ಭೋದನೆಯಿಂದ ವಿದ್ಯಾರ್ಥಿಗಳ ಭವಿಷ್ಯ ಉತ್ತಮವಾಗಲಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಜೆಎಸ್ಎಸ್ ಬಿಎಡ್ ಕಾಲೇಜ್ ವಿದ್ಯಾಭ್ಯಾಸ ಮಾಡಿದ ಸಾವಿರಾರು ವಿದ್ಯಾ ರ್ಥಿಗಳಲ್ಲಿ ಹಲವರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶಿಕ್ಷಕರಾಗಿ ಸೇವೆ ಮಾಡುತ್ತಿದ್ದಾರೆ ಎಂದು ಮೆಚ್ಚಿಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ. ಮೈಸೂರು ವಿಶ್ವವಿದ್ಯಾಲಯದ ಸಂಗೀತ ಮತ್ತು ಪ್ರದರ್ಶನ ಕಲೆಗಳ ಕುಲಪತಿ ಡಾಕ್ಟರ್ ವಿ ನಾಗೇಶ್ ಬೆಟ್ಟಕೋಟೆ, ಮಂಗಳೂರು ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯ ಡಾ ಎಸ್ ಬಿ ಎಂ ಪ್ರಸನ್ನ, ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

**ಸಾಧನೆಗೆ ಕಠಿಣ ಪರಿಶ್ರಮ ಹಾಕಿ : ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ**

# ವಿಶೇಷಚೇತನರು ಕೀಳಿರಿಮೆ ಬಿಡಿ

ಚಾಮರಾಜನಗರ, ತಮ್ಮಲ್ಲಿರುವ ನ್ಯೂನತೆಗಳ ಬಗ್ಗೆ ಕೀಳಿರಿಮೆ ಬಿಟ್ಟು ಸಕಾರಾತ್ಮಕ ಸಾಧನೆಗಾಗಿ ಕಠಿಣ ಪರಿಶ್ರಮ ಹಾಕುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಸಲಹೆ ಮಾಡಿದರು.

ನಗರದ ಡಾ. ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ವಿಕಲಚೇತನರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮದ ಜ್ಯೋತಿ ಬೆಳಗಿಸಿ ಮಾತನಾಡಿದರು. ಅಂಗವಿಕಲತೆ ದೈವದತ್ತವಾಗಿದ್ದು, ವಿಶೇಷಚೇತನರು ಏನೂ ಸಾಧನೆ ಮಾಡಲು ಸಾಧ್ಯವಿಲ್ಲವೆಂಬ ಕೀಳಿರಿಮೆ ಬಿಡಬೇಕು. ಎಲ್ಲಾ ವಿಚಾರಗಳನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳಬೇಕು. ವಿಕಲಚೇತನರ ಕ್ಷೇತ್ರದಲ್ಲಿ ಈಗಾಗಲೇ ಸಾಕಷ್ಟು ಅಂಗವಿಕಲರು ಸಾಧನೆ ಮಾಡಿದ್ದಾರೆ. ಪ್ಯಾರಾ ಒಲಂಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದು ದೇಶಕ್ಕೆ ಕೀರ್ತಿ ತಂದವರನ್ನು ತಾವೆಲ್ಲರೂ ಮಾದರಿಯಾಗಿಸಿಕೊಳ್ಳಬೇಕು. ಸಾಧನೆಗಾಗಿ ಸತತ ಪ್ರಯತ್ನ, ಹಾಕಬೇಕು. ಕಲೆ, ಕ್ರೀಡೆ, ಸಾಹಿತ್ಯ, ಸಂಗೀತ ಸೇರಿದಂತೆ ಯಾವುದೇ ಕ್ಷೇತ್ರದ ಸಾಧಕರ ನಿರಂತರ ಪರಿಶ್ರಮವನ್ನು ಎಲ್ಲರೂ ಮನಗಾಣಬೇಕು ಎಂದರು.

ಗಾಂಧೀಜಿ ಅವರು ಸಾಧನೆ ಕೇವಲ ಒಬ್ಬರ ಸ್ವತ್ತಲ್ಲ ಎಂದಿದ್ದಾರೆ. ನಮ್ಮ ಆಲೋಚನೆಗಳು ನಮ್ಮ ವ್ಯಕ್ತಿತ್ವವನ್ನು ರೂಪಿಸಲಿರುವುದರಿಂದ ವಿಕಲಚೇತನರು ನ್ಯೂನತೆಗಳ ಬಗ್ಗೆ ಚಿಂತೆಗೀಡಾಗದೇ ನಕಾರಾತ್ಮಕ ಚಿಂತನೆಗಳನ್ನು ಸಕಾರಾತ್ಮಕವಾಗಿ ಪರಿವರ್ತಿಸಿಕೊಳ್ಳಬೇಕು ಎಂದರು.



ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶೃತಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಸುರೇಶ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಡಾ. ಮಂಜುನಾಥ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶಂಕರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಸುರೇಶ್, ಜಿಲ್ಲಾ ಅಂಗವಿಕಲರ ಕ್ಷೇಮಾಭ್ಯುಧಯ ಸಂಘದ ಅಧ್ಯಕ್ಷರಾದ ರಮೇಶ್ ಇತರರು ಹಾಜರಿದ್ದರು. ಇದಕ್ಕೂ ಮೊದಲು ಚಾಮರಾಜೇಶ್ವರ ದೇವಸ್ಥಾನದಿಂದ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

# ‘ಭತ್ತ-ರಾಗಿ ಖರೀದಿಗೆ ನೋಂದಣಿ ಅವಧಿ ವಿಸ್ತರಣೆ’



**ಮಂಡ್ಯ:** ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2025–26ನೇ ಸಾಲಿನ ಭತ್ತ ಮತ್ತು ರಾಗಿ ಖರೀದಿಗೆ ಸಮಯವಕಾಶ ವಿಸ್ತರಿಸಿದ್ದು, ಭತ್ತ ಖರೀದಿಗೆ ಡಿಸೆಂಬರ್ 31 ವರೆಗೆ ಹಾಗೂ ರಾಗಿ ಖರೀದಿಗೆ ಡಿಸೆಂಬರ್ 15 ವರೆಗೆ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಮಂಗಳವಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ 2025–26 ನೇ ಸಾಲಿನ ಕಬ್ಬು ಸರಬರಾಜು ಮಾಡಿದ ರೈತರಿಗೆ ಹಾಗೂ 2024–25 ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ, ಕೊಬ್ಬರಿ ಸರಬರಾಜು ಮಾಡಿದ ರೈತರಿಗೆ ಹಣ ಪವತಿಸಲು ಬಾಕಿಯಿರುವ ಸಂಬಂಧ ಆಯೋಜಿಸಲಾಗಿದ್ದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. 2025–26 ನೇ ಸಾಲಿಗೆ ಸಂಬಂಧಪಟ್ಟಂತೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಮತ್ತು ರಾಗಿ ಖರೀದಿ ನೋಂದಣಿಗಾಗಿ ಜಿಲ್ಲೆಯಲ್ಲಿ 17 ಕೇಂದ್ರಗಳನ್ನು ತೆರೆಯಲಾಗಿದ್ದು, ರೈತರು ನೇರವಾಗಿ ನೋಂದಣಿ ಕೇಂದ್ರಗಳಲ್ಲಿ ಭತ್ತ ಮತ್ತು ರಾಗಿ ಖರೀದಿಗೆ ನೋಂದಣಿ ಮಾಡಿಸಿಕೊಳ್ಳಬಹುದು ಎಂದು ಹೇಳಿದರು. ಈವರೆಗೂ ಭತ್ತ ಖರೀದಿಗಾಗಿ 182 ರೈತರು 5953.00 ಕ್ವಿಂಟಾಲ್ ಪ್ರಮಾಣದಲ್ಲಿ ಭತ್ತಕ್ಕೆ ನೋಂದಾಯಿಸಿಕೊಂಡಿರುತ್ತಾರೆ. ರಾಗಿ ಖರೀದಿಗಾಗಿ 13,047 ರೈತರು 3,08,666 ಕ್ವಿಂಟಾಲ್ ಪ್ರಮಾಣದ ರಾಗಿಗೆ ನೋಂದಾಯಿಸಿಕೊಂಡಿರುತ್ತಾರೆ ಎಂದು ಮಾಹಿತಿ ನೀಡಿದರು. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸರ್ಕಾರವು 2025–26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳೆದಿರುವ ಭತ್ತ ಮತ್ತು ರಾಗಿ ಖರೀದಿಸಲು ಸಾಮಾನ್ಯ ಭತ್ತಕ್ಕೆ ಪ್ರತಿ ಕ್ವಿಂಟಾಲ್‌ಗೆ ರೂ 2369, ಗ್ರೇಡ್– ಎ ಭತ್ತಕ್ಕೆ ರೂ 2389 ಹಾಗೂ ರಾಗಿ ಪ್ರತಿ ಕ್ವಿಂಟಾಲ್‌ಗೆ ರೂ 4886 ನಿಗಧಿಪಡಿಸಲಾಗಿರುತ್ತದೆ. ಜಿಲ್ಲೆಯ ಎಲ್ಲಾ ರೈತರು ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಹೇಳಿದರು.

ಕಬ್ಬು ಸರಬರಾಜು ಮಾಡುವ ರೈತರಿಗೆ ಪಾವತಿ ಹಣವನ್ನು ಕಬ್ಬು ಸರಬರಾಜು ಮಾಡಿದ 14 ದಿನದೊಳಗೆ ಹಣ ಪಾವತಿಸುವುದು ಕಡ್ಡಾಯವಾಗಿದ್ದು. ಜಿಲ್ಲೆಯಲ್ಲಿನ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ 14 ದಿನದೊಳಗೆ ಹಣ ಪಾವತಿಸದಿದ್ದಲ್ಲಿ ಕ್ರಮ ಕೈಗೊಳ್ಳಲಾಗುವುದು ಹಾಗೂ 2024–25 ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಕೊಬ್ಬರಿ ಸರಬರಾಜು ಮಾಡಿದ ರೈತರಿಗೆ ಬಾಕಿಯಿರುವ ಪಾವತಿ ಹಣವನ್ನು ಶೀಘ್ರದಲ್ಲೇ ಪಾವತಿಸಬೇಕು ಎಂದರು.

ಸಭೆಯಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕ ಪ್ರತೀಕ್ ಹೆಗ್ಡೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಹಿಳಾ ಆತ್ಮಾಹುತಿ ಬಾಂಬ್ ದಾಳಿ; 6 ಉಗ್ರರು ಸಾವು

**ಕರಾಚಿ:** ಪಾಕಿಸ್ತಾನದ ಪ್ರಕ್ಷುಬ್ಧ ಬಲೂಚಿಸ್ತಾನ್ ಪ್ರಾಂತ್ಯದಲ್ಲಿರುವ ಅರೆಸೇನಾ ಪಡೆಯ ಪ್ರಧಾನ ಕಚೇರಿಯ ಪ್ರವೇಶದ್ವಾರದಲ್ಲಿ ನಿಷೇಧಿತ ಬಲೂಚಿಸ್ತಾನ್ ಲಿಬರೇಶನ್ ಆರ್ಮಿ(ಬಿಎಲ್‌ಎ)ಯ ಮಹಿಳಾ ಆತ್ಮಹುತಿ ಬಾಂಬರ್ ಒಬ್ಬಳು ತನ್ನನ್ನು ತಾನು ಸ್ಫೋಟಿಸಿಕೊಂಡಿದ್ದು, ಬಳಿಕ ಸುದೀರ್ಘ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಆರು ಉಗ್ರರನ್ನು ಹೊಡೆದುರುಳಿಸಲಾಗಿದೆ ಎಂದು ಭದ್ರತಾ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಭಾನುವಾರ ರಾತ್ರಿ ಚಾಗೈ ಜಿಲ್ಲೆಯ ನೊಕುಂಡಿ ಪಟ್ಟಣದಲ್ಲಿರುವ ಫ್ರಾಂಟಿಯರ್ ಕಾರ್ಪ್ಸ್(ಎಫ್‌ಸಿ) ಪ್ರಧಾನ ಕಚೇರಿಯ ಮುಖ್ಯ ದ್ವಾರದಲ್ಲಿ ದಾಳಿಕೋರ ಮಹಿಳೆ ತನ್ನನ್ನು ತಾನು ಸ್ಫೋಟಿಸಿಕೊಂಡಿದ್ದಾಳೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಂತರ ಬಾಂಬರ್ ಮಹಿಳೆಯನ್ನು ಜಿನಾಟಾ ರಫೀಕ್ ಎಂದು ಗುರುತಿಸಿ ಅವರ ಫೋಟೋವನ್ನು ಬಿಡುಗಡೆ ಮಾಡಿದೆ.

ಸ್ಫೋಟದ ನಂತರ, ಆರು ಉಗ್ರರು ಪ್ರಧಾನ ಕಚೇರಿಗೆ ನುಗ್ಗಲು ಯತ್ನಿಸಿದರು. ತಕ್ಷಣ ಎಚ್ಚೆತ್ತ ಭದ್ರತಾ ಪಡೆಗಳು ಪ್ರವೇಶದ್ವಾರದ ಬಳಿಯೇ ಮೂವರನ್ನು ಗುಂಡಿಕ್ಕಿ ಹತ್ಯೆ ಮಾಡಿದರು. ಉಳಿದ ಮೂವರು ಎಫ್‌ಸಿ ಸಿಬ್ಬಂದಿ ಸುತ್ತುವರಿಯುವ ಮೊದಲು ಆವರಣ ಪ್ರವೇಶಿಸುವಲ್ಲಿ ಯಶಸ್ವಿಯಾದರು. ನಂತರ ಆ ಮೂವರನ್ನು ಹತ್ಯೆ ಮಾಡಲಾಗಿದೆಎಂದು ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ. ಸೋಮವಾರ ಸಂಜೆಯವರೆಗೆ ಪ್ರಧಾನ ಕಚೇರಿಯ ಒಳಗಿನಿಂದ ಗುಂಡಿನ ಸದ್ದು ಮತ್ತು ಸ್ಫೋಟಗಳು ಕೇಳಿಬಂದವು ಎಂದು ನಿವಾಸಿಗಳು ಹೇಳಿದ್ದಾರೆ. ಬಲೂಚಿಸ್ತಾನದಲ್ಲಿ ಅತ್ಯಂತ ಸಕ್ರಿಯ ಮತ್ತು ಸುಸಜ್ಜಿತ ದಂಗೆಕೋರ ಗುಂಪು ಎಂದು ಪರಿಗಣಿಸಲಾದ ಬಿಎಲ್‌ಎ, ಮಹಿಳಾ ಆತ್ಮಹುತಿ ದಾಳಿಕೋರರನ್ನು ಬಳಸಿಕೊಂಡು ಮೂರನೇ ಬಾರಿ ದಾಳಿ ಮಾಡಿದೆ. ಏಪ್ರಿಲ್ 2022 ರಲ್ಲಿ, ಎರಡು ಮಕ್ಕಳ ತಾಯಿಯಾದ ಶಾರಿ ಬಲೂಚ್, ಕರಾಚಿ ವಿಶ್ವವಿದ್ಯಾಲಯದ ಕನ್ಫ್ಯೂಷಿಯಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಚೀನೀ ಶಿಕ್ಷಕರನ್ನು ಗುರಿಯಾಗಿಸಿಕೊಂಡು ಆತ್ಮಹುತಿ ಬಾಂಬ್ ದಾಳಿ ನಡೆಸಿದ್ದು, ಮೂವರು ಚೀನೀ ಪ್ರಜೆಗಳು ಸೇರಿದಂತೆ ನಾಲ್ವರು ಸಾವನ್ನಪ್ಪಿದ್ದರು.

## ಕಣ್ಮನ ಸೆಳೆದ ಕೃಷಿ ಪ್ರಾತ್ಯಕ್ಷಿಕೆಗಳು



**ಮಂಡ್ಯ** ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯ ವಿ ಸಿ ಫಾರಂ ಆವರಣದಲ್ಲಿ ಬೆಳೆಯಾಗಿದ್ದು ಕೃಷಿ ಪ್ರಾತ್ಯಕ್ಷೆಗಳು ನೋಡುಗರ ಕಣ್ಮನ ಸೆಳೆದವು.

ಕರ್ನಾಟಕದಲ್ಲಿ ಒಟ್ಟು ಒಟ್ಟು 180 ದೇಶಿ ಭತ್ತದ ತಳಿಗಳಿವೆ. 180 ಭತ್ತದ ತಳಿಗಳನ್ನು ವಿ ಸಿ ಫಾರಂನಲ್ಲಿ ಬೆಳೆಸಲಾಗಿದೆ. ಜಿಂಕ್ ಮತ್ತು ಐರನ್ ಅಂಶಗಳು ಹೆಚ್ಚು ಇರುವ ಬತ್ತದ ತಳಿಗಳು ಇಲ್ಲಿವೆ. ಫಿಲಿಪೈನ್ಸ್ ಅಂತರಾಷ್ಟ್ರೀಯ ಬತ್ತ ಸಂಶೋಧನಾ ಕೇಂದ್ರದೊಂದಿಗೆ ಒಡಂಬಡಿಕೆ ಮಾಡಿಕೊಂಡು ನಮ್ಮ ಹವಾಮಾನಕ್ಕೆ ಸರಿಹೊಂದುವ ಭತ್ತದ ತಳಿಗಳನ್ನು ಬೆಳೆಸಲಾಗುವುದು ಹಾಗೂ ಸದರಿ ಭತ್ತದವನ್ನು ಸಕ್ಕರೆ ಖಾಯಿಲೆ ಇರುವವರು ಸಹ ತಿನ್ನ ಬಹುದಾಗಿದೆ.

18 ದೇಶಿ ರಾಗಿ ತಳಿಗಳನ್ನು ಅಭಿವೃದ್ಧಿಪಡಿಸಿ ಪ್ರಾತ್ಯಕ್ಷಿಕೆ ಮಾಡಲಾಗಿದೆ. ಇವುಗಳಿಂದ ಧಾನ್ಯದ ಇಳುವರಿ ಹಾಗೂ ಬೇವಿನ ಇಳುವರಿ ಹೆಚ್ಚು ನಿರೀಕ್ಷಿಸಬಹುದು. ಸಾವಯವ ಕೃಷಿಯಿಂದ ರಾಗಿ, ಕಬ್ಬು, ಸೂರ್ಯಕಾಂತಿ ಕಡಲೆಕಾಯಿ, ಸೋಯಾಬಿನ್,ಉದ್ದು, ಹೆಸರು ಕಾಳು, ಗೋರಿ ಕಾಯಿ, ಬೆಂಡೆಕಾಯಿ, ಮೇಣಸಿನ ಕಾಯಿ ಬೆಳೆಯಲಾಗಿದೆ.

ಆಕರ್ಷಿಸಿದ ಕಸಿ ಟೊಮೊಟೊ ಬದನೆಕಾಯಿ ಗಿಡ ಕೃಷಿ ವಿಜ್ಞಾನಿಗಳ ಮಂಡ್ಯ ವಿ.ಸಿ ಫಾರಂ ಆವರಣದಲ್ಲಿ ಬೆಳೆಸಲಾದ ಕಸಿ ಟೊಮೋಟೊ ಮತ್ತು ಬದನೆಕಾಯಿ ಒಂದೇ ಗಿಡದಲ್ಲಿ ಟೊಮೋಟೊ ಮತ್ತು ಬದನೆಕಾಯಿ ಬಿಟ್ಟಿದೆ ಇದೂ ನೋಡುಗರನ್ನು ಆಕರ್ಷಿಸುತ್ತದೆ. ವಿವಿಧ ಅಲಂಕಾರ ಹೂಗಳನ್ನು ವಿ.ಸಿ ಫಾರಂ ನಲ್ಲಿ ಬೆಳೆಯಲಾಗಿದೆ.

ಮಾಧ್ಯಮ ಪ್ರತಿನಿಧಿಗಳಿಗೆ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ವಿಜ್ಞಾನಿಗಳು ಕೃಷಿ ವಿ.ಸಿ ಫಾರಂ ನಲ್ಲಿ ಬೆಳೆಯಲಾದ ಬೆಳೆಗಳ ಕುರಿತು ಮಾಹಿತಿ ನೀಡಿದರು.

ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ.ಪಿ.ಎಸ್. ಫಾತಿಮಾ, ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರಾದ ಡಾ.ಜಿ.ಎಂ. ದೇವಗಿರಿ. ಕೃಷಿ ವಿಶ್ವವಿದ್ಯಾನಿಲಯದ ಡೀನ್ ಮುನಿಸ್ವಾಮಿ ಗೌಡ, ಸಹ ಸಂಶೋಧನಾ ನಿರ್ದೇಶಕರು ಮತ್ತು ಪ್ರಚಾರ ಸಮಿತಿಯ ಅಧ್ಯಕ್ಷರಾದ ಡಾ. ಬಿಎಸ್ ಬಸವರಾಜು. ವಿಸ್ತರಣಾ ನಿರ್ದೇಶಕರಾದ ಡಾ.ಎ.ಡಿ ರಂಗನಾಥ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


## ಖಾಸಗಿ ಶಾಲೆ: ಮಾನ್ಯತೆ ನವೀಕರಣ ಕಡ್ಡಾಯ

**ತುಮಕೂರು:** ಕರ್ನಾಟಕ ಶಿಕ್ಷಣ ಕಾಯ್ದೆಯನ್ವಯ ಎಲ್ಲಾ ಖಾಸಗಿ ಶಾಲೆಗಳು ನಿಗಧಿತ ಅವಧಿಯಲ್ಲಿ ಪ್ರಸ್ತಾವನೆ ಸಲ್ಲಿಸಿ ಮಾನ್ಯತೆ ನವೀಕರಣ ಪಡೆಯುವುದು ಕಡ್ಡಾಯವಾಗಿದೆ.

2025–26ನೇ ಸಾಲಿಗೆ ಈವರೆಗೂ ಶಾಲಾ ಮಾನ್ಯತೆ ನವೀಕರಣ ಪಡೆಯದಿರುವ ಖಾಸಗಿ ಶಾಲಾ ಆಡಳಿತ ಮಂಡಳಿಗಳಿಗೆ ಆನ್‌ಲೈನ್ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿಸೆಂಬರ್ 5 ರಿಂದ 7 ರವರೆಗೂ ಕೃಷಿ ಮೇಳ

## 5 ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ: ಹರಿಣಿ ಕುಮಾರ್



**ಮಂಡ್ಯ:** ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ವತಿಯಿಂದ ಡಿಸೆಂಬರ್ 5 ರಿಂದ 7 ರವರೆಗೂ ಆಯೋಜಿಸಲಾಗಿರುವ ಕೃಷಿ ಮೇಳ 2025 ರಲ್ಲಿ ಸುಮಾರು ಐದು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಹರಿಣಿ ಕುಮಾರ್ ಅವರು ಹೇಳಿದರು.

ವಿ ಸಿ ಫಾರಂ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯಕ್ಕೆ ತನ್ನದೇ ಆದ ಪ್ರಾತಿನಿಧ್ಯ ಇದೆ. ಈವರೆಗೆ ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದಿಂದ ಭತ್ತದಲ್ಲಿ 45 ತಳಿಗಳು, 3 ಹೈಬ್ರೀಡ್ ಗಳು, 50 ತಾಂತ್ರಿಕತೆಗಳು, ರಾಗಿಯಲ್ಲಿ 37 ತಳಿಗಳು, ಕಬ್ಬಿನಲ್ಲಿ 17 ತಳಿಗಳು ಮತ್ತು 20 ತಂತ್ರಜ್ಞಾನಗಳು, ಮುಸುಕಿನ ಜೋಳದಲ್ಲಿ ನಾಲ್ಕು ತಳಿಗಳು ಮೇವಿನ ಬೆಳೆಗಳಲ್ಲಿ ನಾಲ್ಕು ತಳಿಗಳು, ಸೂರ್ಯಕಾಂತಿ ಸಂಕಿರಣ ತಿಳಿ (ಕೆ.ಬಿ.ಎಸ್.ಹೆಚ್–88) ಚಾಮರಾಜನಗರ ಕಪ್ಪು ಅರಿಶಿಣದ ತಳಿ, ಅರಿಶಿಣದ ತಳಿಯನ್ನು ಅಭಿವೃದ್ಧಿ ಪಡಿಸಲಾಗಿದೆ ಎಂದು ಹೇಳಿದರು.

ರೈತರು ಜೈವಿಕ ಗೊಬ್ಬರಕ್ಕೆ ಹೆಚ್ಚಿನ ಹೊತ್ತು ನೀಡಬೇಕು ಜೈವಿಕ ಗೊಬ್ಬರ ಬಳಸುವುದರಿಂದ ಭೂಮಿಯ ಫಲವತ್ತತೆ ಹೆಚ್ಚುತ್ತದೆ. ರೈತರು ಬಹು ಬೆಳೆ ಕೃಷಿಯನ್ನು ಹೆಚ್ಚು ಮಾಡಬೇಕು. ಬಹುಬೆಳೆ ಕೃಷಿಯಲ್ಲಿ ಶ್ರಮ ಮತ್ತು ಜವಾಬ್ದಾರಿ ಎರಡು ಹೆಚ್ಚಿರುತ್ತದೆ ಜೊತೆಗೆ ಆದಾಯವು ಸಹ ಹೆಚ್ಚು ಲಭಿಸುತ್ತದೆ ಎಂದು ಹೇಳಿದರು.

ಕೃಷಿ ಮೇಳ 2025 ರಲ್ಲಿ ನವೀನ ಕೃಷಿ ತಂತ್ರಜ್ಞಾನಗಳ ಪ್ರದರ್ಶನ, ವಸ್ತು ಪ್ರದರ್ಶನ, ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಪದ್ಧತಿ ಪ್ರಾತ್ಯಕ್ಷಿಕೆಗಳು, ಪಶು ಸಂಗೋಪನೆ ತಾಂತ್ರಿಕತೆಗಳು, ಮೀನು ಕೃಷಿ, ಸಸ್ಯಕ್ಷೇತ್ರ ನಿರ್ವಹಣೆಯಲ್ಲಿ ಪ್ರಮುಖವಾಗಿ ದೇಸಿ ಮತ್ತು ವಿದೇಶಿ ತಳಿಗಳ ಬಗ್ಗೆ ಮಾಹಿತಿ ಮತ್ತು ಮಾರಾಟವನ್ನು ಮಾಡಲಾಗುವುದು, ನಮ್ಮ ಜಿಲ್ಲೆಯಲ್ಲಿ ನೀರಿನ ಪ್ರಮಾಣ ಹೆಚ್ಚಿದೆ ಕೃಷಿ ಹೊಂಡ ನಿರ್ಮಾಣ ಮಾಡಿ ಮೀನು ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

ನಮ್ಮ ಕೇಂದ್ರದಲ್ಲಿ ಅಭಿವೃದ್ಧಿ ಪಡಿಸಿದ ತಳಿಗಳನ್ನು ರಾಷ್ಟ್ರಮಟ್ಟದಲ್ಲಿ ಬಿಡುಗಡೆಗೊಳಿಸಲಾಗಿದೆ. ದೇಶದ ಪ್ರಥಮ ಹೈಬ್ರಿಡ್ ಬತ್ತದ ತಳಿಗೆ – (ಕೆ.ಆರ್.ಹೆಚ್–2) ಇಂದಿಗೂ ದೇಶದಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆ ಇದೆ. ವಿ.ಸಿ ಫಾರಂ ನಿಂದಲೆ ಅಭಿವೃದ್ಧಿ ಪಡಿಸಿದ ಕಬ್ಬಿನ ತಳಿಯಾದ (ವಿ.ಸಿ.ಎಫ್–0517) ಅನ್ನು ಬಾಹುಬಲಿ ಎಂದು ಕರೆಯಲಾಗುತ್ತದೆ. ಸದರಿ ಕಬ್ಬಿನ ತಳಿಯೂ ಹೆಚ್ಚಿನ ಸಕ್ಕರೆ ಅಂಶ ಹೊಂದಿದ್ದು ರೈತರಿಗೆ ಹೆಚ್ಚು ಇಳುವರಿ ನೀಡಿ ಆದಾಯ ಹೆಚ್ಚಿಸುತ್ತಿದೆ. ಕರ್ನಾಟಕದಲ್ಲಲದೆ ನೆರೆ ರಾಜ್ಯಗಳಲ್ಲೂ ಸದರಿ ಕಬ್ಬಿನ ತಳಿಯ ಬೇಡಿಕೆ ಹೆಚ್ಚಿದೆ ಎಂದು ತಿಳಿಸಿದರು.

ಐದು ಜಿಲ್ಲೆಗಳ ರೈತರನ್ನು ಒಳಗೊಂಡಂತೆ ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯ ಆಯೋಜಿಸಿರುವ "ಕೃಷಿ ಮೇಳ 2025" ಅನ್ನು ಮುಖ್ಯಮಂತ್ರಿಗಳು ಉದ್ಘಾಟಿಸಲಿದ್ದಾರೆ ಹಾಗೂ ಕೃಷಿ ಮೇಳದ ಎರಡನೇ ದಿನದಂದು ಉಕ್ಕು ಮತ್ತು ಬೃಹತ್ ಕೈಗಾರಿಕೆಗಳ ಸಚಿವರಾದ ಕುಮಾರ ಸ್ವಾಮಿ ಅವರು ಭಾಗವಹಿಸಲಿದ್ದಾರೆ. ಮೂರನೇ ದಿನದಂದು ಜೆ.ಎಸ್.ಎಸ್ ಮಠದ ಸ್ವಾಮಿಗಳು ಭಾಗವಹಿಸಲಿದ್ದಾರೆ ಎಂದರು ಮಾಹಿತಿ ನೀಡಿದರು.

ಮೇಳದಲ್ಲಿ ಹೈಟೆಕ್ ತೋಟಗಾರಿಕೆ ಪ್ರಾತ್ಯಕ್ಷಿಕೆ ಸುಧಾರಿತ ಮೇವಿನ ತಳಿಗಳು ಮತ್ತು ತಾಂತ್ರಿಕತೆಗಳು, ಸಿರಿಧಾನ್ಯಗಳ ಮೇಳ, ಫಲಪುಷ್ಪ ಪ್ರದರ್ಶನ, ರಾಸಾಯನಿಕ ಮುಕ್ತ ಬೆಲ್ಲ ತಯಾರಿಕೆ, ದೇಶಿ ರಾಸುಗಳ ಪ್ರದರ್ಶನ, ಔಷಧಿ ಸಸ್ಯಗಳ ಪ್ರಾತ್ಯಕ್ಷಿಕೆ, ಜೈವಿಕ ಇಂಧನದ ತಂತ್ರಜ್ಞಾನಗಳು, ಮಾರುಕಟ್ಟೆಯ ತಂತ್ರಗಳು, ಕೃಷಿ ಅರಣ್ಯ, ಕೃಷಿ ಯಂತ್ರೋಪಕರಣಗಳ ಪ್ರಾತ್ಯಕ್ಷಿಕೆಗಳ, ಕೃಷಿ ಹವಾಮಾನ ನಿರ್ವಹಣೆ, ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಮತ್ತು ಸಿರಿಧಾನ್ಯಗಳ ಮೌಲ್ಯವರ್ಧನೆಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದರು.


ಸದರಿ ಮೇಳದಲ್ಲಿ ವಿಸ್ಮಯಕಾರಿ ಕ್ರೀಟ ಪ್ರಪಂಚ, ಜೇನು ಕೃಷಿ, ಹೈಟೆಕ್ ನರ್ಸರಿ ಪ್ರದರ್ಶನ ಮತ್ತು ಮಾರಾಟ ರೈತರು ಬೆಳೆದ ಉತ್ಪನ್ನಮತ್ತುಕೈಗೊಂಡಮೌಲ್ಯವರ್ಧನೆಯನ್ನು ನೇರ ಗ್ರಾಹಕರಿಗೆ ಮಾರಾಟ ಮಾಡಲು ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗುತ್ತದೆ. ಕೃಷಿ ಯಾಂತ್ರಿಕೀಕರಣ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಗುವುದು ಎಂದು ತಿಳಿಸಿದರು. ದೇಶಿ ಔಷಧಿ ಗಿಡಗಳನ್ನು ರೈತರೊಂದಿಗೆ ಒಡಂಬಡಿಕೆ ಮಾಡಿಕೊಂಡು ಅವುಗಳ ಅಭಿವೃದ್ಧಿ ಪಡಿಸಿ ರೈತರಿಗೆ ಮಾರಾಟಕ್ಕೆ ಸಹಾಯ ಮಾಡಲಾಗುವುದು. ಯುವಕರು ಕೃಷಿಯ ಕಡೆ ಹೆಚ್ಚು ಹೊತ್ತು ನೀಡಬೇಕು. ಕೆಲಸವನ್ನರಸಿ ನೆರೆ ರಾಜ್ಯ, ಜಿಲ್ಲೆಗಳಿಗೆ ಹೋಗುವುದನ್ನು ಬಿಟ್ಟು ಕೃಷಿಯಲ್ಲಿ ಬಂಡವಾಳ ಹೂಡಿ ಆದಾಯ ಗಳಿಸಬಹುದು ಎಂದು ಹೇಳಿದರು.

ಸಾಧಕರಿಗೆ ಸನ್ಮಾನ: ಕೃಷಿ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಮಾಡಲಾಗುವುದು ಐದು ಜಿಲ್ಲೆಗಳಿಂದ ಒಟ್ಟು ಹತ್ತು ಜನ ಜಿಲ್ಲಾಮಟ್ಟದ ಪ್ರಗತಿಪರ ರೈತರಿಗೆ ಪ್ರಶಸ್ತಿ ಮತ್ತು 55 ಯುವ ರೈತರಿಗೆ ತಾಲ್ಲೂಕು ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಕೃಷಿ ಮೇಳದಲ್ಲಿ 350 ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದರು.

ನೆರೆ ಜಿಲ್ಲೆಗಳಿಂದ ಕೃಷಿ ಮೇಳಕ್ಕೆ ಬರುವ ಆಸಕ್ತ ರೈತರಿಗೆ ಆಯಾ ಐದು ಜಿಲ್ಲೆಯ ತಾಲೂಕು ಕೇಂದ್ರಗಳಿಂದ ವಾಹನ ವ್ಯವಸ್ಥೆ ಕಲ್ಪಿಸಲು ಮಾತನಾಡಲಾಗಿದೆ. ಮಂಡ್ಯದಿಂದ ವಿಸಿ ಫಾರ್ಮ್ ಗೆ ಬರಲು ಪ್ರತಿ 15 ನಿಮಿಷಕ್ಕೆ ಒಂದು ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಟ್ರಾಫಿಕ್ ನಿರ್ವಹಣೆ ಮಾಡಲು ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸದರಿ ಪತ್ರಿಕಾಗೋಷ್ಠಿಯಲ್ಲಿ ಮಂಡ್ಯ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ.ಪಿ.ಎಸ್. ಫಾತಿಮಾ, ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರಾದ ಡಾ.ಜಿ.ಎಂ. ದೇವಗಿರಿ. ಕೃಷಿ ವಿಶ್ವವಿದ್ಯಾನಿಲಯದ ಡೀನ್ ಮುನಿಸ್ವಾಮಿ ಗೌಡ, ಸಹ ಸಂಶೋಧನಾ ನಿರ್ದೇಶಕರು ಮತ್ತು ಪ್ರಚಾರ ಸಮಿತಿಯ ಅಧ್ಯಕ್ಷರಾದ ಡಾ. ಬಿಎಸ್ ಬಸವರಾಜು. ವಿಸ್ತರಣಾ ನಿರ್ದೇಶಕರಾದ ಡಾ.ಎ.ಡಿ ರಂಗನಾಥ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಒಡೆಯದಿರಲಿ ಒತ್ತಡದಿಂದ ಜೀವನದ ಬಲೂನು



ಮನುಷ್ಯ ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ , ಅವನ ಮನಸ್ಸು ನಿತ್ಯವೂ ಒಂದಲ್ಲ ಒಂದು ಪರೀಕ್ಷೆಗೆ ಒಳಗಾಗುತ್ತಲೇ ಇರುತ್ತದೆ . ಬಡವ , ಶ್ರೀಮಂತ ಎಂಬ ಯಾವುದೇ ಭೇದ ಭಾವವಿಲ್ಲದೇ ಅವರದೇ ಆದ ಒತ್ತಡಗಳಿರುತ್ತವೆ . ಹಾಗಾಗಿ ಮನುಷ್ಯನಿಗೆ ಒತ್ತಡವೆಂಬುದು ಒಂದು ಅನಿವಾರ್ಯ ಸ್ಥಿತಿ.

ಮನುಷ್ಯನ ಮನಸ್ಸು ಒತ್ತಡವನ್ನು, ಜೀವನದ ಹೊಣೆಗಾರಿಕೆಯನ್ನು ನಿರ್ವಹಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ . ಆದರೆ ಈ ಒತ್ತಡವನ್ನು ಒಂದು ಮಿತಿಯವರೆಗೆ ಮಾತ್ರ ಮಾನವ ತಡೆದುಕೊಳ್ಳಬಲ್ಲ.

ಮಾನವನ ಮನಸ್ಸಿನ ಒತ್ತಡವನ್ನು ಒಂದು ಬಲೂನಿಗೆ ಹೋಲಿಸಬಹುದು. ಬಲೂನಿನ ಒಳಗಿನ ಗಾಳಿಯು ಒತ್ತಡವನ್ನು ಒಂದು ಹಂತದವರೆಗೆ ಮಾತ್ರ ತಡೆದುಕೊಳ್ಳಬಹುದು . ಒತ್ತಡ ಜಾಸ್ತಿಯಾದಾಗ ಬಲೂನು ಒತ್ತಡವನ್ನು ತಾಳಲಾರದೆ , ಸಿಡಿದು ಒಡೆಯುತ್ತದೆ . ಹಾಗೆಯೇ, ಮನುಷ್ಯನಿಗೆ ಒತ್ತಡ ಜಾಸ್ತಿಯಾದರೆ , ಅವನ ಮನಸ್ಸು ಸಹ ಒಡೆಯುತ್ತದೆ , ಸಿಡಿಯುತ್ತದೆ . ಇದರ ಫಲವೇ ನಿರಾಶೆ , ಹತಾಶೆ, ಕೋಪ ತಾಪಗಳು , ಸಂಬಂಧಗಳು ಮುರಿದುಬೀಳುವುದು ಇತ್ಯಾದಿ.


ಮನುಷ್ಯನ ಸಹಜ ಗುಣಗಳಾದ ಕರುಣೆ, ಮಮತೆ, ಮಾನವೀಯತೆ, ಜವಾಬ್ದಾರಿ ಮತ್ತು ತ್ಯಾಗವನ್ನು ಶ್ರೇಷ್ಠ ಗುಣಗಳೆಂದು ಸಮಾಜ ನಂಬುತ್ತದೆ. ಆದರೆ ಈ ಗುಣಗಳು ಅಪಾರ ಪ್ರಮಾಣದಲ್ಲಿ ವ್ಯಕ್ತವಾದಾಗ , ಇದೇ ಗುಣಗಳು ಒತ್ತಡವಾಗಿ ಪರಿಣಮಿಸಬಹುದು.

ಮನುಷ್ಯನು ತನ್ನ ಕುಟುಂಬಕ್ಕಾಗಿ, ಸಮಾಜಕ್ಕಾಗಿ ಅಥವಾ ಧರ್ಮಕ್ಕಾಗಿ ಹೊತ್ತು ಸಾಗುವ ಜವಾಬ್ದಾರಿಗಳು, ಕರ್ತವ್ಯಗಳು, ನಿರೀಕ್ಷೆಗಳು ಎಲ್ಲವೂ ಗಾಳಿಯಂತೆ. ಇವು ಜಾಸ್ತಿಯಾದಾಗ ಅದು ಬಲೂನಿನಂತೆ ಹಿಗ್ಗುತ್ತಾ ಒತ್ತಡ ಸೃಷ್ಠಿಯಾಗುತ್ತಾ ಹೋಗುತ್ತದೆ, ಅದು ಮಿತಿ ಮೀರುತ್ತ ಹೋದಂತೆಲ್ಲ , ಒತ್ತಡ ಸೃಷ್ಟಿಯಾಗುತ್ತಾ , ಅದು ಸಿಡಿಯುವುದು ಅನಿವಾರ್ಯ.

ಹಾಗಾಗಿ ಒತ್ತಡವನ್ನು ಸ್ಫೋಟಿಸುವ ಮಟ್ಟಕ್ಕೆ ಬಿಡದೆ , ಸಮತೋಲನ ಕಾಪಾಡಿಕೊಳ್ಳುವುದು ಬಹು ಮುಖ್ಯ .

ಸನಾತನ ಧರ್ಮದಲ್ಲಿ ನಮ್ಮ ಪುರಾಣ, ಪುಣ್ಯ ಕಥೆಗಳಲ್ಲಿ ಈ ಸತ್ಯವನ್ನು ಸಾವಿರಾರು ವರ್ಷಗಳ ಹಿಂದೆಯೇ ತೋರಿಸಿದ್ದಾರೆ.. ದೇವರುಗಳಿಗೂ ಒತ್ತಡ ತಪ್ಪಿದ್ದಲ್ಲ ಎಂಬುದು ನಮ್ಮ ಪುರಾಣಗಳ ಸಂದೇಶ . ಆದರೆ ದೇವರು ತಮ್ಮ ಒತ್ತಡವನ್ನು ಹೇಗೆ ನಿಭಾಯಿಸಿದರು ಎಂಬುದು ನಮಗೆ ನಮ್ಮ ಇತಿಹಾಸಗಳು ತಿಳಿಹೇಳುವ ಪಾಠಗಳು.

ಶ್ರೀರಾಮನ ಜೀವನವೇ ಇದಕ್ಕೆ ಉದಾಹರಣೆ. ಧರ್ಮಕ್ಕಾಗಿ ರಾಜ್ಯವನ್ನು ತ್ಯಜಿಸಿದ ವ್ಯಕ್ತಿ, ಕೇವಲ ರಾಜನಾಗಲಿಲ್ಲ, ಆದರ್ಶ ರಾಜನಾಗಿ ಮರ್ಯಾದ ಪುರುಷೋತ್ತಮನಾದ ; ಮಾನವ ರೂಪಿಯಾದ ರಾಮನು, ಮನುಷ್ಯನ ಮನಸ್ಸು ಎಷ್ಟು ಪರೀಕ್ಷೆ ಮತ್ತು ಒತ್ತಡಗೊಳಗಾಗಬಹುದು ಎಂಬುದನ್ನು ತೋರಿಸಿದ ದೇವರು . ಅರಣ್ಯ ಜೀವನ, ಪ್ರಜೆಗಳ ನೋವು, ಯುದ್ಧದ ಹೊಣೆ, ಸಂಬಂಧಗಳ ಸಮಸ್ಯೆ, ವಿರಹ ಇವೆಲ್ಲವೂ ಶ್ರೀ ರಾಮನು ಒಬ್ಬ ಪರಿಪೂರ್ಣ ದೈವೀ ಸ್ವರೂಪಿ ಮನುಷ್ಯನಾಗಿದ್ದರೂ ಅವನ ಮನಸ್ಸು ಎಷ್ಟು ಒತ್ತಡದಲ್ಲಿ ಇತ್ತೆಂಬುದನ್ನು ನಿರೂಪಿಸುತ್ತದೆ .



ಶ್ರೀರಾಮನು ಒತ್ತಡವನ್ನು ಹೇಗೆ ನಿಭಾಯಿಸಿದನು ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ .

1. ಧರ್ಮದ ಆಧಾರ , ಕರ್ತವ್ಯ ಮತ್ತು ಭಾದ್ಯತೆ :

ರಾಜ್ಯ ತ್ಯಾಗ, ಅರಣ್ಯವಾಸ , ಯುದ್ಧ, ವೈಯಕ್ತಿಕ ನೋವುಗಳು , ವಿರಹ ಇವುಗಳ ಮಧ್ಯೆ ರಾಮನಲ್ಲಿ ಒಂದು ಸುಪ್ತ ಬಲ ಇತ್ತು. ಯಾವ ನಿರ್ಧಾರ ಮಾಡಬೇಕು ಎಂಬ ಪ್ರಶ್ನೆಗಿಂತ, ಧರ್ಮಕ್ಕೆ ಸರಿಯಾದದ್ದೇನು ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದನು. ಈ ದೃಷ್ಟಿಕೋನ ಒತ್ತಡವನ್ನು ಸಮಸ್ಯೆಯಾಗಿ ನೋಡದೆ ಬಾಧ್ಯತೆಯಾಗಿ ನೋಡಲು ಕಲಿಸಿತು. ಇದು ನಮಗೆಲ್ಲ ಒಂದು ಅನುಕರಣೀಯ ಮಾರ್ಗ . ನಾವು ಸರಿಯಾದ ಮತ್ತು ಧರ್ಮದ ದಾರಿಯಲ್ಲಿದೇವೇಯೆ ಮತ್ತು ಇದು ನಮ್ಮ ಕರ್ತವ್ಯ ಮತ್ತು ಭಾದ್ಯತೆಯೇ ಎಂದು ಆಲೋಚಿಸಿದಾಗ , ಅದು ನಮಗೆ ಸರಿ ದಾರಿ ಎನಿಸಿ , ಇದು ನಮ್ಮ ಕರ್ತವ್ಯ ಮತ್ತು ಭಾದ್ಯತೆ ಎಂಬ ಅರಿವಾದಾಗ , ಒತ್ತಡವನ್ನು ಸಮತೋಲನವಾಗಿ ನಿಭಾಯಿಸಬಹುದು ,

2. ಆಕ್ರೋಶ, ಅವಮಾನ, ತೊಂದರೆಎಲ್ಲವನ್ನೂ ಮೌನದಿಂದ ಸಂಭಾಳಿಸುವುದು : ರಾಮನು ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ಸಹ ಕೋಪ ಅಥವಾ ಹಗೆತನಕ್ಕೆ ತಲೆಬಾಗಲಿಲ್ಲ. ಒತ್ತಡವನ್ನು ಪ್ರತಿಕ್ರಿಯೆಯಿಂದ ಅಲ್ಲ, ಸಂಯಮದಿಂದ ನಿಭಾಯಿಸಿದನು . ನಮ್ಮ ಜೀವನದಲ್ಲಿಯೂ ಇದು ದೊಡ್ಡ ಪಾಠ: ಎಲ್ಲ ಸಮಸ್ಯೆಗಳಿಗೆ ತಕ್ಷಣದ ಉತ್ತರ ನಿರೀಕ್ಷಿಸಬಾರದು . ಕೆಲವು ಸಮಸ್ಯೆಗಳಿಗೆ ತಾಳ್ಮೆ ಸಾಕು. ನಾವು ಒತ್ತಡದಲ್ಲಿದ್ದಾಗ ಸಂಯಮ ಮತ್ತು ತಾಳ್ಮೆ ಇದ್ದರೆ , ಒತ್ತಡ ಭಾದಿಸುವುದಿಲ್ಲ .

3. ಎಲ್ಲಾ ಸಂಕಷ್ಟಕ್ಕೂ ಪರಿಹಾರವನ್ನು ಹುಡುಕುವ ಮನೋಭಾವ : ಲಕ್ಷ್ಮಣ ಗಾಯಗೊಂಡಾಗ, ಸೇತುವೆ ಕಟ್ಟಬೇಕಾದಾಗ, ಸೀತೆಯ ಹುಡುಕಾಟ ಈ ಎಲ್ಲ ಸಂದರ್ಭಗಳಲ್ಲಿ ರಾಮನು ಅತ್ಯಂತ ಕಠಿಣ ಪರಿಸ್ಥಿತಿಗಳನ್ನು ಎದುರಿಸಿದನು, ಆದರೆ ಪ್ರತಿ ಬಾರಿ ಸಮಸ್ಯೆ ಬಂದಾಗ ಪರಿಹಾರದತ್ತ ಲಕ್ಷ್ಯವಿತ್ತನು . ಒತ್ತಡದಲ್ಲಿದ್ದಾಗ , ಒತ್ತಡಕ್ಕೆ ಸಿಲುಕದೆ , ಸಮಸ್ಯೆಗೆ ಪರಿಹಾರ ಹುಡುಕಿದಾಗ ಒತ್ತಡದ ಸಮಸ್ಯೆ ಇರುವುದಿಲ್ಲ ಅಥವಾ ಒತ್ತಡ ಖಂಡಿತ ಕಡಿಮೆಯಾಗುತ್ತದೆ .

4. ವೇದನೆಯನ್ನು ಬಲವನ್ನಾಗಿ ಪರಿವರ್ತಿಸಿಕೊಳ್ಳುವುದು : ಪ್ರಜೆಗಳ ನೋವು, ಕುಟುಂಬದಿಂದ ಬೇರ್ಪಡುವಿಕೆ , ಯುದ್ಧಇವು severe emotional pressure.

ಆದರೆ ರಾಮನ ಪ್ರತಿಕ್ರಿಯೆ ಅಸಾಮಾನ್ಯ. ಎಷ್ಟೇ ನೋವು ಇದ್ದರೂ ಆ ನೋವು, ಅವನನ್ನು ಹತಾಶನನ್ನಾಗಿ ಮಾಡಲು ಬಿಡಲಿಲ್ಲ . ಅದಕ್ಕಾಗಿ ಅವನು ಸಂಕಷ್ಟವನ್ನು ಶಕ್ತಿಯನ್ನಾಗಿ ಪರಿವರ್ತಿಸಿಕೊಂಡನು. ಒತ್ತಡವನ್ನು ಎದುರಿಸುವ ಮನೋಸ್ಥೈರ್ಯ ಬಂದಾಗ ಒತ್ತಡ ತಾನೇ ತಾನಾಗಿ ಕಡಿಮೆಯಾಗುತ್ತದೆ .



ನಾವು ಎಷ್ಟೇ ಕಷ್ಟ ಪಟ್ಟರೂ , ಕೆಲವು ಸಲ ನಾವು ಕೈ ಹಿಡಿದ ಕೆಲಸ ಕೈಗೂಡುವುದಿಲ್ಲ . ಹಾಗಾಗಿ ಹತಾಶೆಯಿಂದ ಬಹಳ ಒತ್ತಡಕ್ಕೆ ಸಿಲುಕುತ್ತೇವೆ . ಇಲ್ಲಿ ಭಗವದ್ ಗೀತೆಯ ಶ್ಲೋಕ: ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ ಮಾ ಕರ್ಮಫಲಹೇತುರ್ಭೂರ್ಮಾ ತೇ ಸನ್ಗೋಸ್ತ್ವಕರ್ಮಣಿ ಇದರ ಅರ್ಥ: ನಿಮಗೆ ಕರ್ತವ್ಯವನ್ನು ನಿರ್ವಹಿಸುವಲ್ಲಿ ಮಾತ್ರ ಅಧಿಕಾರವಿದೆ. ಆದರೆ ಅದರ ಫಲದ ಮೇಲೆ ಎಂದಿಗೂ ಅಧಿಕಾರವಿಲ್ಲ.

ನಾವು ನಮ್ಮ ಕಾರ್ಯವನ್ನು ಶ್ರದ್ಧೆಯಿಂದ ಮಾಡಬೇಕೆ ಹೊರತು ಅದರ ಫಲಾಫಲಗಳ ಮೇಲೆ ನಮಗೆ ಹಕ್ಕಿಲ್ಲ . ಇದರಿಂದ ನಮ್ಮ ಕೆಲಸಗು ಕೈಗೂಡದಿದ್ದಾಗ , ಒತ್ತಡದಿಂದ ಹತಾಶರಾಗುವುದಕ್ಕಿಂತ , ನನ್ನ ಕೆಲಸವನ್ನು ಮಾಡಿದ್ದೇನೆ , ಮಿಕ್ಕಿದ್ದು ಭಗವಂತನಿಗೆ ಬಿಟ್ಟಿದ್ದು ಎಂಬ ಆಧ್ಯಾತ್ಮಿಕ ಧೋರಣೆ ಅಳವಡಿಸಿಕೊಂಡರೆ ಒತ್ತಡ ಎಂದೂ ಭಾದಿಸಲಾರದು .

ಶ್ರೀ ರಾಮನ ಜೀವನವೇ ಒತ್ತಡ ನಿರ್ವಹಣೆಯ ಒಂದು ಅಧ್ಯಯನ. ಶ್ರೀ ರಾಮನ ಕರ್ತವ್ಯದ ದೃಷ್ಟಿ, ತಾಳ್ಮೆ ಮತ್ತು ಮೌನದ ಶಕ್ತಿ, ಪರಿಹಾರವನ್ನು ಹುಡುಕುವ ಧೈರ್ಯ ಮತ್ತು ನೋವನ್ನು ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳುವ ಸ್ಥೈರ್ಯ , ಫಲದ ಬಗ್ಗೆ ಒತ್ತಡವಿಲ್ಲದ ಕರ್ಮ ಇವು ಒತ್ತಡವನ್ನು ಶ್ರೀ ರಾಮಚಂದ್ರನು ನಿಭಾಯಿಸಲು ಕಂಡುಕೊಂಡ ಮಾರ್ಗ . ಇದು ನಮಗೆ ಅನುಕರಣೀಯ . ಆದ್ದರಿಂದಲೇ ರಾಮಾಯಣವು ಕೇವಲ ಧಾರ್ಮಿಕ ಕತೆ ಅಲ್ಲ, ಒಬ್ಬ ಮಾನವನು ಮನಸ್ಸನ್ನು ಹೇಗೆ ಗಟ್ಟಿಗೊಳಿಸಬೇಕು ಎಂಬ ಒಂದು ಜೀವಂತ ಪಾಠ.

ಮಹಾಭಾರತದ ದ್ರೌಪದಿಯ ಮೌನವೂ ಇದೇ ಕಥೆ ಹೇಳುತ್ತದೆ. ಅವಳ ಮೌನ ಎಷ್ಟೋ ಬಾರಿ ಪರೀಕ್ಷೆಗೆ ಒಳಗಾಯಿತು. ಅನ್ಯಾಯ, ಅವಮಾನ, ನೋವು ಇವೆಲ್ಲವನ್ನೂ ತಾಳಿದ್ದಳು. ಆದರೆ ಒಂದು ಕ್ಷಣದಲ್ಲಿ ಅವಳು ಸ್ಫೋಟಿಸಿದಳು. ಇದು ಅವಳ ದುರ್ಬಲತೆ ಅಲ್ಲ ಮನುಷ್ಯನ ಮನಸ್ಸಿನ ಮಿತಿ.

ರಾಮಾಯಣದ ಹನುಮಂತನ ಕಥೆ ಕೂಡ ಅದೇ ಆಗಿದೆ . ವಿಶ್ವದ ಶ್ರೇಷ್ಠ ಶಕ್ತಿಯ ಸಂಕೇತವೆಂಬಂತೆ ನಾವು ಅವನನ್ನು ಪೂಜಿಸುತ್ತೇವೆ. ಆದರೆ ಲಂಕೆಯ ತೀರದಲ್ಲಿ ನಿಂತಾಗ, ಅವನಿಗೂ ಸಂಶಯ ಬಂದಿತ್ತು. ತನ್ನ ಶಕ್ತಿಯ ಮೇಲಿನ ನಂಬಿಕೆಗೆ ಮಸಿ ಬಿದ್ದಿತ್ತು. ಆಗ ಒಂದು ಮಾತು, ಒಂದು ಸ್ಮರಣೆ, ಒಂದು ಮಾರ್ಗದರ್ಶನ ಅವನ ಶಕ್ತಿಯನ್ನು ಮರುಜ್ವಲಿತಗೊಳಿಸಿತು. ಇಲ್ಲಿಯೂ ಸತ್ಯ ಒಂದೇಶಕ್ತಿ ಇದ್ದರೂ, ಮನುಷ್ಯನು ಸಂಶಯಕ್ಕೆ ಒಳಗಾಗುತ್ತಾನೆ; ಮನಸ್ಸಿನ ಬಲವೂ ಪರೀಕ್ಷೆಗೆ ಒಳಗಾಗುತ್ತದೆ.

ಮಾನವ ಜೀವನದ ಒತ್ತಡಗಳು ವಾಸ್ತವಿಕ ಜಗತ್ತಿನಲ್ಲಿ ಅಪರೂಪವೇನಲ್ಲ ಒತ್ತಡವನ್ನು ಪ್ರತಿಯೊಬ್ಬರಲ್ಲೂ ನಾವು ಕಾಣಬಹುದು . ಒಬ್ಬ ತಾಳ್ಮೆಯ ವ್ಯಕ್ತಿ, ಒಬ್ಬ ಪ್ರೀತಿಯ ತಂದೆ, ಒಬ್ಬ ಜವಾಬ್ದಾರಿ ಮಹಿಳೆ, ಒಬ್ಬ ಕರುಣೆಯ ಹೃದಯಇವರ ಮನಸ್ಸು ಹೆಚ್ಚು ಒತ್ತಡವನ್ನು ಹೊರುತ್ತದೆ. ಏಕೆಂದರೆ ಅವರು ಹೆಚ್ಚು ಸಹಿಸುತ್ತಾರೆ. ಅವರು ಕುಟುಂಬದ, ಸಮಾಜದ, ಸಂಬಂಧಗಳ ಭಾರವನ್ನು ಮೌನವಾಗಿ ಹೊರುತ್ತಾರೆ. ಅವರ ಮೌನವೂ ಒಮ್ಮೆ ಸಿಡಿಯುತ್ತದೆ. ಏಕೆಂದರೆ ಮಿತಿ ಎಂಬುದು ದುರ್ಬಲತೆ ಅಲ್ಲ, ಅದು ಮನುಷ್ಯನ ಇತಿಮಿತಿಯ ಇನ್ನೊಂದು ಮುಖ.

ಜೀವನದ ಪಾಠವೇ ಇದುಒತ್ತಡವನ್ನು ಸಹಿಸುವ ಶಕ್ತಿ ದೊಡ್ಡದು. ಆದರೆ ಅದರ ಮಿತಿಯನ್ನು ಅರಿಯುವುದು ಇನ್ನೂ ದೊಡ್ಡದು. ಎಲ್ಲವನ್ನೂ ತಾನೇ ಹೊತ್ತು ಸಾಗುವುದೇ ಧೈರ್ಯ ಅಲ್ಲ; ಯಾವಾಗ ಇಲ್ಲಿಗೆ ಸಾಕು ಎಂದು ಹೇಳುವುದು , ತಿಳಿಯುವುದು ಧೈರ್ಯ. ಬಲೂನ್‌ಗೆ ಗಾಳಿ ಬೇಕು, ಆದರೆ ಮಿತಿಯೊಳಗೆ. ಮನಸ್ಸಿಗೂ ಸಂಬಂಧಗಳು ಬೇಕು, ಕರ್ತವ್ಯಗಳು ಬೇಕು, ಜವಾಬ್ದಾರಿಗಳು ಬೇಕು. ಆದರೆ ಅವುಗಳು ಅತಿಯಾದಾಗ, ಅದೇ ಮನುಷ್ಯನಿಗೆ ಅಪಾಯ.


ಪುರಾಣಗಳು ಮತ್ತು ಜೀವನದ ಅನುಭವಗಳು ಒಟ್ಟಾಗಿ ಒಂದೇ ಸಂದೇಶ ನೀಡುತ್ತವೆ. ಬಲಶಾಲಿಯಾದವರು ಒತ್ತಡದಿಂದ ಮಣಿಯುವುದಿಲ್ಲ ಎಂಬುದು ಸತ್ಯವಲ್ಲ. ಅವರು ಮಣಿಯುತ್ತಾರೆ. ಮೌನವಿರುತ್ತವೆ. ಮನಸ್ಸು ಮುರಿಯುತ್ತದೆ. ಏಕೆಂದರೆ ಅವರು ಒಳ್ಳೆಯವರು. ಅವರು ಹೆಚ್ಚು ಹೊರುತ್ತಾರೆ. ಹೆಚ್ಚು ಸಹಿಸುತ್ತಾರೆ. ಆದ್ದರಿಂದ ಅವರ ಮಿತಿಯೂ ಬೇಗ ಬರುತ್ತದೆ. ಸತ್ಯವೆಂದರೆ, ಒಳ್ಳೆಯತನ ಉಳಿಯಬೇಕಾದರೆ, ಮೊದಲು ಮನಸ್ಸು ಉಳಿಯಬೇಕು. ಸಂಬಂಧಗಳ ಸೌಂದರ್ಯ, ಜೀವನದ ಮೌಲ್ಯ, ಮಾನವೀಯತೆಯ ಶ್ರೇಷ್ಠತೆ. ಇವೆಲ್ಲವೂ ಬದುಕುಳಿಯುವುದು ಜಗತ್ತು ಸುಲಭವಾಗಿರುವುದರಿಂದಲ್ಲ, ಬದಲಾಗಿ ನಾವು ನಮ್ಮ ಆಂತರಿಕ ಸಮತೋಲನವನ್ನು ರಕ್ಷಿಸಿಕೊಳ್ಳುವುದರಿಂದ.

ಮನಸ್ಸನ್ನು ಕಾಪಾಡಿಕೊಳ್ಳುವುದು, ಮಿತಿಯನ್ನು ಅರಿಯುವುದು, ಮತ್ತು ಒತ್ತಡದ ಮುನ್ನೆಚ್ಚರಿಕೆಗಳನ್ನು ಗುರುತಿಸುವುದುಇದೇ ಜೀವನದ ನಿಜವಾದ ಜ್ಞಾನ. ದೇವತೆಗಳಿಗೂ, ನಾಯಕರಿಗೂ, ಪುರಾಣ ಪುರುಷರಿಗೂ ಈ ಮಿತಿಯೇ ಸವಾಲಾಗಿತ್ತು. ಅವರು ಅದನ್ನು ನಿರ್ವಹಿಸಿದ್ದು ನಮಗೆ ಪಾಠ .

ನಮ್ಮ ಜೀವನ ಬಲೂನಿಗೆ ಹೋಲುತ್ತದೆ. ಗಾಳಿ ಸಮತೋಲನದಲ್ಲಿದ್ದಾಗ ಅದು ಸುಂದರ. ಮೀರಿದಾಗ ಅದು ಸಿಡಿಯುತ್ತದೆ.

ಮನಸ್ಸು ಕೂಡ ಹೀಗೆ. ಅದು ಸ್ಫೋಟಗೊಳ್ಳದಂತೆ ನಿರ್ವಹಿಸುವುದು ಜೀವನದ ಕಲೆ . ಅದನ್ನು ಅರಿತುಕೊಂಡಾಗ ಮಾತ್ರ ಜೀವನ ಸುಲಭವಾಗುತ್ತದೆ.

ಅದೇ ಬದುಕಿನ ಸತ್ಯ. ಅದೇ ಮನುಷ್ಯತ್ ಒತ್ತಡವನ್ನು ನಿರ್ವಹಿಸಿಕೊಳ್ಳುವ ರಹಸ್ಯ.



ಸ್ವಾಮಿನಾಥನ್
ಬೆಂಗಳೂರು

# ಬಾಲ್ಯ ವಿವಾಹ ನಿಷೇಧದ ಕಾನೂನು ರುಕ್ಮಾಬಾಯಿ ಎಂಬ ದಿಟ್ಟ ಮಹಿಳೆ

ಅದು 1887ರ ಸಮಯ. ಮುಂಬೈಯ ಹೈಕೋರ್ಟ್ ಆ ಮಹಿಳೆಗೆ ಎರಡು ಆಯ್ಕೆಗಳನ್ನು ನೀಡಿತು. ಬಾಲ್ಯದಲ್ಲಿ ನಿನ್ನನ್ನು ವಿವಾಹವಾದ ವ್ಯಕ್ತಿಯೊಂದಿಗೆ ಹೋಗಿ ಬದುಕನ್ನು ಕಟ್ಟಿಕೋ, ಇಲ್ಲವೇ ಜೈಲಿಗೆ ಹೋಗು ಎಂದು. ಆಕೆ ಜೈಲಿಗೆ ಹೋಗಲು ತಯಾರಾದಳು.

ಆಕೆಯ ಉತ್ತರ ಎಲ್ಲರಿಗೂ ದಿಗ್ಭ್ರಾಂತಿಯನ್ನು ಉಂಟು ಮಾಡಿತು. ಕೇವಲ ಭಾರತ ದೇಶವನ್ನು ಮಾತ್ರವಲ್ಲದೆ ಅಂದಿನ ಭಾರತ ದೇಶವನ್ನು ಆಳುತ್ತಿದ್ದ ಇಂಗ್ಲೆಂಡ್ ದೇಶದವರೆಗೆ ಈ ವಿಷಯದ ಕುರಿತ ಚರ್ಚೆ ಮುಂದುವರೆದು ಕಾನೂನಿನ ಕ್ರಮದಲ್ಲಿ ಬದಲಾವಣೆಯನ್ನು ಕೈಗೊಂಡು ನಂತರದ ಕೋಟ್ಯಾಂತರ ಹೆಣ್ಣುಮಕ್ಕಳ ಪಾಲಿಗೆ ವರದಾನವಾಯಿತು. ಕೇವಲ ಒಬ್ಬ ಹೆಣ್ಣುಮಗಳ ದಿಟ್ಟ ನಿರ್ಧಾರ ಒಂದು ಇಡೀ ಬ್ರಿಟೀಷ್ ಸಾಮ್ರಾಜ್ಯವನ್ನು ಮೊಳಕಾಲೂರಿ ನಿಲ್ಲುವಂತೆ ಮಾಡಿತು. ಆ ಹೆಣ್ಣು ಮಗಳೇ ರುಕ್ಮಾಬಾಯಿ.

1864 ರಲ್ಲಿ ಮುಂಬೈಯಲ್ಲಿ ಜಯಂತಿ ಬಾಯಿ ಎಂಬ ಹೆಣ್ಣು ಮಗಳನ್ನು ಕೇವಲ 14 ವರ್ಷ ವಯಸ್ಸಿನಲ್ಲಿಯೇ ಮದುವೆ ಮಾಡಿಕೊಡಲಾಯಿತು. ತನ್ನ 15ನೇ ವಯಸ್ಸಿಗೆ ಆಕೆ ಹೆಣ್ಣು ಮಗುವೊಂದನ್ನು ಹಡೆದಳು ಹಾಗೂ 17ನೇ ವಯಸ್ಸಿಗೆ ಗಂಡನನ್ನು ಕಳೆದುಕೊಂಡು ವಿಧವೆಯಾದಳು. ಮುಂದೆ ತನ್ನ ಮಗಳು ಎಂಟು ವರ್ಷದವಳಿದ್ದಾಗ ಆಕೆಯ ತಾಯಿ ಡಾ. ಸಖಾರಾಮ್ ಅರ್ಜುನ್ ಎಂಬ ವೃತ್ತಿಯಿಂದ ತಜ್ಞ ವೈದ್ಯ ಹಾಗೂ ಪ್ರವೃತ್ತಿಯಿಂದ ಸಮಾಜ ಸುಧಾರಕರಾಗಿದ್ದ ವ್ಯಕ್ತಿಯನ್ನು ವಿವಾಹವಾದಳು. ತನ್ನ ಕಾಲದ ಪುರುಷ ಸಮಾಜದ ಯೋಚನೆಗಳಿಗಿಂತ ವಿಭಿನ್ನವಾಗಿ ಯೋಚಿಸುತ್ತಿದ್ದ ಡಾ. ಸಖಾರಾಮ್ ಹೆಣ್ಣು ಮಕ್ಕಳು ಸುಶಿಕ್ಷಿತರಾಗಬೇಕು ಎಂದು ಬಯಸುತ್ತಿದ್ದರು. ತನ್ನ ಮನೆಯ ತುಂಬಾ ಪುಸ್ತಕಗಳನ್ನು ಜೋಡಿಸಿದ್ದ ಆತ ರುಕ್ಮ ಬಾಯಿಗೆ ಓದಿನಲ್ಲಿ ಆಸಕ್ತಿಯನ್ನು ವಹಿಸಲು ಪ್ರೋತ್ಸಾಹಿಸಿದ.ಸಮಾಜ ಸುಧಾರಕನಾದರೂ ಕೂಡ ಆತನಿಗೂ ಕೂಡ ತನ್ನದೇ ಆದ ಕೆಲವು ಸಾಮಾಜಿಕ ಮಿತಿಗಳು ಇದ್ದವು.

ಅಂತೆಯೇ ರುಕುಮಾ ಬಾಯಿ 11 ವರ್ಷದವಳಾದಾಗ ಆಕೆಗೆ 19ರ ಹರಯದ ದಾದಾ ಜೀ ಭಿಕಾಜಿ ಎಂಬ ವ್ಯಕ್ತಿಯೊಡನೆ ಜಯಂತಿ ಬಾಯಿಯ ತಂದೆ ಸನಾತನ ಕಾಲದಿಂದಲೂ ಆಚರಿಸುತ್ತಿದ್ದ ರೀತಿಯಲ್ಲಿ ಎಲ್ಲ ಭಾರತೀಯ ಸಂಪ್ರದಾಯಗಳನ್ನು ಪಾಲಿಸಿ ಮದುವೆ ಮಾಡಿದರು.

ಪುಟ್ಟ ಬಾಲಕಿಯಾದ ಆಕೆಗೆ ಯಾವುದೇ ರೀತಿಯ ಆಯ್ಕೆಗಳಾಗಲಿ, ಮದುವೆ ಮಾಡಿಕೊಳ್ಳಲು ಒಲ್ಲೆ ಎಂದು ಹೇಳುವ ಧೈರ್ಯವಾಗಲಿ ಇರಲಿಲ್ಲ. ಮೌನ ಒಪ್ಪಿಗೆ ಆಕೆಯದಾಗಿತ್ತು.ಅಂದಿನ ಸಮಾಜದ ನಿಯಮಾವಳಿಗಳ ಪ್ರಸಾರ ಮದುವೆ ಆದ ನಂತರವೂ ಕೂಡ ಋತುಮತಿಯಾಗುವವರೆಗೆ ತನ್ನ ತವರು ಮನೆಯಲ್ಲಿಯೇ ಉಳಿಯಬೇಕಾದ ಕಾರಣ ಆಕೆ ತನ್ನ ಶಿಕ್ಷಣವನ್ನು ರಹಸ್ಯವಾಗಿಯೇ ಮುಂದುವರಿಸಿದಳು

ಆಕೆಯನ್ನು ಮದುವೆಯಾದ ವ್ಯಕ್ತಿ ಅಂದಿನ ಸಾಮಾಜಿಕ ನೀತಿ ನಿಯಮಾವಳಿಗೆ ಬದ್ಧನಾಗಿದ್ದ. ತನ್ನ ಶಿಕ್ಷಣವನ್ನು ಪೂರೈಸಿದ ರುಕ್ಮಭಾಯಿ ಅತ್ಯಂತ ಜಾಣ ಹಾಗೂ ಸಂಸ್ಕಾರವಂತ ಹೆಣ್ಣುಮಗಳಾಗಿ ಪರಿವರ್ತಿತಳಾಗಿದ್ದರು. ಆಕೆಯಲ್ಲಿ ಆಧುನಿಕ ವಿಚಾರಧಾರೆಗಳ ಪ್ರಭಾವದಿಂದ ತನ್ನದೇ ಆದ ವೈಯುಕ್ತಿಕ ಅಭಿಪ್ರಾಯಗಳು ಹರಳುಗಟ್ಟಿದ್ದವು. ಅಂದಿನ ಕಾಲದ ಇತರ ಸಮಾಜ ಸುಧಾರಕರೊಂದಿಗಿನ ಭೇಟಿ, ಅಭಿಪ್ರಾಯ, ವಿಚಾರ ವಿನಿಮಯಗಳು, ಚರ್ಚೆಗಳು, ಭಾಷಣಗಳು, ಉಪನ್ಯಾಸಗಳು ಆಕೆಯ ಮೇಲೆ ಪರಿಣಾಮವನ್ನು ಬೀರಿದ್ದವು.



ಆಕೆಯ ಪತಿ ದಾದಾಜಿ ತನ್ನ ಸೋಮಾರಿತನದ ಕಾರಣದಿಂದ ಶಾಲೆಯಿಂದ ಹೊರ ಹಾಕಲ್ಪಟ್ಟಿದ್ದ ಹಾಗೂ ಸಾಲದ ಸುಳಿಯಲ್ಲಿ ಸಿಲುಕಿದ್ದ. ದುಶ್ಚಟಗಳಿಗೆ ದಾಸನಾದ ಆತನ ಚಿಕ್ಕಪ್ಪನ ಕುಮ್ಮಕ್ಕು ಕೂಡ ಆತನಿಗಿತ್ತು. ತನ್ನೆಲ್ಲ ಆರ್ಥಿಕ ತೊಂದರೆಗಳನ್ನು ನಿವಾರಿಸಲು ತನ್ನ ಪತ್ನಿಯ ತವರು ಮನೆ ಆತನ ಪಾಲಿಗೆ ಅಲ್ಲಾವುದ್ದೀನನ ದೀಪವಾಗಲಿ ಎಂಬುದು ಆತನ ಬಯಕೆಯಾಗಿತ್ತು.

1884 ರಲ್ಲಿ 20 ವರ್ಷದ ರುಕುಮಾಬಾಯಿಯನ್ನು ಆತ ತನ್ನೊಂದಿಗೆ ಬಂದು ವಾಸಿಸಲು ಕೇಳಿಕೊಂಡ... ಆದರೆ ಆತನ ಕೆಟ್ಟ ಚಟಗಳ ಕುರಿತು ಅರಿವಿದ್ದ ಆಕೆ ಆತನ ಕೋರಿಕೆಯನ್ನು ಸಾರಾಸಗಟಾಗಿ ನಿರಾಕರಿಸಿದಳು. ಆಕೆಯನ್ನು ಪತ್ನಿಯಾಗಿ ಮನೆ ತುಂಬಿಸಿಕೊಂಡು ತನ್ನೆಲ್ಲ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬೇಕು ಎಂದು ಆಶಿಸಿದ್ದ ದಾದಾಜಿ ಶತಾಯಗತಾಯ ಆಕೆಯನ್ನು ಹೊಂದಲೇಬೇಕೆಂಬ ಹಟದಿಂದ ನ್ಯಾಯಾಲಯದ ಮೊರೆ ಹೊಕ್ಕ.

19ನೇ ಶತಮಾನದಲ್ಲಿ ಸಾರ್ವಜನಿಕವಾಗಿ ಅತ್ಯಂತ ಚರ್ಚೆಗೆ ಒಳಗಾದ ಕಾನೂನು ಹೋರಾಟ ದಾದಾಜಿ ಮತ್ತು ರುಕ್ಮಬಾಯಿ ಅವರದಾಗಿತ್ತು. ದಾದಾ ಜೀ ದಾಂಪತ್ಯದ ಹಕ್ಕುಗಳ ಮರುಸ್ಥಾಪನೆಯ ಪ್ರಾಸ್ಟಿಟ್ಯೂಷನ್ ಆಫ್ ಕಾಂಜುಗಲ್ ರೈಟ್ಸ್ ದಾವೆಯನ್ನು ಪತ್ನಿಯ ಮೇಲೆ ಹೂಡಿದ್ದ. ಈ ಹಕ್ಕಿನ ಪ್ರಕಾರ ಪತ್ನಿ ಆತನ ಸೊತ್ತಾಗಿದ್ದು ಕಾನೂನು ಆಕೆ ತನ್ನ ಪತಿಯ ಜೊತೆಯಲ್ಲಿ ಬಾಳುವೆ ಮಾಡಬೇಕು ಎಂದು ಸೂಚಿಸಿತು.

ಇದಕ್ಕೆ ರುಕ್ಮಾ ಬಾಯಿಯ ಉತ್ತರ ಹೀಗಿತ್ತು... ಅರಿಯದ ಅಬೋಧ ವಯಸ್ಸಿನಲ್ಲಿ ತನಗೆ ಮದುವೆ ಮಾಡಿಕೊಡಲಾಗಿದ್ದು ತಾನು ಅಸಹಾಯಕಳಾಗಿದ್ದೆ. ಮದುವೆ ಎಂದರೆ ಏನು ಎಂಬುದೇ ತನಗೆ ಗೊತ್ತಿರಲಿಲ್ಲ. ಅದೂ ಅಲ್ಲದೆ ಹೆಣ್ಣುಮಕ್ಕಳನ್ನು ಹೊಲ ಮನೆ,ದನ ಕರು ಒಡವೆಗಳ ರೀತಿಯಲ್ಲಿ ಆಸ್ತಿಯಂತೆ ಭಾವಿಸಬಾರದು ಎಂದು ಆಕೆ ವಾದ ಹೂಡಿದಳು. ಹೆಣ್ಣು ಮಕ್ಕಳು ಪುರುಷರಷ್ಟೇ ಸರಿ ಸಮಾನವಾಗಿ ಬದುಕುವ ಕಣ್ಣು ಹೊಂದಿದ್ದಾರೆ ಅವರನ್ನು ತಮ್ಮ ಹಕ್ಕಿನ ಸೊತ್ತಾಗಿ ಬೇರೆಯವರು ಭಾವಿಸಬಾರದು ಎಂದು ಆಕೆ ನ್ಯಾಯಾಲಯವನ್ನು ಒತ್ತಾಯಿಸಿದಳು.

ಇದಕ್ಕೂ ಮುನ್ನ ಈ ರೀತಿ ಹೆಣ್ಣು ಮಕ್ಕಳ ಹಕ್ಕಿನ ಕುರಿತಾಗಿ ನ್ಯಾಯಾಲಯದ ಮುಂದೆ ಯಾರೂ ಹಕ್ಕೊತ್ತಾಯವನ್ನು ಮಂಡಿಸಿರಲಿಲ್ಲ.

1885ರಲ್ಲಿ ಜಸ್ಟಿಸ್ ರಾಬರ್ಟ್ ಪಿನ್ಹೇ ಆಕೆಯ ಅಭಿಪ್ರಾಯಕ್ಕೆ ಮನ್ನಣೆ ನೀಡಿ ತಾವು ಪಾಲಿಸುತ್ತಿರುವ ಬ್ರಿಟಿಷ್ ಕಾನೂನು ಬಾಲ್ಯ ವಿವಾಹ ಮಾಡಲ್ಪಟ್ಟ ಅಬೋಧ ರುಕ್ಮಭಾಯಿಗೆ ಸಂಬಂಧ ಪಡುವುದಿಲ್ಲ ಎಂದು ತೀರ್ಪು ನೀಡಿತು.

ಸಂಪ್ರದಾಯವಾದಿ ಭಾರತೀಯರು ಸಿಡಿದೆದ್ದರು. ಹಿಂದೂ ರೀತಿ ರಿವಾಜುಗಳನ್ನು ಪ್ರಶ್ನಿಸುವ ನ್ಯಾಯಾಲಯದ ವಿರುದ್ಧ ಸನಾತನವಾದಿಗಳು ದನಿಯೆತ್ತಿದರು.ಉಕ್ಕಿನ ಮನುಷ್ಯ ಎಂದೇ ಭಾರತೀಯ ಸ್ವತಂತ್ರ ಇತಿಹಾಸದಲ್ಲಿ ಹೆಸರಾದ ಬಾಡೋಲಿಯ ಸರದಾರ ಬಾಲಗಂಗಾಧರನಾಥ ತಿಲಕ್ ಅವರು ರುಕ್ಮಾಭಾಯಿಯ ಆಂಗ್ಲ ಶಿಕ್ಷಣದ ಪರಿಣಾಮವೇ ಆಕೆಯ ಈ ತೀರ್ಮಾನಕ್ಕೆ ಕಾರಣ ಎಂದು ಹೇಳಿದರು

ಭಾರತದ ಹಿಂದುತ್ವ ಅಪಾಯದಲ್ಲಿದೆ ಎಂದು ಸಾರ್ವಜನಿಕರು ಕೂಗು ಹಾಕಿದರು . 1886 ರಲ್ಲಿ ಮತ್ತೆ ಮರುಪರಿಶೀಲನೆಗೆ ಒಳಪಟ್ಟ ತೀರ್ಪನ್ನು ಹೆಚ್ಚುವರಿ ನ್ಯಾಯಾಲಯದ ಅಂದಿನ ಜಡ್ಜ್ ಆಗಿದ್ದ ಜಸ್ಟಿಸ್ ಫರಾನ್ ಅವರು ರುಕ್ಮಬಾಯಿ ಮರಳಿ ತನ್ನ ಪತಿಯ ಮನೆಗೆ ಹೋಗಬೇಕು ಇಲ್ಲವೇ ಆರು ತಿಂಗಳ ಕಾಲ ಕಾರಾಗ್ರಹ ವಾಸವನ್ನು ಅನುಭವಿಸುವ ನಿಟ್ಟಿನಲ್ಲಿ ಜೈಲಿಗೆ ಹೋಗಬೇಕು ಎಂದು ಆದೇಶವನ್ನು ಹೊರಡಿಸಿದರು.

ಇದೀಗ ರುಕ್ಮಭಾಯಿತಾನು ಜೈಲಿಗೆ ಹೋದರೂ ಪರವಾಗಿಲ್ಲ, ಆದರೆ ತನ್ನ ಒಪ್ಪಿಗೆ ಇಲ್ಲದೆ ಮಾಡಿದ ವಿವಾಹವನ್ನು ಹಾಗೂ ವಲ್ಲದ ಗಂಡನೊಂದಿಗಿನ ಬದುಕನ್ನು ನಡೆಸಲಾರೆ ಎಂಬ ಹೇಳಿಕೆ ನೀಡಿದ್ದು ಐತಿಹಾಸಿಕ ಸಮರ್ಥನೆಯಾಯಿತು. ಆಕೆಯ ಮಾತುಗಳು, ಕೇಸಿನ ವಿವರಗಳು ಸಮುದ್ರಗಳನ್ನು ದಾಟಿ ಬ್ರಿಟಿಷ್ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾದವು. ಇಂಗ್ಲೆಂಡಿನ ಪ್ರಸಿದ್ಧ ಮಹಿಳಾ ನಿಯತಕಾಲಿಕವೊಂದು ರುಕ್ಮಾಬಾಯಿಯ ನಿಲುವನ್ನು ಸಮರ್ಥಿಸಿತು, ಮಾತ್ರವಲ್ಲದೇ ಪ್ರಸಿದ್ಧ ತತ್ವಜ್ಞಾನಿಯಾಗಿದ್ದ ಮ್ಯಾಕ್ಸ್ ಮುಲ್ಲರ್ ರುಕ್ಮಾಭಾಯಿಯ ಆಂಗ್ಲ ಶಿಕ್ಷಣವು ಆಕೆಗೆ ತನ್ನ ಆಯ್ಕೆಗಳ ಕುರಿತು ಸ್ಪಷ್ಟ ನಿಲುವನ್ನು ಹೊಂದಲು ಮತ್ತು ನಿರ್ಣಯಗಳನ್ನು ಕೈಗೊಳ್ಳಲು ಅತ್ಯುತ್ತಮ ನ್ಯಾಯಾಧೀಶನಂತೆ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿಕೆ ನೀಡಿದರು.

ಇದೇ ಸಮಯದಲ್ಲಿ ರುಕ್ಮಾ ಬಾಯಿ ಅನಾಮಿಕವಾಗಿ ದಿ ಹಿಂದೂ ಲೇಡಿ ಎಂಬ ಹೆಸರಿನಲ್ಲಿ ಟೈಮ್ಸ್ ಆಫ್ ಇಂಡಿಯಾ ನಿಯತಕಾಲಿಕಕ್ಕೆ ಬಾಲ್ಯ ವಿವಾಹವನ್ನು ವಿರೋಧಿಸುವ ನಿಟ್ಟಿನಲ್ಲಿ ಲೇಖನಗಳನ್ನು ಬರೆಯಲು ಆರಂಭಿಸಿದ್ದಳು. ತನ್ನ 14ನೇ ಹುಟ್ಟುಹಬ್ಬಕ್ಕೆ ಮುನ್ನವೇ ಮಕ್ಕಳನ್ನು ಪಡೆಯಲು ಹೆಣ್ಣು ಮಕ್ಕಳನ್ನು ಒತ್ತಾಯಿಸುವ ಸಂಪ್ರದಾಯವನ್ನು ವಿರೋಧಿಸಿ ಆಕೆ ಬರೆದಳು. ಕನಸುಗಳ ಸಾವಿನ ಕುರಿತು ಹೆಣ್ಣು ಮಕ್ಕಳ ಅಂತಃಸತ್ವವನ್ನು ಹೀರಿ ಎಸೆಯುವ, ಅವರ ಬಾಲ್ಯವನ್ನು ಕಸಿಯುವ ಕುರಿತು ಆಕೆ ಬರೆದ ಲೇಖನಗಳು ಬುದ್ಧಿವಂತರ, ವಿಚಾರ ಜೀವಿಗಳ ಮನಸ್ಸನ್ನು ತಾಕಿದವು.

ಬಾಲ್ಯವಿವಾಹದಂತಹ ಕೆಟ್ಟ ಸಂಪ್ರದಾಯವು ನನ್ನ ಜೀವನದ ಎಲ್ಲಾ ಸಂತೋಷಗಳನ್ನು ಕಸಿದುಕೊಂಡಿತ್ತು ಎಂದು ಆಕೆ ಬರೆದಳು. ನನ್ನ ಬದುಕಿನಲ್ಲಿ ವಿವಾಹವು ನನ್ನ ವಿದ್ಯೆ ಮತ್ತು ಮಾನಸಿಕ ಬೆಳವಣಿಗೆಗೆ ಅಡ್ಡ ಬಂದಿತು ಎಂದು ಹೇಳಿದ ಆಕೆ ಅಂದು ಬ್ರಿಟನ್ ಸಾಮ್ರಾಜ್ಯವನ್ನು ಆಳುತ್ತಿದ್ದ ರಾಣಿ ವಿಕ್ಟೋರಿಯಾಗೆ ಪತ್ರ ಬರೆದು ತನಗೆ ನ್ಯಾಯ ದೊರಕಿಸಿಕೊಡಲು ಕೇಳಿಕೊಂಡಳು. ಹಿಂದೂ ಕಾನೂನಿನಲ್ಲಿ ವೈವಾಹಿಕ ವಯಸ್ಸನ್ನು ಹೆಣ್ಣು ಮಕ್ಕಳಿಗೆ 15 ವರ್ಷ ಮೇಲ್ಪಟ್ಟು ಹಾಗೂ ಗಂಡು ಮಕ್ಕಳಿಗೆ 20 ವರ್ಷ ಮೇಲ್ಪಟ್ಟ ವಯಸ್ಕರಿಗೆ ಮಾಡುವ ಮೂಲಕ ಬಾಲ್ಯ ವಿವಾಹವನ್ನು ನಿಷೇಧಿಸಲು ಕೋರಿಕೊಂಡಳು.ಬಾಲ್ಯ ವಿವಾಹವನ್ನು ನಿಷೇಧಿಸುವ ಮೂಲಕ ಹಿಂದೂ ಯುವತಿಯರಿಗೆ ಮಹದುಪಕಾರ ಮಾಡಿ ಎಂದು ಕೇಳಿಕೊಂಡಳು.

1888 ರಲ್ಲಿ ಅಂತಿಮವಾಗಿ ಒಂದು ಒಪ್ಪಂದಕ್ಕೆ ಬರಲಾಯಿತು.2 ಸಾವಿರ ರೂ ಹಣವನ್ನು ದಾದಾಜಿಗೆ ನೀಡುವ ಮೂಲಕ ಮದುವೆಯನ್ನು ರದ್ದುಗೊಳಿಸುವ ಹಾಗೂ ರುಕ್ಮಾಭಾಯಿಯ ಮೇಲೆ ಹೊರಿಸಿರುವ ಎಲ್ಲ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ಒಪ್ಪಂದವಾಗಿತ್ತದು. ಅಂತಿಮವಾಗಿ ಆಕೆ ಪಂಜರದಿಂದ ಹೊರ ಬಿಟ್ಟ ಪಕ್ಷಿಯಾದಳು.ಇಲ್ಲಿಗೆ ಆಕೆಯ ಕಥೆ ಮುಗಿಯಲಿಲ್ಲ. ಇಂಗ್ಲೆಂಡಿನ ಡಾಕ್ಟರ್ ಎಡಿತ್ ಪೆಚ್ಚಿ ಎಂಬ ತಜ್ಞ ವೈದ್ಯರ ಸಹಾಯ ಮತ್ತು ಸಹಕಾರದಿಂದ 1894 ರಲ್ಲಿ ಆಕೆ ವೈದ್ಯಕೀಯ ಪದವಿ ಪಡೆಯಲು ಇಂಗ್ಲೆಂಡಿಗೆ ತೆರಳಿದಳು. ಮಹಿಳೆಯರಿಗಾಗಿಯೇ ಇದ್ದ ಲಂಡನ್ ಸ್ಕೂಲ್ ಆಫ್ ಮೆಡಿಸಿನ್ ನಲ್ಲಿ ಆಕೆ ಓದಿ ವೈದ್ಯಕೀಯ ಪದವಿಯನ್ನು ಪಡೆದಳು. ಮುಂದೆ ಮರಳಿ ಭಾರತಕ್ಕೆ ಬಂದ ಆಕೆ ವೈದ್ಯಕೀಯ ಚಿಕಿತ್ಸಕಳಾಗಿ ಕರ್ತವ್ಯ ನಿರ್ವಹಿಸುವ ಮಹಿಳಾ ವೈದ್ಯೆ ಎಂದು ರಾಷ್ಟ್ರದ ಇತಿಹಾಸದಲ್ಲಿ ದಾಖಲಾದಳು.

ಮುಂದಿನ 35 ವರ್ಷಗಳ ಕಾಲ ರುಕ್ಮಭಾಯಿ ಸೂರತ್ ಮತ್ತು ರಾಜಕೋಟ್ಗಳಲ್ಲಿ ಮುಖ್ಯ ವೈದ್ಯಕೀಯ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಎಲ್ಲ ಜಾತಿ, ವರ್ಗಗಳ ಜನರ ಚಿಕಿತ್ಸೆಯನ್ನು ಕೈಗೊಂಡ ಆಕೆ ಸಾಕಷ್ಟು ಹೆಣ್ಣು ಮಕ್ಕಳಿಗೆ ನರ್ಸಿಂಗ್ ಕ್ಷೇತ್ರದಲ್ಲಿ ತರಬೇತಿ ನೀಡಿದಳು. ಮತ್ತೆ ನೂರಾರು ಹೆಣ್ಣು ಮಕ್ಕಳಿಗೆ ಶುಶ್ರೂಷೆ ಮತ್ತು ಸ್ವಚ್ಛತೆಯ ಕುರಿತು ತರಬೇತಿ ನೀಡಿ ಅವರನ್ನು ಆಯಕಟ್ಟಿನ ಸ್ಥಳಗಳಲ್ಲಿ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಿದರು. ಮಾರಣಾಂತಿಕ ಕಾಯಿಲೆಗಳು ದೇಶದಲ್ಲಿ ತಾಂಡವವಾಡುತ್ತಿದ್ದಾಗಲೂ ಆಕೆ ಸಾವಿಗೆ ಅಂಜದೆ, ರೋಗಕ್ಕೆ ಹಿಂಜರಿದು ಧೈರ್ಯಗೆಡದೆ ತಾನೇ ಮುಂಚೂಣಿಯಲ್ಲಿ ನಿಂತು ರೋಗಿಗಳನ್ನು ತಪಾಸಿಸಿ ಸೂಕ್ತ ಚಿಕಿತ್ಸೆ ನೀಡಿ ಗುಣಮುಖರನ್ನಾಗಿಸಿದಳು.

ಹೋರಾಟ ಆಕೆಯ ಬದುಕಿನ ಅವಿಭಾಜ್ಯ ಅಂಗವಾಗಿದ್ದು ತನ್ನ ವೃತ್ತಿ ಜೀವನದಿಂದ ನಿವೃತ್ತಿಯಾದ ನಂತರವೂ ಕೂಡ ಆಕೆ ಪರ್ದಾ ಪದ್ಧತಿಯನ್ನು ವಿರೋಧಿಸಿ ಹೆಣ್ಣು ಮಕ್ಕಳಲ್ಲಿ ಜಾಗೃತಿಯನ್ನು ಮೂಡಿಸಿದರು.

ಭಾರತೀಯ ಸಭ್ಯತೆಯ ಹೆಸರಿನಲ್ಲಿ ಹೆಣ್ಣು ಮಕ್ಕಳನ್ನು ಬಲವಂತದಿಂದ ಮನೆಯಲ್ಲಿ ಕೂಡಿ ಹಾಕುವುದನ್ನು ವಿರೋಧಿಸಿ ಆಕೆ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತಹ ಶಾಲೆಯನ್ನು ತೆರೆಯಲು ತನ್ನ ಮನೆಯನ್ನೇ ಬಿಟ್ಟುಕೊಟ್ಟಳು.

ಅಂದು ತನ್ನ ಇಪ್ಪತ್ತನೇ ವಯಸ್ಸಿನಲ್ಲಿ ರುಕ್ಮಬಾಯಿ ತೆಗೆದುಕೊಂಡ ಒಂದು ದಿಟ್ಟ ನಿರ್ಧಾರದ ಪರಿಣಾಮವಾಗಿ ತಲೆ ತಲೆಮಾರುಗಳ ಹೆಣ್ಣು ಮಕ್ಕಳು ನೆಮ್ಮದಿಯ ಬಾಲ್ಯವನ್ನು ಕಳೆಯಲು ಸಾಧ್ಯವಾಗಿದೆ.

1888 ರ ರುಕುಮಾಬಾಯಿ ಮೊಕದ್ದಮೆಯ ಐತಿಹಾಸಿಕ ತೀರ್ಪಿನ ಮೂರು ವರ್ಷಗಳ ನಂತರ 1891ರಲ್ಲಿ ಬ್ರಿಟಿಷ್ ಸರ್ಕಾರವು ' ದ ಏಜ್ ಆಫ್ ಕನ್ಸೆಂಟ್ ಆಕ್ಟ್' ಅನ್ನು ಜಾರಿ ಮಾಡಿತು. ನಿರ್ದಿಷ್ಟ ವಿಷಯಗಳ ಕುರಿತು ತೀರ್ಮಾನವನ್ನು ಕೈಗೊಳ್ಳುವ ಹಕ್ಕನ್ನು ನೀಡಲಾಯಿತು. ವೈವಾಹಿಕ ವಯಸ್ಸಿನ ಮಿತಿಯನ್ನು ಹೆಚ್ಚಿಸಲಾಯಿತು.

ರುಕ್ಮಾಭಾಯಿಯ ಮೊಕದ್ದಮೆಯು ಮೊಟ್ಟಮೊದಲ ಬಾಲ್ಯ ವಿವಾಹ ವಿರುದ್ಧದ ಪ್ರಕರಣ ಎಂದು ದಾಖಲಾಯಿತು, ಆದರೆ ಅದುವೇ ಕೊನೆಯ ಪ್ರಕರಣವಾಗಬೇಕಿತ್ತು... ದುರ್ದೈವವಶಾತ್ ಇಂದಿಗೂ ಕೂಡ ಬಾಲ್ಯ ವಿವಾಹ ತೆರೆ ಮರೆಯಲ್ಲಿ ನಡೆಯುತ್ತಲೇ ಇವೆ ಹಾಗೂ ಅದರ ಪರಿಣಾಮವಾಗಿ ಹೆಣ್ಣು ಮಕ್ಕಳು ಅಪ್ರಾಪ್ತ ವಯಸ್ಸಿನಲ್ಲಿ ಅನಿರೀಕ್ಷಿತ ಗರ್ಭ ಧರಿಸುವಿಕೆ, ಹೆರಿಗೆಯಲ್ಲಿ ಸಾವು, ತಾನೇ ಒಂದು ಮಗುವಾಗಿ ತನ್ನಲ್ಲಿ ಆ ಸಾಮರ್ಥ್ಯ ಇಲ್ಲದೆ ಇದ್ದಾಗಲೂ ಕೂಡ ತನ್ನದೇ ಮಗುವನ್ನು ಹೆರುವ, ಹೊರುವ ಜವಾಬ್ದಾರಿಯನ್ನು ನಿರ್ವಹಿಸುತ್ತಲೇ ಬಂದಿದ್ದಾರೆ. ಮತ್ತೆ ಕೆಲವರು ಸೋತು ಸತ್ತು ಹೋಗಿದ್ದಾರೆ. ಬದುಕಿದವರು ಸಾವನ್ನು ಗೆದ್ದರೂ ಕೂಡ ನಿರಂತರ ದೈಹಿಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ.

ಸಪ್ಟಂಬರ್ 25 1955 ರಲ್ಲಿ ತನ್ನ 90ನೇ ವಯಸ್ಸಿನಲ್ಲಿ ರುಕ್ಮಭಾಯಿ ವಯೋ ಸಹಜ ತೊಂದರೆಗಳಿಂದಾಗಿ ಮೃತರಾದರು. ನೂರು ಅವಮಾನಗಳನ್ನು ಸಹಿಸಿ, ವಲ್ಲದ ಗಂಡನನ್ನು ದೂರಸರಿಸಿ ತನ್ನಿಚೆಯ ಬದುಕನ್ನು

ರುಕ್ಮಾ ಬಾಯಿ ಬದುಕಿದರು. ತನ್ನ ದೇಶವನ್ನು ಆಳಿದ ಬ್ರಿಟಿಷ್ ಸಾಮ್ರಾಜ್ಯವನ್ನು ಪ್ರಶ್ನಿಸಿ ತನ್ನ ಹಕ್ಕನ್ನು ಗಳಿಸಿಕೊಂಡ ಆಕೆ ತನ್ನ ಬಾಯಿ ಮುಚ್ಚಿಸಲು ನೋಡಿದ ಭಾರತೀಯ ಸಮಾಜದ ಸನಾತನವಾದಿಗಳ ಬಾಯಿ ಮುಚ್ಚಿಸಿದರು. 2017ರಲ್ಲಿ ಗೂಗಲ್ ಸಂಸ್ಥೆಯು ರುಕ್ಮ ಬಾಯಿಯವರ ಗೌರವಾರ್ಥವಾಗಿ ಅವರ 153ನೇ ಹುಟ್ಟುಹಬ್ಬದ ದಿನದಂದು ಆಕೆಗಾಗಿ ಒಂದು ಡೂಡಲನ್ನು ಸೃಷ್ಟಿಸಿ ಪ್ರಸಾರ ಮಾಡಿತು.

ಆಕೆಯದ್ದೇ ಆದ ಪರಂಪರೆಯನ್ನು ಬಿಟ್ಟು ಹೋಗಿರುವ ರುಕ್ಮ ಬಾಯಿ ಪ್ರತಿ ಭಾರತೀಯ ಶಾಲೆ ಕಾಲೇಜುಗಳ ಬಾಲಕಿಯರ ಕಣ್ಣಿನಲ್ಲಿ ಶಿಕ್ಷಣದ ಕನಸನ್ನು ತುಂಬಲು ಸಹಾಯಕವಾಗಿದೆ. ತನ್ನ ಭವಿಷ್ಯವನ್ನು ತಾನೇ ನಿರ್ಧರಿಸುವ ದಾರಿ ತೋರಿದ್ದಾಳೆ. ಕೇವಲ ವಿವಾಹ ಮಾಡಿಕೊಂಡು ವಧುವಾಗಿರಬೇಕು ಎನ್ನುವ ಸಾಮಾಜಿಕ ಭಾವವನ್ನು ಪ್ರಶ್ನಿಸುವ, ಪ್ರತಿಯೊಬ್ಬ ವಧುವು ತನ್ನ ಬಾಯಿ ಮುಚ್ಚಿಸುವ, ಸಾಮಾಜಿಕ ಸಂಪ್ರದಾಯಗಳನ್ನು ವಿರೋಧಿಸುವ ಮೂಲಕ ತನ್ನದೇ ಆದ ಛಾಪು ಮೂಡಿಸಿದ್ದಾರೆ. ತನ್ನ ಮುಂದಿನ ಬದುಕನ್ನು ಮಹಿಳೆಯರ ಮತ್ತು ಮಕ್ಕಳ ಏಳಿಗೆಗಾಗಿ ಮುಡುಪಿಟ್ಟ ಆಕೆ ಭಾರತ ದೇಶದ ಎಲ್ಲ ಯುವತಿಯರ ಪಾಲಿನ ಸ್ತ್ರೀ ಕುಲ ತಿಲಕವಾಗಿದ್ದಾಳೆ.



**ವೀಣಾ ಹೇಮಂತ್ ಗೌಡ ಪಾಟೀಲ್**
**ಮುಂಡರಗಿ ಗದಗ್**

# ರಾಣಿ ಕೆಳದಿ ಚೆನ್ನಮ್ಮಾಜಿ: ಧೈರ್ಯ, ಧರ್ಮ ಮತ್ತು ದಕ್ಷ ಆಡಳಿತದ ವೀರ ವನಿತೆ!



**ಕನ್ನಡ ತಾಯಿ ಶ್ರೀ ಭುವನೇಶ್ವರಿ**
**ಕನ್ನಡ ಕುಲಶಕ್ತಿ ರಾಜೇಶ್ವರಿ**
**ಕನ್ನಡ ತಾಯಿ ಶ್ರೀ ಭುವನೇಶ್ವರಿ**
**ಕನ್ನಡ ಕುಲಶಕ್ತಿ ರಾಜೇಶ್ವರಿ**
**ಕನ್ನಡ ತಾಯಿ ಶ್ರೀ ಭುವನೇಶ್ವರಿ?**
**ಮುನಿಶೃಂಗ ಹನುಮ ರಾಮ ಮೆರೆದ ನಾಡಿದು**
**ಮೌನಿ ವಿದ್ಯಾರಣ್ಯ ಕಡೆದ ದಿವ್ಯ ಗುಡಿದಿದು**
**ಮಧ್ವ ಬಸವ ಅಲ್ಲಮಾದ್ಯ ಮಹಿಮರೆಲ್ಲರು**
**ಸಧರ್ಮ ಕೀರ್ತಿ ನೀತಿ ನಡೆದೇ ಗಿಂಬು ಕೊಟ್ಟರು**
**ಕನ್ನಡ ತಾಯಿ ಶ್ರೀ ಭುವನೇಶ್ವರಿ**
**ಪುಲಕೇಶಿ ಹೊಯ್ಸಳಾದಿ ಹಕ್ಕಬುಕ್ಕರು**
**ಕಲಿಗಳಾಗಿ ಗಂಡುನಾಡೆನಿಸಿ ಮೆರೆದರು**
**ದಾನ ಶೀಲ ಕ್ಷಮಾ ಸ್ಥೈರ್ಯ ಸಹನ ತ್ಯಾಗವು**
**ಜ್ಞಾನ ಭಕ್ತಿಯೊಡನೆ ಮೈಗೂಡಿ ಬಂದವು**
**ಕೆಳದಿಯ ಚೆನ್ನಮ್ಮ ಕನ್ನಡದ ಹೆಣ್ಣು ಹುಲಿ. ಶತ್ರು** ಪಾಳಯಕ್ಕೆ ಬೆಂಕಿಚೆಂಡಿನಂತಿದ್ದ, ವೀರಾಧಿವೀರರನ್ನೇ ಯುದ್ದರಂಗದಲ್ಲಿ ಮಂಡಿ ಊರುವಂತೆ ಮಾಡಿದ, ಔರಂಗಜೇಬನಂಥ ಸುಲ್ತಾನನನ್ನೇ ಕಂಗಾಲಾಗುವಂತೆ ಮಾಡಿ ಪ್ರಾಣಭಿಕ್ಷೆ ನೀಡಿದ ವೀರವನಿತೆ!

ಕರಾವಳಿಯ ಕೆಳದಿ ಸಾಮ್ರಾಜ್ಯವು ಕರ್ನಾಟಕದ ಇತಿಹಾಸದಲ್ಲಿ ಮಹಿಳಾ ಪರಾಕ್ರಮದ ಅತ್ಯುನ್ನತ ಅಧ್ಯಾಯಗಳಲ್ಲಿ ಒಂದು. ಈ ಅಧ್ಯಾಯದ ವೀರ ರಮಣಿಯಾಗಿದ್ದವರು ರಾಣಿ ಚೆನ್ನಮ್ಮಾಜಿ (ಆಳ್ವಿಕೆ: ಕ್ರಿ.ಶ. 1671?1696) ? ಈಕೆ ಕೇವಲ ಶೂರ ರಾಣಿ ಅಲ್ಲ, ಬುದ್ಧಿವಂತ ಆಡಳಿತಗಾರ್ತಿ, ಧಾರ್ಮಿಕ ಸಹಿಷ್ಣುತೆಯ ಸಂಕೇತ ಮತ್ತು ರಾಜತಾಂತ್ರಿಕತೆಯ ಪ್ರತೀಕ!

ರಾಜಕೀಯ ಸಂಕಟದ ಮಧ್ಯೆ ಉದಯಿಸಿದ ನಾಯಕಿ

ಚೆನ್ನಮ್ಮಾಜಿಯವರ ಪತಿ ರಾಜ ಸೋಮಶೇಖರ ನಾಯಕರ ಅಕಾಲಿಕ ಮರಣದ (ಕ್ರಿ.ಶ. 1677) ನಂತರ ಕೆಳದಿ ಸಂಸ್ಥಾನದಲ್ಲಿ ಅರಾಜಕತೆ ತಲೆದೋರಿತು. ಪಕ್ಕದ ಪಾಳೇಗಾರರು ಮತ್ತು ವಿರೋಧಿಗಳು ಅಧಿಕಾರಕ್ಕಾಗಿ ಹೊಂಚು ಹಾಕುತ್ತಿದ್ದ ಸಂದರ್ಭದಲ್ಲಿ, ಚೆನ್ನಮ್ಮಾಜಿಯವರು ದೃಢ ಹೃದಯದಿಂದ ಆಡಳಿತದ ಹೊಣೆ ಹೊತ್ತರು.

ಅವರು ರಾಜ್ಯದಲ್ಲಿ ಶಾಂತಿ, ಶಿಸ್ತಿನ ಆಡಳಿತ ಮತ್ತು ನ್ಯಾಯವನ್ನು ಪುನಃ ಸ್ಥಾಪಿಸಿದರು. ಅವರ ಸಹಾಯಕರಾದ ಗುರು ಬಸಪ್ಪದೇವ, ದಂಡನಾಯಕರಾದ ಕೃಷ್ಣಪ್ಪಯ್ಯ ಮತ್ತು ತಿಮ್ಮರಸಯ್ಯ ಮುಂತಾದ ನಿಷ್ಠಾವಂತ ಮಂತ್ರಿಗಳು ಆಕೆಗೆ ವಿಶ್ವಾಸದ ಹೆಗಲಾಗಿದ್ದರು.

ಆಕೆಯ ದೃಷ್ಟಿ ಕೇವಲ ರಾಜ್ಯ ರಕ್ಷಣೆಯಲ್ಲ, ಮುಂದಿನ ಪೀಳಿಗೆಗೆ ರಾಜ್ಯದ ನಿರ್ವಹಣಾ ಸಾಮರ್ಥ್ಯವನ್ನು ನೀಡುವತ್ತವೂ ಇತ್ತು. ಮಕ್ಕಳಿರದ ಕಾರಣ, ಬಸಪ್ಪ ಎಂಬ ಯುವಕನನ್ನು ದತ್ತು ಸ್ವೀಕರಿಸಿ, ಆತನಿಗೆ ಯುದ್ಧ ಹಾಗೂ ಆಡಳಿತ ಶಿಕ್ಷಣ ನೀಡಿ, 1696ರಲ್ಲಿ



ಕೆಳದಿ ಬಸವಭೂಪಾಲನೆಂಬ ಹೆಸರಿನಲ್ಲಿ ಪಟ್ಟಾಭಿಷೇಕ ಮಾಡಿದರು. ಇದು ಆಕೆಗೆ ರಾಜ್ಯದ ಸ್ಥಿರತೆಯತ್ತ ಇದ್ದ ಒಲವಿನ ಸೂಚನೆಯಾಗಿತ್ತು.

ಔರಂಗಜೇಬನ ವಿರುದ್ಧದ ಪರಾಕ್ರಮ

ರಾಣಿ ಚೆನ್ನಮ್ಮಾಜಿಯವರ ಹೆಸರು ಆಚಂದ್ರಾರ್ಕ! ಕಾರಣ ಅವರು ಹೆಣ್ಣಾಗಿ, ಮೊಘಲ್ ಚಕ್ರವರ್ತಿ ಔರಂಗಜೇಬನ ವಿರುದ್ಧ ತೋರಿದ ಅಸಾಧಾರಣ ಶೌರ್ಯವು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲಾಗಿದೆ.


ಮರಾಠ ಸಮ್ರಾಟ ಛತ್ರಪತಿ ಶಿವಾಜಿಯ ಪುತ್ರ ರಾಜಾರಾಮ ಔರಂಗಜೇಬನ ಸೇನೆಯಿಂದ ತಪ್ಪಿಸಿಕೊಂಡು ಕೆಳದಿಗೆ ಆಶ್ರಯ ಕೋರಿ ಬಂದಾಗ, ಬಹುತೇಕ ದಕ್ಷಿಣದ ರಾಜರು ಔರಂಗಜೇಬನ ಕೋಪಕ್ಕೆ ಹೆದರಿ ಆಶ್ರಯ ನೀಡಲು ನಿರಾಕರಿಸಿದರು. ಆದರೆ ಚೆನ್ನಮ್ಮಾಜಿಯವರು ಮಾತ್ರ ನಿರ್ಭೀತಿಯಿಂದ ರಾಜಾರಾಮನಿಗೆ ಆಶ್ರಯ ನೀಡಿದರು, ಅವನಿಗೆ ರಕ್ಷಣಾ ವಲಯವನ್ನು ಕಲ್ಪಿಸಿದರು.

ಔರಂಗಜೇಬನು ಕೋಪಗೊಂಡು ದೊಡ್ಡ ಮೊಘಲ್ ಸೇನೆಯನ್ನು ಕೆಳದಿಯ ಮೇಲೆ ಕಳುಹಿಸಿದನು. ಚೆನ್ನಮ್ಮಾಜಿಯವರು ಬಿದನೂರು ಕೋಟೆಯನ್ನು ತಮ್ಮ ಸೈನ್ಯದ ಕೇಂದ್ರವಾಗಿ ಮಾಡಿ ಕೋಟೆಯ ಭದ್ರತೆಯನ್ನು ಬಲಪಡಿಸಿದರು. ತಿಂಗಳುಗಳ ಕಾಲ ನಡೆದ ಕಠಿಣ ಯುದ್ಧದಲ್ಲಿ, ಚೆನ್ನಮ್ಮಾಜಿಯ ಸೈನ್ಯವು ಅಪ್ರತಿಮ ಧೈರ್ಯ ತೋರಿತು. ಕೊನೆಗೆ ಮೊಘಲ್ ಸೈನ್ಯವು ಹಿಮ್ಮೆಟ್ಟಬೇಕಾಯಿತು. ಈ ಯುದ್ಧದ ನಂತರ, ಔರಂಗಜೇಬನು ಶಾಂತಿ ಒಪ್ಪಂದಕ್ಕೆ ಬಂದು ಕೆಳದಿಯ ಪ್ರಭುತ್ವವನ್ನು ಮಾನ್ಯಗೊಳಿಸಬೇಕಾಯಿತು.

ಈ ವಿಜಯವು ಕೇವಲ ಕೆಳದಿಯ ಸ್ವಾತಂತ್ರ್ಯವನ್ನು ಕಾಪಾಡದೆ, ಮರಾಠರ ಪ್ರತಿರೋಧ ಚಳವಳಿಯ ಜೀವಾಳವನ್ನೂ ಉಳಿಸಿತು. ಇದರಿಂದ ಚೆನ್ನಮ್ಮಾಜಿಯವರು ದಕ್ಷಿಣ ಭಾರತದ ರಾಜಕೀಯ ಇತಿಹಾಸದಲ್ಲಿ ಸ್ವಾತಂತ್ರ್ಯ ಸಂರಕ್ಷಣೆಯ ಸಂಕೇತರಾಗಿ ವಿಜೃಂಭಿಸಿದ್ದಾರೆ. ಆಡಳಿತ ಮತ್ತು ರಾಜತಾಂತ್ರಿಕ ಕೌಶಲ್ಯದ ಬಗ್ಗೆ ಹೇಳುವುದಾದರೆ, ರಾಣಿ ಚೆನ್ನಮ್ಮಾಜಿಯವರ ಆಡಳಿತವು ನ್ಯಾಯ, ಶಿಸ್ತು ಮತ್ತು ಪ್ರಜಾಪ್ರೇಮದ ಆಧಾರದಲ್ಲಿತ್ತು.

ಅವರು ನಿಷ್ಠಾವಂತ ಸಲಹೆಗಾರರ ಸಹಾಯದಿಂದ ಸರ್ಕಾರದ ವ್ಯವಹಾರಗಳನ್ನು ಸರಳ ಮತ್ತು ಶಿಸ್ತಿನಿಂದ ನಡೆಸಿದರು.

ರಾಜ್ಯದಲ್ಲಿ ತೆರಿಗೆ ವ್ಯವಸ್ಥೆ ಸುಧಾರಣೆ, ಸೇನಾ ಶಕ್ತಿ ಪುನರ್ವ್ಯವಸ್ಥೆ ಮತ್ತು ಕಾನೂನಿನ ವಿಚಾರವಾಗಿ ಕಟುಶಾಸನಗಳು ಜಾರಿಗೆ ಬಂದವು.



ಮೈಸೂರು ರಾಜ್ಯದ ಚಿಕ್ಕದೇವರಾಜ ಒಡೆಯರ ವಿಸ್ತರಣೆ ಪ್ರಯತ್ನವನ್ನು ಅವರು ಯಶಸ್ವಿಯಾಗಿ ತಡೆದು, ಕಡೂರು, ಬಾಣಾವರ, ಹಾಸನ, ಬೇಲೂರು ಪ್ರದೇಶಗಳನ್ನು ಮರಳಿ ಪಡೆದುಕೊಂಡರು.

ಅವರ ಸೇನಾ ತಂತ್ರಗಳು, ಕೋಟೆಯ ಬಲಪಡಿಸುವ ಕ್ರಮಗಳು ಮತ್ತು ರಾಜತಾಂತ್ರಿಕ ಮಾತುಕತೆಗಳು ಆಕೆಯ ಬುದ್ಧಿವಂತಿಕೆಯ ಪ್ರತೀಕ.

ಪೋರ್ಚುಗೀಸರೊಂದಿಗೆ ಮೆಣಸು ಮತ್ತು ಅಕ್ಕಿ ವ್ಯಾಪಾರದ ಒಪ್ಪಂದಗಳು ಆಕೆಯ ಆರ್ಥಿಕ ದೂರದೃಷ್ಟಿಯನ್ನು ತೋರಿಸುತ್ತವೆ.

ಧಾರ್ಮಿಕ ಸಹಿಷ್ಣುತೆ ಮತ್ತು ಸಾಮಾಜಿಕ ನವಚೇತನ

ಚೆನ್ನಮ್ಮಾಜಿಯವರು ಧಾರ್ಮಿಕ ವಿಚಾರಗಳಲ್ಲಿ ವಿಶಾಲ ಮನಸ್ಸಿನವರು. ಶೈವ ಪಂಥದ ಅನುಯಾಯಿಯಾಗಿದ್ದರೂ, ಎಲ್ಲ ಧರ್ಮಗಳಿಗೆ ಸಮಾನ ಗೌರವ ನೀಡಿದರು.

ಹಿಂದೂ ಧರ್ಮಕ್ಕೆ ಬೆಂಬಲ: ತಮ್ಮ ಪತಿಯ ನೆನಪಿನಲ್ಲಿ ಅಗ್ರಹಾರಗಳನ್ನು ನಿರ್ಮಿಸಿದರು; ತಮ್ಮ ಹೆಸರಿನಲ್ಲಿ ಚೆನ್ನಮ್ಮಾಂಬಪುರ ಎಂಬ ಅಗ್ರಹಾರವನ್ನು ಸ್ಥಾಪಿಸಿದರು.

ಮಠ ಮತ್ತು ದೇವಸ್ಥಾನಗಳಿಗೆ ದಾನ: ಮೂಕಾಂಬಿಕಾ, ದತ್ತಪೀಠ ಮತ್ತು ಚಂದ್ರದ್ರೋಣ ಪರ್ವತದ ದೇವಾಲಯಗಳಿಗೆ ಅನೇಕ ದಾನಗಳನ್ನು ನೀಡಿದರು.

ಕ್ರಿಶ್ಚಿಯನ್ ಧರ್ಮಕ್ಕೆ ಸಹಿಷ್ಣುತೆ: ಪೋರ್ಚುಗೀಸರಿಗೆ ಮಿರ್ಜಾನ್, ಹೊನ್ನಾವರ, ಚಂದ್ರವರ ಮತ್ತು ಕಲ್ಯಾಣಪುರ ಪ್ರದೇಶಗಳಲ್ಲಿ ಚರ್ಚು ನಿರ್ಮಾಣಕ್ಕೆ ಅನುಮತಿ ನೀಡಿದರು.

ಈ ಕ್ರಮಗಳು ಆಕೆಯ ಸರ್ವಧರ್ಮ ಸಮನ್ವಯ ನೀತಿಗೆ ಸ್ಪಷ್ಟ ಸಾಕ್ಷಿಯಾಗಿವೆ.

ಆರ್ಥಿಕ ಮತ್ತು ಪ್ರಾದೇಶಿಕ ಪ್ರಗತಿ ವಿಚಾರವಾಗಿ,

ರಾಣಿ ಚೆನ್ನಮ್ಮಾಜಿಯವರು ಕರಾವಳಿ ವ್ಯಾಪಾರವನ್ನು ಸುರಕ್ಷಿತಗೊಳಿಸಿ ರಾಜ್ಯದ ಆರ್ಥಿಕತೆಯನ್ನು ಬಲಪಡಿಸಿದರು.

ಕರಾವಳಿ ಬಂದರುಗಳ ಮೂಲಕ ಮಸಾಲೆ, ಅಕ್ಕಿ ಮತ್ತು ವಸ್ತ್ರಗಳ ವ್ಯಾಪಾರ ನಡೆಸುವಂತೆ ವಾಣಿಜ್ಯ ನೀತಿ ರೂಪಿಸಿದರು.

ಅವರ ಕಾಲದಲ್ಲಿ ಕೆಳದಿ ಪ್ರದೇಶದ ಕೃಷಿ, ಕೈಗಾರಿಕೆ ಮತ್ತು ನೀರಾವರಿ ವ್ಯವಸ್ಥೆಗಳು ಉತ್ತಮಗೊಂಡುವು.

ರಾಣಿ ಚೆನ್ನಮ್ಮಾಜಿಯವರು ಕೇವಲ ಕತ್ತಿಯ ವೀರತ್ವದಿಂದಷ್ಟೇ ಅಲ್ಲ, ನ್ಯಾಯಪರ ಆಡಳಿತ, ಧಾರ್ಮಿಕ ಸಹಿಷ್ಣುತೆ ಮತ್ತು ಪ್ರಜೆಗಳ ಹಿತದೃಷ್ಟಿಯಿಂದ ಅಮರರಾದರು.

ಅವರ ಧೈರ್ಯದಿಂದ ಮರಾಠರು ಮತ್ತೊಮ್ಮೆ ಔರಂಗಜೇಬನ ವಿರುದ್ಧ ಹೋರಾಡುವ ಉತ್ಸಾಹ ಪಡೆದರು.

ಆಕೆ ದಕ್ಷಿಣ ಭಾರತದ ಸ್ವಾತಂತ್ರ್ಯ ಮತ್ತು ಮಾನವೀಯ ಮೌಲ್ಯಗಳ ಪ್ರತೀಕವಾಗಿ ಇಂದಿಗೂ ಜನಮಾನಸದಲ್ಲಿ ಅಜರಾಮರರಾಗಿದ್ದಾರೆ.

ಇಂದಿನ ಕರ್ನಾಟಕ ಸರ್ಕಾರವು ಪ್ರಜೆಗಳ ಜೀವ ಉಳಿಸಲು ಸಾಹಸ ಕೈಗೊಂಡವರಿಗೆ ನೀಡುವ ?ರಾಣಿ ಚೆನ್ನಮ್ಮ ಪ್ರಶಸ್ತಿ? ಅವರ ಸ್ಮರಣಾರ್ಥವಾಗಿದೆ ?

ಇದು ಅವರ ಶೌರ್ಯ, ಮಾನವೀಯತೆ ಮತ್ತು ಸೇವಾಭಾವದ ದ್ಯೋತಕವಾಗಿದೆ.

ಒಬ್ಬ ರಾಣಿಯ ಶೌರ್ಯ ಕೇವಲ ಖಡ್ಗ ಹಿಡಿದು ಹೋರಾಡಿದಾಗ ಮಾತ್ರ ಅಲ್ಲ,

ತನ್ನ ಜನರ ಹಿತಕ್ಕಾಗಿ ತಾಳಿದ ನಿರ್ಧಾರಗಳ ತುಲನೆಯಿಂದಲೂ ಅಳೆಯಲ್ಪಡುತ್ತದೆ.?

ಅಂಥ ಧೈರ್ಯವಂತೆಯಾದ ಕೆಳದಿ ರಾಣಿ ಚೆನ್ನಮ್ಮಾಜಿ, ಕರ್ನಾಟಕದ ಇತಿಹಾಸದ ನಭದಲ್ಲಿ ಸದಾ ಬೆಳಗುವ ಮಿನುಗುತಾರೆ.ಈಕೆಯ ಸಾಹಸವನ್ನು ಸ್ಮರಿಸಿ ನಮ್ಮ ಗೌರವವನ್ನು ತಿಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಜೈ ಭಾರತ ಜನನಿ ಕನ್ನಡಾಂಬೆ! ಜೈ ಕನ್ನಡಾಂಬೆಯ ಜನನ ಚೆನ್ನಮ್ಮಾಜಿ! ವಂದನೆಗಳು.



**ರೂಪ ಮಂಜುನಾಥ**
**ಹೊಳೆನರಸೀಪುರ**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,